| 1.ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ? | ತಾಳೆಯಾಗಿರುತ್ತದೆ. |
| 2.ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ? | ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಲಾಗಿದೆ. |
| 3.ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣ ವಾಗಿದೆಯೇ? | ಕಾಯ್ದೆಗನುಗುಣವಾಗಿದೆ. |
| 4.ಸದರಿ ಹೂಡಿಕೆಗಳ ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ? | ಹೂಡಿಕೆಗಳ ಮೇಲಿನ ಲಾಭಾಂಶ ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿರುತ್ತದೆ. |
| 5.ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಸಂಘದಿಂದ ತೊಡಗಿಸಿದ ಠೇವಣಿಗಳ ಮೇಲಿನ ಬಡ್ಡಿ ವಿವರ :<br><br>**ವಿನಿಯೋಗಗಳ ಮೇಲೆ ಟಿಪ್ಪಣಿ:** ಸಂಸ್ಥೆಯು ಎ.ಪಿ.ಎಂ.ಸಿ. ಯವರಿಂದ ಲೈಸನ್ಸ್ ಪಡೆಯುವ ಸಲುವಾಗಿ ಶಾಖೆಗಳಿಗೆ ಸಂಬಂಧಿಸಿದಂತೆ ಆಯಾ ಶಾಖೆಗಳಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದ್ದು, ಪ್ರಸಕ್ತ ಸಾಲಿನ ಅಂತ್ಯಕ್ಕೆ ಒಟ್ಟು ರೂ.6,11,006.00ಗಳ ಮೊತ್ತದ ಠೇವಣಿ ಪತ್ರಗಳನ್ನು ಆಧಾರವಾಗಿ ಸಂಬಂಧಿಸಿದ ಎ.ಪಿ.ಎಂ.ಸಿ.ಯವರಿಗೆ ನೀಡ ಲಾಗಿದೆ. ಅಲ್ಲದೆ ಜಿಲ್ಲಾ ಸಹಕಾರ ಬ್ಯಾಂಕ್ ಆಪದ್ಧನ ನಿಧಿ ವಿನಿಯೋಗ ರೂ.2,77,80,000.00, ಯೂನಿಯನ್ ಬ್ಯಾಂಕ್ ಆಪದ್ಧನ ನಿಧಿ ರೂ.18,00,00,000.00 ಮತ್ತು ಆಕ್ಸಿಸ್ ಬ್ಯಾಂಕ್ ಆಪದ್ಧನ ನಿಧಿ ರೂ.5,00,00,000.00 ಇದ್ದು ಈ ವಿನಿಯೋಗದ ಮೇಲೆ ರೂ.2,41,59,917.00 ಬಡ್ಡಿ ಜಮಾ ಬಂದಿರುತ್ತದೆ. ಕಳೆದ ಸಾಲಿನ ಅಂತ್ಯಕ್ಕೆ ಒಟ್ಟು ಹೂಡಿಕೆಗಳು ರೂ.20.34 ಕೋಟಿ ಇದ್ದು, ವರದಿ ಸಾಲಿನ ಅಂತ್ಯಕ್ಕೆ ರೂ.26.34 ಕೋಟಿ ಆಗಿದ್ದು ಹೂಡಿಕೆ ಯಲ್ಲಿ ಶೇ.29.50 ಏರಿಕೆಯಾಗಿರುತ್ತದೆ. ಮೇಲೆ ತಿಳಿಸಿದ ಹೂಡಿಕೆಯಲ್ಲಿ ರೂ.50,00,000.00 ಶಿವಮೊಗ್ಗ ಶಾಖೆ ಯಲ್ಲಿ ಪಾರಿತೋಷಕ ಠೇವಣಿ ಎಂದು ನಿಗದಿತ ಠೇವಣಿ ಯಲ್ಲಿ ಹೂಡಿಕೆ ಮಾಡಲಾಗಿದ್ದು, ಇದನ್ನು ಹೂಡಿಕೆ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸದರಿ ಹೂಡಿಕೆ ಯನ್ನು ವ್ಯವಹಾರದಿಂದ ಹೊರತುಪಡಿಸಿ ಅನುಸೂಚಿತ ಬ್ಯಾಂಕಿನಲ್ಲಿ ಹೂಡುವುದು ಸೂಕ್ತವಾಗಿರುತ್ತದೆ. |

**ಸಮಜಾಯಿಷಿ**: ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು.

**ಇತರೆ ಸಂಘ ಸಂಸ್ಥೆಗಳಲ್ಲಿ ಪಾಲು ಬಂಡವಾಳ:** ಸಂಸ್ಥೆಯು ದಿನಾಂಕ:31–03–2025ರ ಅಂತ್ಯಕ್ಕೆ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಆಸ್ತಿ ಕಡೆ ತೋರಿಸಿರುವಂತೆ ರೂ.53,91,100–00 ಗಳ ಪಾಲು ಬಂಡವಾಳವನ್ನು ವಿವಿಧ ಸಂಸ್ಥೆಗಳಲ್ಲಿ ಹೊಂದಿರುತ್ತದೆ. ಮೇಲ್ಕಂಡ ಪಾಲು ಬಂಡವಾಳಗಳ ಪೈಕಿ ಈ ಕೆಳಕಂಡ ಸಂಸ್ಥೆಗಳಿಂದ ಮಾತ್ರ ಲಾಭಾಂಶ ಬಂದಿದ್ದು, ಉಳಿದ ಯಾವುದೇ ಸಂಘ ಸಂಸ್ಥೆಗಳಲ್ಲಿ ತೊಡಗಿಸಿದ ಪಾಲು ಬಂಡವಾಳ ಸಂಬಂಧ ಯಾವುದೇ ಲಾಭಾಂಶ ಬಂದಿರುವುದಿಲ್ಲ.

| ಕ್ರ. ಸಂ | ಸಂಸ್ಥೆಯ ಹೆಸರು | ಪಾಲು ಬಂಡವಾಳ | ಬಂದ ಲಾಭಾಂಶ |
|---|---|---|---|
| 1 | ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ | 45,000 | 6,750 |
| 2 | ಇಫ್ಕೋ, ನವದೆಹಲಿ | 10,000 | 2,000 |
| 3 | ಕ್ಯಾಂಪ್ಕೋ ಮಂಗಳೂರು | 25,00,000 | – |
| 4 | ಹಾಪ್ಸ್‌ಕೋಸ್ ನಿ., ಹಾಸನ | 1,000 | 140 |
| 5 | ಕೇಂದ್ರ ಉಗ್ರಾಣ ಸಂಸ್ಥೆ | 5,000 | 6,959 |
| 6 | ಜಿಲ್ಲಾ ಸಹಕಾರ ಬ್ಯಾಂಕ್ | 1,05,000 | 3,183 |
| 7 | ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ., | 25,000 | – |
| 8 | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ | 1,00,000 | 20,000 |
| 9 | ಕೋಮಾರ್ಕ್ ಹಾಸನ | 25,000 | – |

<table>
<tr><td></td><td>
<table>
<tr><td>10</td><td>ಬೆಳಗಾಂ ಕ್ರೀಡಾ ಪ್ರೋತ್ಸಾಹ & ಅಭಿವೃದ್ಧಿ ಸಹಕಾರ ನಿ.</td><td>50,000</td><td>–</td></tr>
<tr><td>11</td><td>ಜಿಲ್ಲಾ ಸಹಕಾರ ಮಾರಾಟ ಮಂಡಳಿ</td><td>25,000</td><td>–</td></tr>
<tr><td>12</td><td>ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ</td><td>25,00,000</td><td>–</td></tr>
<tr><td>13</td><td>ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ</td><td>100</td><td>–</td></tr>
<tr><td></td><td>ಒಟ್ಟು</td><td>53,91,100</td><td>39,032</td></tr>
</table>
</td></tr>
<tr><td>6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಯೆ? ಹೊಂದಿದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು.</td><td>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿರುವುದಿಲ್ಲ.</td></tr>
<tr><td>7. ಸಂಘವು ವಿನಿಯೋಗಿಸಿರುವ ಸಂಸ್ಥೆ/ ಬ್ಯಾಂಕುಗಳು ನಿಷ್ಕ್ರಿಯ ಅಥವಾ ಅವಸಾನ ಗೊಂಡಿದ್ದಲ್ಲಿ ಹೂಡಿಕೆಗಳನ್ನು ಹಿಂಪಡೆಯಲು ಸೂಚಿಸುವುದು.</td><td>ಸಂಘವು ಈ ಮೇಲೆ ಮಾಡಿದ ಹೂಡಿಕೆಗಳಲ್ಲಿ ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ ನಿ. ಶಿವಮೊಗ್ಗ ಇವರಲ್ಲಿ ಹೂಡಿದ ರೂ.25,00,000.00 ರ ಮೇಲೆ ಹೂಡಿಕೆ ದಿನದಿಂದ ಲಾಭಾಂಶ ಪಾವತಿಯಾಗದೆ ಇರುವುದನ್ನು ಒಳಗೊಂಡು ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆ ಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ.<br><br>ಸಮಜಾಯಿಷಿ: ಪರಿಶೀಲಿಸಿ, ಅಗತ್ಯ ಕ್ರಮವಿಡಲಾಗುವುದು.</td></tr>
</table>

| | |
|---|---|
| 8. ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ | ಕ್ರಮ ಸಂಖ್ಯೆ 5 ರಲ್ಲಿ ವಿವರಿಸಿದಂತೆ ಆದಾಯ ಬಾರದೇ ಇರುವ ಖಾತೆಗಳನ್ನು ಸಮಾಪ್ತಿಗೊಳಿಸಲು ಸೂಚಿಸಿದೆ.<br><br>**ಸಮಜಾಯಿಷಿ: ಪರಿಶೀಲಿಸಿ, ಅಗತ್ಯ ಕ್ರಮವಿಡಲಾಗುವುದು.** |
| 9. ಕೋರಿಕೆಯ ಮೇರೆಗೆ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಸಂಘವು ಯಾವುದೇ ಹೂಡಿಕೆಯನ್ನು ಮರಳಿ ಪಡೆಯಲು ಈವರೆಗೆ ಕೋರಿಕೆ ನೀಡಿಲ್ಲ. ಹಾಗಾಗಿ ಯಾವುದೇ ಅವಕಾಶ ಕಲ್ಪಿಸಲಾಗಿಲ್ಲ. |
| 10. ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯ ಇದೆಯೇ? ಲೆಕ್ಕಪರಿಶೋಧನಾ ಕಾಲಕ್ಕೆ ಪರಿ ಶೀಲಿಸಿ ಪ್ರತಿಯೊಂದು ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸುವುದು. | ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯವಿರುತ್ತವೆ. |

**17) ಹೊರಗಿನಿಂದ ಪಡೆದ ಸಾಲಗಳು, ಮುಂಗಡಗಳು ಹಾಗೂ ಸರಕಾರದ ಸಾಲಗಳು:**

| | |
|---|---|
| ಸಂಘವು ಹೊರಗಿನಿಂದ ಪಡೆದ ಸಾಲಗಳು/ ಮುಂಗಡಗಳು ಉಪನಿಯಮದ ಮಿತಿಯಲ್ಲಿ ಇರುವುದರ ಬಗ್ಗೆ ಅಥವಾ ಮಿತಿಮೀರಿ ಇರುವ ಬಗ್ಗೆ ಅಂಕಿ–ಅಂಶಗಳಂತೆ ವಿಮರ್ಶಿಸುವುದು. | ಸಹಕಾರಿಯ ಬೈಲಾ ಕ್ರಮ ಸಂಖ್ಯೆ 9ರ ಪ್ರಕಾರ ಸಂಘದ ಸಾಮಾನ್ಯ ನಿಕಾಯ ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು, ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲಗಳ ಒಟ್ಟು ಮೊತ್ತ, ಸಂಘದ ಪಾವತಿಯಾದ ಷೇರುಧನ, ಸಂಚಿತ ಕಾಯ್ದಿರಿಸಿದ ನಿಧಿ ಮತ್ತು ಕಟ್ಟಡ ನಿಧಿಯ ಒಟ್ಟು ಮೊತ್ತದಲ್ಲಿ, ಕೂಡಿ ಬಿದ್ದ ನಷ್ಟವಿದ್ದಲ್ಲಿ ಅದನ್ನು ಕಳೆದು ಉಳಿಯುವ ಮೊಬಲಗಿನ ಮೂವತ್ತು ಪಟ್ಟಿಗಿಂತ ಜಾಸ್ತಿ ಇರತಕ್ಕದ್ದಲ್ಲ. ಆದರೆ, ಮೇಲ್ಕಂಡ ಮಿತಿ ಏನೇ ಆಗಿದ್ದರೂ, ಸಂಘದ ಸಾಮಾನ್ಯ ನಿಕಾಯವು, ಸಾಮಾನ್ಯ ಸಭೆಯಲ್ಲಿ ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಪತ್ತಿನ ಏಜೆನ್ಸಿಯಿಂದ ಸಾಲ ತೆಗೆದುಕೊಳ್ಳಲು ಅನುಮತಿ ನೀಡುವ ಅಧಿಕಾರ ಹೊಂದಿರುತ್ತದೆ.<br><br>ದಿನಾಂಕ23.09.2024ರ ಸಾಮಾನ್ಯ ಸಭೆ ವಿಷಯ ಸಂಖ್ಯೆ 26ರ ಅನ್ವಯ 2024–25ನೇ ಸಾಲಿಗೆ ಠೇವಣಿಗಳ ಮೊತ್ತವನ್ನು ರೂ.300 ಕೋಟಿ ಹಾಗು ಸಾಲದ ಮೊತ್ತ ರೂ.200 ಕೋಟಿವರೆಗೆ ಪಡೆಯುವ |

| | |
|---|---|
| | ಅನುಮತಿಯನ್ನು ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ಸಂಘ ಪಡೆದ ಸಾಲ ಮತ್ತು ಠೇವಣಿ ನಿಗದಿಪಡಿಸಿದ ಮಿತಿಯೊಳಗೆ ಇರುವುದನ್ನು ಗಮನಿಸಲಾಗಿದೆ. |
| **ಎ) ಹಣಕಾಸು ಬ್ಯಾಂಕಿನಿಂದ ಹಾಗೂ ಸಂಘ ಸಂಸ್ಥೆಗಳಿಂದ ಪಡೆದಿರುವ ಸಾಲಗಳು :** | |
| 1. ಸಾಲ ಪಡೆದಿರುವ ಬ್ಯಾಂಕಿನ/ಸಂಸ್ಥೆಯ ಹೆಸರು ಮತ್ತು ಶಾಖೆಯ ಸಂಪೂರ್ಣ ವಿವರ ನೀಡಿ. | 1) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಹೆಚ್ ರಸ್ತೆ, ಶಿವಮೊಗ್ಗ.<br>2) ಆಕ್ಸಿಸ್ ಬ್ಯಾಂಕ್, ವಿನೋಬನಗರ ಶಿವಮೊಗ್ಗ. |

| ಕ್ರ. ಸಂ. | ಸಾಲದ ಅಸಲು ವಿವರ | ವರ್ಷಾಂತ್ಯದ ಬಾಕಿ ಮೊತ್ತ | ಬ್ಯಾಂಕಿನ ದೃಢೀಕರಣ ದಂತೆ ಬಾಕಿ ಮೊತ್ತ | ವ್ಯತ್ಯಾಸದ ಮೊತ್ತ | ಸಮನ್ವಯ ತ:ಖ್ತೆ ತಯಾರಿಸಿ ತಾಳೆ ಮಾಡಿ ಲಗತ್ತಿಸ ಲಾಗಿದೆಯೇ? | ಬಾಕಿ ಸಾಲದ ಪೈಕಿ ಸುಸ್ತಿ ಮೊತ್ತ ರೂ. ಹಾಗೂ ಶೇಕಡಾ ಪ್ರಮಾಣ |
|---|---|---|---|---|---|---|
| 1 | ನಗದು ಪತ್ತಿನ ಸಾಲ | 94,89,42,002.80 | 92,19,42,002.80 | 2,70,00,000 | ಲಗತ್ತಿಸಲಾಗಿದೆ. | ಸುಸ್ತಿಯಾಗಿರುವುದಿಲ್ಲ |
| 2 | ಇತರೆ ಸಾಲಗಳು (ಆಕ್ಸಿಸ್ ಬ್ಯಾಂಕ್) | 12,50,00,000.00 | 12,50,00,000.00 | – | – | ಸುಸ್ತಿಯಾಗಿರುವುದಿಲ್ಲ |
| | **ಒಟ್ಟು ರೂ.** | **107,39,42,002.80** | **104,69,42,002.80** | **2,70,00,000** | | |

| | |
|---|---|
| 2.ಸಾಲಗಳ ಮೇಲೆ ಪಾವತಿಸಿರುವ ಬಡ್ಡಿಯ ತಗಾದೆ ಪರಿಶೀಲಿಸಿ ಸರಿ ಇರುವ ಬಗ್ಗೆ ದೃಢೀಕರಿಸಿಕೊಳ್ಳಲಾಗಿದೆಯೇ? | ಸಾಲಗಳ ಮೇಲೆ ಪಾವತಿಸಿರುವ ಬಡ್ಡಿಯು ತಗಾದೆಯನ್ನು ಪರಿಶೀಲಿಸಿದಾಗ ಪಾವತಿ ಮಾಡಿರುವ ಬಡ್ಡಿ ಸಮಂಜಸವಾಗಿರುವುದನ್ನು ಗಮನಿಸಲಾಗಿದೆ. |
| 3.ಪರಿಶೀಲನೆಯಲ್ಲಿ ಕಂಡುಬಂದ ವ್ಯತ್ಯಾಸಗಳನ್ನು ವರದಿಯಲ್ಲಿ ಸೂಕ್ತ ಟಿಪ್ಪಣಿ ನೀಡಿ, ಅಥಾವೆಯಲ್ಲಿ ಅಳವಡಿಸುವುದು. | ಯಾವುದು ಇರುವುದಿಲ್ಲ. |
| 4.ನಿಯಮ 22ರಂತೆ ಸಾಲಾಂತ್ಯ ದಿ:31.3.2025 ಕ್ಕೆ ಹಣಕಾಸು ಬ್ಯಾಂಕಿಗೆ ಪಾವತಿಗೆ ಬಾಕಿ ಇರುವ ಬಡ್ಡಿಯ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಬಡ್ಡಿಯನ್ನು ಕಾಲಕಾಲಕ್ಕೆ ಪಾವತಿಸಲಾಗಿದೆ ಹಾಗೂ ಯಾವುದೇ ಬಾಕಿ ಇರುವುದಿಲ್ಲ. |

| | |
|---|---|
| 5.ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ಖಾತೆ ವಿವರ (Extract) ಹಾಗೂ ವರ್ಷಾಂತ್ಯಕ್ಕೆ ಪಾವತಿಸಲು ಬಾಕಿ ಇರುವ ಸಾಲಗಳ ಬಾಬ್ತು ಸಂಬಂಧಿಸಿದ ಸಂಸ್ಥೆಗಳಿಂದ ಪಡೆದ ದೃಢೀಕರಣ ಪತ್ರಕ್ಕೆ ತಾಳೆ ಇರುವ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಮರ್ಶಿಸುವುದು. | ಧೃಢೀಕರಣ ಪತ್ರ ಪಡೆಯಲಾಗಿದ್ದು, ಮೇಲೆ ತಿಳಿಸಿದ ವ್ಯತ್ಯಾಸ ಹೊರತುಪಡಿಸಿ ಬಾಕಿ ಧೃಢೀಕರಣ ಪತ್ರಕ್ಕೆ ತಾಳೆಯಿರುತ್ತದೆ. |
| 6. ಪಡೆದ ಸಾಲಗಳಲ್ಲಿ ಇರುವ ಸುಸ್ತಿ ಸಾಲಗಳ ವಿವರ | **ಕ್ರ. ಸಂ.** \| **ಸಾಲದ ವಿವರ** \| **ಕೊಡತಕ್ಕ ಬಾಕಿ** \| **ಸುಸ್ತಿ ಬಾಕಿ**<br>ಯಾವುದೇ ಸಾಲಗಳು ಸುಸ್ತಿಯಾಗಿರುವುದಿಲ್ಲ. |
| 7.ಸರ್ಕಾರದ ಸಾಲಗಳು:<br>[ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ:31.3.2025 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಢೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಸರ್ಕಾರದಿಂದ ಯಾವುದೇ ಸಾಲ ಪಡೆದಿರುವುದಿಲ್ಲ. |

**18) ಠೇವಣಿಗಳು:**

| | |
|---|---|
| ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪವಿಧಿಗಳಲ್ಲಿ ಇರುವ ಅವಕಾಶಗಳ ಬಗ್ಗೆ ಹಾಗೂ ಸಂಘವು ಸಂಗ್ರಹಿಸಿರುವ ಠೇವಣಿ ಸದರಿ ಮಿತಿಯೊಳಗೆ ಇರುವ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆಯೇ? ಎಲ್ಲಾ ಠೇವಣಿದಾರರು ಸಂಘದ ಸದಸ್ಯತ್ವ ಪಡೆದಿರುವರೇ? ಎಲ್ಲಾ ಠೇವಣಿದಾರರಿಂದ ಕೆ.ವೈ.ಸಿ. ಮಾದರಿಯ ವಿವರಗಳನ್ನು ಪಡೆಯಲಾಗಿದೆಯೇ? | ದಿನಾಂಕ 23.09.2024ರ ಸಂಘದ ಸಾಮಾನ್ಯ ನಿಕಾಯವು ನಿಗದಿಪಡಿಸಿದ ರೂ.300 ಕೋಟಿ ಮಿತಿಯಲ್ಲಿ, ಸಂಘದ ಆಡಳಿತ ಮಂಡಳಿ ರಚಿಸುವ ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಒಳ ನಿಯಮಗಳಿಗೊಳಪಟ್ಟು ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸಿದೆ. |

ಸಂಘವು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು:

| ಕ್ರ.ಸಂ | ಠೇವಣಿಗಳ ವಿವರ | ವರ್ಷಾಂತ್ಯದ ಬಾಕಿ ಮೊತ್ತ | ಕುಳುವಾರಿನಂತೆ ಬಾಕಿ ಮೊತ್ತ | ವ್ಯತ್ಯಾಸದ ಮೊತ್ತ |
|---|---|---|---|---|
| 1 | ನಿಶ್ಚಿತ ಠೇವಣಿ | 98,38,01,170.00 | 98,38,01,170.00 | – |
| 2 | ಉಳಿತಾಯ ಠೇವಣಿ | 108,83,72,687.38 | 108,83,72,687.38 | – |
| 3 | ಕರೆ ಠೇವಣಿ | 2,95,84,954.00 | 2,95,84,954.00 | – |
| 4 | ಸಣ್ಣ ಉಳಿತಾಯ ಖಾತೆ | 17,10,616.60 | 17,10,616.60 | |
| | **ಒಟ್ಟು ರೂ** | **210,34,69,427.98** | **210,34,69,427.98** | – |

| | | |
|---|---|---|
| 1 | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿಲ್ಲ. |
| 2 | ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆ. ವರದಿ ಸಾಲಿನಲ್ಲಿ ಪಾವತಿಸಿದ ಬಡ್ಡಿ ರೂ.12,73,05,524.87 |
| 3 | ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ? | ಠೇವಣಿದಾರರಿಗೆ ಪಾಸ್ ಪುಸ್ತಕ/ ಸರ್ಟಿಫಿಕೇಟ್ ನೀಡಲಾಗಿದೆ. |
| 4 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಕಡ್ಡಾಯವಾಗಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಆಕರಣೆ ಮಾಡಿ ಪಾವತಿಸಲಾಗಿದೆ. |
| 5 | ಸಂಘವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್, ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿ ಸದಸ್ಯರಿಗೆ ನಗದೀಕರಣ ಒದಗಿಸಿ ಕೊಟ್ಟಿದೆಯೇ ಎಂಬ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ವರ್ಷದಲ್ಲಿ ಜರುಗಿರುವ ಇಂತಹ ವ್ಯವಹಾರಗಳ ಸಂಪೂರ್ಣ ವಿವರವಾದ ಪಟ್ಟಿಯನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು. | ಸಂಘವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್, ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿದ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| 6 | ಇಂತಹ ಪ್ರಕರಣಗಳು (ಕ್ರ.ಸಂ–8ರಂತೆ) ಇದ್ದಲ್ಲಿ ಸದರಿ ಅನಧಿಕೃತ ವ್ಯವಹಾರವನ್ನು ಗುರ್ತಿಸಿ ಪ್ರತ್ಯೇಕವಾಗಿ ಇಂದೀಕರಿಸಿ ಸಂಬಂಧಿತ ಶೀರ್ಷಿಕೆಯಿಂದ ಕಡಿತಗೊಳಿಸಿ ಜಮಾ ಖರ್ಚು ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯ ಎರಡೂ ಬದಿಯ ಆಕ್ಷೇಪಣೆಯಲ್ಲಿ ಕಾಣಿಸಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ. |

**19) ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿಮೆಯ ಬಗ್ಗೆ ವಿಮರ್ಶೆ:**

<table>
<tr><td>ಕಲಂ 16 (ಎ1), ಕಲಂ18 (1) ಮತ್ತು ಕಲಂ 98–ಡಿ ಉಲ್ಲಂಘಿಸಿ ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆಯೇ? ಕಲಂ 61 ನಿಯಮ 26ರನ್ವಯ</td><td>
<table>
<tr><th>ಕ್ರ. ಸಂ</th><th>ಠೇವಣಿ</th><th>ಸಂಖ್ಯೆ</th><th>ಮೊತ್ತ</th></tr>
<tr><td>01</td><td>ಸದಸ್ಯರಿಂದ</td><td>37,234</td><td>210,34,69,427.98</td></tr>
<tr><td>02</td><td>ಸದಸ್ಯರಲ್ಲದ ವರಿಂದ</td><td>–</td><td>–</td></tr>
<tr><td></td><td>ಒಟ್ಟು ರೂ.</td><td>37,234</td><td>210,34,69,427.98</td></tr>
</table>
ವಿಮರ್ಶೆ: ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿಲ್ಲ.</td></tr>
<tr><td>ಠೇವಣಿ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ನಿರ್ಧರಿಸಿರುವ ಆಡಳಿತ ಮಂಡಳಿ ಸಭೆ ದಿನಾಂಕ ಹಾಗೂ ಠರಾವು ಕ್ರಮಾಂಕ ನಮೂದಿಸಿ ವಿಮರ್ಶಿಸುವುದು.</td><td>ಆಡಳಿತ ಮಂಡಳಿ ಸಭೆಯ ದಿನಾಂಕ:06–08–2024 ಠರಾವು ಸಂಖ್ಯೆ 04</td></tr>
<tr><td>ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವಣಿಗಳ ಮೇಲೆ ಪಾವತಿಸಿರುವ ಬಡ್ಡಿ ಯನ್ನು ಸಂಬಂಧಿಸಿದ ಠೇವಣಿ ಖಾತೆಗೆ ಜಮೆ ತೆಗೆದು ಕೊಳ್ಳಲಾಗಿರುವ ಬಗ್ಗೆ ವರದಿಯಲ್ಲಿ ವಿಮರ್ಶಿಸುವುದು.</td><td>ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವುಗಳನ್ನು ಪಡೆದಿರುವುದಿಲ್ಲ.</td></tr>
<tr><td>ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ?</td><td>ಠೇವಣಿದಾರರಿಗೆ ಪಾಸ್ ಪುಸ್ತಕ / ಸರ್ಟಿಫಿಕೇಟ್ ನೀಡಲಾಗಿದೆ.</td></tr>
<tr><td>ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್ ಬಗ್ಗೆ ವರದಿಯಲ್ಲಿ ವಿವರಿಸುವುದು.</td><td>ಅನ್ವಯವಾಗುವುದಿಲ್ಲ.</td></tr>
<tr><td>ಪಿಗ್ಮಿ ಕಮಿಷನ್ ಹಾಗೂ ಇತರೆ ವೆಚ್ಚಗಳ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳಂತೆ ಕ್ರಮ ಇಡಲಾಗಿದೆಯೇ?</td><td>ಅನ್ವಯವಾಗುವುದಿಲ್ಲ.</td></tr>
<tr><td>ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ನಗದು ಮೀಸಲು ಮತ್ತು ಪ್ರವಾಹಿಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ? (ಪ್ರವಾಹಿ ಧನ ಲೆಕ್ಕಾಚಾರ ಮಾಡುವಾಗ ಕಲಂ 58 ಕ್ಕೆ ವಿರುದ್ಧವಾಗಿ ಮಾಡಿರುವ ಹೂಡಿಕೆಗಳನ್ನು ಪರಿಗಣಿಸಬಾರದು)</td><td>ಅನ್ವಯವಾಗುವುದಿಲ್ಲ.</td></tr>
<tr><td>ಪ್ರತಿಯೊಂದು ಠೇವಣಿ ಮತ್ತು ಬಡ್ಡಿ ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು.</td><td>ಸಂಪೂರ್ಣ ಗಣಕೀಕೃತಗೊಂಡಿರುತ್ತದೆ. ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆಯಿರುತ್ತದೆ.</td></tr>
</table>

| | |
|---|---|
| ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಬಗ್ಗೆ ಪರಿಶೀಲಿಸಿ ವಿವೇಚನಾಯುಕ್ತವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ ಮತ್ತು ಹಣ ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು.) | ಅನ್ವಯವಾಗುವುದಿಲ್ಲ. |
| ವರ್ಷಾಂತ್ಯದ ಠೇವಣಿ ಮತ್ತು ಬಡ್ಡಿ ಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | (see table below) |
| ವರ್ಷಾಂತ್ಯದ ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ ಪರಿಶೀಲಿಸಿ ಪುಟವಾರು ಸಂಕ್ಷಿಪ್ತವನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು. | |

| ವಿವರ | ಹಿಂದಿನ ಸಾಲಿನ (ರೂ.ಕೋಟಿ) | | ಪ್ರಸಕ್ತ ಸಾಲಿನ (ರೂ.ಕೋಟಿ) | |
|---|---|---|---|---|
| | ಠೇವು | ಬಡ್ಡಿ | ಠೇವು | ಬಡ್ಡಿ |
| ಖಾತೆಗಳ ಸಂಖ್ಯೆ | | | | |
| ಅಢಾವೆ ಮೊತ್ತ | 184.97 | 10.67 | 210.35 | 12.73 |
| ಕುಳುವಾರು ಮೊತ್ತ | 184.97 | 10.67 | 210.35 | 12.73 |
| ಅಂತರ ರೂ. | – | – | – | – |

**ಪ್ರಸಕ್ತ ಸಾಲಿನ ಠೇವಣಿಗಳ/ಬಡ್ಡಿಗಳ ಕಳೆದ 02 ವರ್ಷಗಳ ಅಂಕಿಗಳ ತುಲನಾತ್ಮಕ ವಿವರ ಹಾಗೂ ಠೇವಣಿಗೆ ಹೋಲಿಸಲಾಗಿ ಪಾವತಿಸಿರುವ ಬಡ್ಡಿಯ ಪ್ರತಿಶತ ಪ್ರಮಾಣದ ವಿವರ:**

| ಕ್ರ.ಸಂ | ವಿವರ | 2024–25 ಕ್ಕೆ | 2023–24 ಕ್ಕೆ |
|---|---|---|---|
| 1 | ಒಟ್ಟು ಠೇವಣಿ | 210.35 | 184.97 |
| 2 | ಒಟ್ಟು ಬಡ್ಡಿ ಪಾವತಿ | 12.73 | 10.67 |
| 3 | ಪ್ರತಿಶತ ಪ್ರಮಾಣ | 6.05% | 5.77% |

| | |
|---|---|
| **20) ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–**<br>[ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಶಿಸುವುದು] | **ಠೇವಣಿಗಳ ಬಗ್ಗೆ ಟಿಪ್ಪಣಿ:** ಸಂಘದ ಉಪನಿಯಮಗಳ ಪ್ರಕಾರ ಸಂಸ್ಥೆಯು ಸದಸ್ಯರಿಂದ ಠೇವಣಿ ಸಂಗ್ರಹಿಸಿದೆ. ಠೇವಣಿ ಸಂಗ್ರಹಣೆಯಲ್ಲಿ ಗುರುತರವಾದ ನ್ಯೂನ್ಯತೆಗಳು ಯಾವುದೂ ಇರುವುದಿಲ್ಲ. |

**21) ಇತರೆ ಜವಾಬ್ದಾರಿಗಳು :**

{ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಶಿಸುವುದು}

**1.ಅಮಾನತ್ ಜವಾಬ್ದಾರಿಗಳು.**

| ಕ್ರ.ಸಂ | ವಿವರ | ಮೊತ್ತ |
|---|---|---|
| 1 | ಕೇಂದ್ರಕಛೇರಿ ಖಾತೆಯಲ್ಲಿ ವರ್ತಕರ ವ್ಯಾಜ್ಯಕ್ಕೆ ಸಂಬಂಧಿಸಿದ ಮೊತ್ತ | 75,000.00 |
| 2 | ಇತರೆ ಹೊಂದಾಣಿಕೆಗೆ ಬಾಕಿ – ಕೇಂದ್ರಕಛೇರಿ | 97,744.00 |
| 3 | ಮೃತ ಸದಸ್ಯರ ವಾರಸುದಾರು/ ನಾಮಿನಿದಾರರಿಗೆ ಸಂದಾಯ ವಾಗಬೇಕಿರುವ ಹಣ | 32,67,129.95 |
| | ಒಟ್ಟು ಮೊತ್ತ | **34,39,873.95** |

ಕೇಂದ್ರ ಕಛೇರಿ ಖಾತೆಯಲ್ಲಿ ವರ್ತಕರ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಶ್ರೀ ಶ್ರೀಧರ ಅಡಿಕೆ ಸ್ಟೋರ್ಸ್, ಸಾಗರ ಇವರಿಂದ ಬರಬೇಕಾದ ಅಸಲು ಬಾಕಿ ರೂ.11.43 ಲಕ್ಷ ಇದ್ದು ಸದರಿ ಖಾತೆಗೆ ರೂ.75,000 ಜಮಾ ಮಾಡಿದ್ದನ್ನು ಅಮಾನತ್ ಖಾತೆಯಲ್ಲಿ ಇಡಲಾಗಿದೆ. ಇತರೆ ಹೊಂದಾಣಿಕೆ ಬಾಕಿಯಲ್ಲಿ ಇರುವ ರೂ.97,744 ನ್ನು ಆದಷ್ಟು ಶೀಘ್ರ ಹೊಂದಾಣಿಕೆ ಮಾಡಿಕೊಂಡು ಸಮನ್ವಯಗೊಳಿಸಲು ಸೂಚಿಸಿದೆ. ಮೃತ ಸದಸ್ಯರ ವಿವಿಧ ಖಾತೆಗಳಲ್ಲಿ ಇರುವ ಮೊಬಲಗನ್ನು ಅಮಾನತ್ ಖಾತೆಗೆ ವರ್ಗಾಯಿಸಲಾಗಿದ್ದು ವರದಿ ಸಾಲಿನ ಅಂತ್ಯಕ್ಕೆ ಸದರಿ ಖಾತೆಯಲ್ಲಿ ರೂ.32,67,129.95 ಜಮಾ ಇದ್ದು ಆದಷ್ಟು ಶೀಘ್ರ ಸಂಬಂದಪಟ್ಟವರಿಗೆ ಪಾವತಿ ಮಾಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಹೊಂದಾಣಿಕೆ ಬಾಕಿಯಲ್ಲಿ ಇರುವ ಮೊಬಲಗನ್ನು ಸಮನ್ವಯಗೊಳಿಸಲು ಕ್ರಮವಿಡಲಾಗುವುದು. ಮೃತ ಸದಸ್ಯರ ವಿವಿಧ ಖಾತೆಗಳಲ್ಲಿ ಇರುವ ಮೊಬಲಗಿಗೆ ಸಂಬಂಧಿಸಿದಂತೆ ಸಂಬಂಧಿಸಿದ ವಾರಸುದಾರರು ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮರು ಪಾವತಿಗೆ ಕೋರಿದಲ್ಲಿ ಪರಿಶೀಲಿಸಿ, ಆಡಳಿತ ಮಂಡಳಿಗೆ ಮಂಡಿಸಿ, ಪಾವತಿ ಮಾಡಲಾಗುವುದು.**

22.ಸಲ್ಲತಕ್ಕ ಜವಾಬ್ದಾರಿಗಳು:

| ಕ್ರ.ಸಂ | ವಿವರ | ಮೊತ್ತ |
|---|---|---|
| 1 | ಅಡಿಕೆ ಮಾರಾಟದ ಹಣ | 21,60,545.20 |
| 2 | ಷೇರು ಡಿವಿಡೆಂಡ್ ಕಾಯ್ದಿರಿಸಿದ್ದು | 99,06,096.00 |
| 3 | ಇತರೆ ಪಾವತಿಸ ಬೇಕಾದದ್ದು | 2,70,93,475.22 |
| 4 | ಜಿ ಎಸ್ ಟಿ ಪಾವತಿಸಬೇಕಾಗಿದ್ದು | 4,22,38,228.00 |
| 5 | ಅಮಾನತ್ ಜವಾಬ್ದಾರಿ | 34,39,873.95 |
| 6 | ಸದಸ್ಯರ ಮರಣೋತ್ತರ ನಿಧಿ ಸದಸ್ಯರಿಂದ ಸ್ವೀಕರಿಸಿದ ವಂತಿಕೆ | 1,23,67,500.00 |
| 7 | ಕಮಿಷನ್ ಪಾವತಿಸ ಬೇಕಾಗಿದ್ದು | 6,51,570.65 |
| 8 | ಆದಾಯ ಮೂಲ ತೆರಿಗೆ | 47,10,628.00 |
| 9 | ಟ್ರೇಡ್ ಕ್ರೆಡಿಟಾರ್ಸ್ | 5,11,53,812.62 |
| 10 | ಟಿ ಸಿ ಎಸ್ ಪಾವತಿಸಬೇಕಾಗಿದ್ದು | 3,56,736.00 |
| 11 | ಸದಸ್ಯರ ಗುಂಪು ವಿಮೆ ಕ್ಲೈಮ್ | 14,18,980.00 |
| 12 | ಸಿಬ್ಬಂದಿ ಇ.ಎಸ್.ಐ | 175.00 |
| 13 | ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ | 18,889.44 |
| 14 | ಕ್ರೆಡಿಟಾರ್ಸ್ ಫಾರ್ ಫರ್ಟಿಲೈಸರ್ಸ್ | 96,981.00 |

ವರದಿ ಸಾಲಿನ ಅಂತ್ಯಕ್ಕೆ ಕೊಡಬೇಕಾದ ಅಡಿಕೆ ಮಾರಾಟದ ಹಣ ರೂ.21,60,545.20 ಇದ್ದು, ಇದನ್ನು ಕೂಡಲೇ ಪಾವತಿಸಲು ಕ್ರಮವಿಡುವುದು. ಕುಳುವಾರು ಪಟ್ಟಿಯನ್ನು ವರದಿಯೊಂದಿಗೆ ಲಗತ್ತಿಸಲಾಗಿದೆ.

**ಸಮಜಾಯಿಷಿ: ಬೇಡಿಕೆ ಸಲ್ಲಿಸಿದವರಿಗೆ ಅವರವರ ಅಗತ್ಯಕ್ಕೆ ಅನುಗುಣವಾಗಿ ಪಾವತಿ ಮಾಡಲಾಗುತ್ತಿದೆ.**

ಷೇರು ಡಿವಿಡೆಂಡ್ ಕೊಡಬೇಕಾಗಿದ್ದು ರೂ.99,06,096.00 ಬಾಕಿ ಇದ್ದು, ಸದರಿ ಮೊತ್ತವನ್ನು ಸದಸ್ಯರಿಗೆ ಪಾವತಿ ಮಾಡಲು ಸೂಚಿಸಿದೆ.

**ಸಮಜಾಯಿಷಿ: ಸದಸ್ಯರಿಗೆ ಡಿವಿಡೆಂಡ್ ಪಾವತಿ ಮಾಡಲಾಗುತ್ತಿದ್ದು, ಸಂಘದ ಉಪವಿಧಿ ಅನ್ವಯ ಮೂರು ವರ್ಷ ಮೇಲ್ಪಟ್ಟ ಡಿವಿಡೆಂಡ್ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾಯಿಸಲಾಗುವುದು.**

ವರದಿ ಸಾಲಿನ ಅಂತ್ಯಕ್ಕೆ ವರ್ತಕರ, ಟಿ.ಡಿಎಸ್ ಮೊತ್ತ, ಜಿ.ಎಸ್.ಟಿ ಮೊತ್ತ, ವರ್ತಕರ ಸೋಡಿ ಮೊತ್ತ ಹಾಗೂ ಇನ್ನಿತರ ಪಾವತಿಸಬೇಕಾದ ಮೊತ್ತ ರೂ.2,70,93,475.22 ಇದ್ದು ಸದರಿ ಹಣದ ಪಾವತಿಗೆ ಕ್ರಮವಿಡಲು ಸೂಚಿಸಿದೆ. ಇತರೆ ಕೊಡಬೇಕಾದ ಮೊತ್ತಕ್ಕೆ ಶಾಖವಾರು ಕುಳುವಾರು ತಃಖ್ತೆಯನ್ನು ಲಗತ್ತಿಸಲಾಗಿದೆ.

**ಸಮಜಾಯಿಷಿ: ಸಂಬಂಧಿಸಿದವರಿಗೆ ಪಾವತಿ ಮಾಡಲಾಗುತ್ತಿದೆ.**

ಸದಸ್ಯರ ಮರಣೋತ್ತರ ನಿಧಿ ವರದಿ ಸಾಲಿನ ಆರಂಭದಲ್ಲಿ ರೂ.1,25,97,500.00 ಇದ್ದು, ಪ್ರಸಕ್ತ ಸಾಲಿನಲ್ಲಿ ಯಾವುದೇ ಜಮಾ ಆಗಿರುವುದಿಲ್ಲ. ಹಾಗೆಯೇ ಈ ಯೋಜನೆಯಲ್ಲಿ 32 ಜನ ಫಲಾನುಭವಿಗಳಿಗೆ ರೂ.2,30,000.00 ಪಾವತಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಮರಣೋತ್ತರ ನಿಧಿಯಲ್ಲಿ ರೂ.1,23,67,500.00 ಜಮಾ ಇರುತ್ತದೆ.

ವರದಿ ಸಾಲಿನ ಅಂತ್ಯಕ್ಕೆ ಪಾವತಿಸಬೇಕಾದ ಕಮಿಷನ್ ರೂ.96,51,570.65 ಮತ್ತು ಪಾವತಿಸಬೇಕಾದ ಟಿ ಡಿ ಎಸ್ ಮೊತ್ತ ರೂ.47,10,628.00, ಟಿ ಸಿ ಎಸ್ ಮೊತ್ತ ರೂ.3,56,736.00, ಸದಸ್ಯರ ಗುಂಪು ವಿಮೆ ಕ್ಲೈಮ್

| | | | |
|---|---|---|---|
| 15 | ಕ್ರೆಡಿಟಾರ್ಸ್ ಫಾರ್ ಪ್ಯಾಕಿಂಗ್ ಮೆಟೀರಿಯಲ್ | 25,53,476.00 | ಮೊತ್ತ ರೂ.14,18,980.00, ಸಿಬ್ಬಂದಿ ಮರಣ ಪರಿಹಾರ ನಿಧಿ ಮೊತ್ತ ರೂ.3,03,050.00, ಸಿಬ್ಬಂದಿ ಅನುಗ್ರಹ ಪೂರ್ವಕ/ಬೋನಸ್ ಪಾವತಿಗೆ ರೂ.3,28,384.00, ಚುನಾವಣಾ ಭದ್ರತಾ ಠೇವಣಿ ರೂ.1,000.00 ಬಾಕಿ ಇರುತ್ತದೆ. ಕುಳುವಾರು ಪಟ್ಟಿಯನ್ನು ವರದಿಯೊಂದಿಗೆ ಲಗತ್ತಿಸಲಾಗಿದೆ.<br><br>**ಸಮಜಾಯಿಷಿ: ದಿನಾಂಕ 04.02.2025ರಂದು ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಯೋರ್ವರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959, ನಿಯಮಗಳು 1960ರ ನಿಯಮ ಸಂಖ್ಯೆ 14(ಎಇ) ಅನ್ವಯ ನಿಗದಿಪಡಿಸಿದ ಮತಗಳನ್ನು ಪಡೆಯದ ಕಾರಣ 2025ರ ಏಪ್ರಿಲ್ ಮಾಹೆಯಲ್ಲಿ ಸದರಿ ರೂ.1,000.00 ಗಳ ಚುನಾವಣಾ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಆಪದ್ಧನ ನಿಧಿಗೆ ಜಮಾ ಪಡೆಯಲಾಗಿದೆ. ಪ್ರಸ್ತುತ ಚುನಾವಣಾ ಭದ್ರತಾ ಠೇವಣಿ ಯಾವುದೂ ಬಾಕಿ ಇರುವುದಿಲ್ಲ.**<br><br>ವರದಿ ಸಾಲಿನ ಅಂತ್ಯಕ್ಕೆ ಟ್ರೇಡ್ ಕ್ರೆಡಿಟಾರ್ಸ್ ರೂ.5,11,53,812.62, ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ ರೂ.18,889.44, ಕ್ರೆಡಿಟಾರ್ಸ್ ಫಾರ್ ಫರ್ಟಿಲೈಸರ್ಸ್ ರೂ.96,981.00 ಮತ್ತು ಕ್ರೆಡಿಟಾರ್ಸ್ ಫಾರ್ ಪ್ಯಾಕಿಂಗ್ ಮೆಟೀರಿಯಲ್ ರೂ.25,53,476.00 ಬಾಕಿ ಇದ್ದು ಸದರಿ ಕ್ರೆಡಿಟಾರ್ಸ್‌ಗಳಿಂದ ಧೃಢೀಕರಣ ಪತ್ರವನ್ನು ಶಾಖೆಗಳಲ್ಲಿ ಪಡೆದಿದ್ದು, ವರದಿಯೊಂದಿಗೆ ಕ್ರೆಡಿಟಾರ್ಸ್ ಕುಳುವಾರು ಪಟ್ಟಿಯನ್ನು ಲಗತ್ತಿಸಲಾಗಿದೆ. |
| 16 | ಸಿಬ್ಬಂದಿ ಮರಣ ಪರಿಹಾರ ನಿಧಿ | 3,03,050.00 | |
| 17 | ಸಿಬ್ಬಂದಿ ಅನುಗ್ರಹ ಪೂರ್ವಕ ಕೊಡುಗೆ ಪಾವತಿಗೆ ಬಾಕಿ | 3,28,384.00 | |
| 18 | ಚುನಾವಣಾ ಭದ್ರತಾ ಠೇವಣಿ | 1,000.00 | |

| | |
|---|---|
| 1)ಇತರೆ ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿ ಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯಕಾರ್ಯನಿರ್ವಾಹಕರಿಗೆ ತಿಳಿಸಲಾಗಿದೆಯೇ? | ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಅಂತರವಿರುವುದಿಲ್ಲ. |
| 2)ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಪ್ರಸಕ್ತ ಸಾಲಿನಲ್ಲಿ ಯಾವುದೇ ಅಂತರ ಕಂಡುಬಂದಿಲ್ಲ. |

| | |
|---|---|
| 3)ಅನಾಮಧೇಯ ಕೊಡತಕ್ಕದವುಗಳು ಇದ್ದಲ್ಲಿ ಅಥವಾ ಜವಾಬ್ದಾರಿ ತಃಖ್ತೆಗಿಂತ ಹೆಚ್ಚಿಗೆ ಕೊಡತಕ್ಕ ಬಾಬ್ತುಗಳು ಇದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಆಡಿಟ್ ಆಕ್ಷೇಪಣೆ ವಸೂಲಾತಿಗಿರಿಸುವುದು. ಇವೆಯೇ? | ಅನಾಮಧೇಯ ಕೊಡತಕ್ಕವುಗಳು ಯಾವುದೂ ಗಮನಕ್ಕೆ ಬಂದಿರುವುದಿಲ್ಲ. |
| 4)ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ದಾಯಿತ್ವಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆ/ ವಸೂಲಾತಿಗಿರಿಸುವುದು. | ಯಾವುದೂ ಇರುವುದಿಲ್ಲ. |

**23) ಡಿವಿಡೆಂಡ್ ವಿತರಣೆ ಕುರಿತು :**

| | |
|---|---|
| 1)ವರದಿ ವರ್ಷದಲ್ಲಿ ಲಾಭ ವಿಂಗಡಣೆಯಿಂದ ಎಷ್ಟು ಲಾಭಾಂಶ ಘೋಷಿಸಲಾಗಿದೆ. | ಹಿಂದಿನ ಸಾಲಿಗೆ (2023–24) ಮಹಾಸಭೆ ಒಪ್ಪಿಗೆ ಪಡೆದು ಪ್ರತಿಶತ 10 ರಂತೆ ಮೊತ್ತ ರೂ.87,61,525.00ಗಳನ್ನು ಲಾಭಾಂಶವಾಗಿ ಘೋಷಿಸಲಾಗಿದೆ. |
| 2)ವರದಿ ವರ್ಷದಲ್ಲಿ ಪಾವತಿಯಾದ ಲಾಭಾಂಶ ಎಷ್ಟು? ಪಾವತಿಯಾಗದೇ ಉಳಿದ ಲಾಭಾಂಶ ಮೊತ್ತ? | ಈ ಹಿಂದಿನ ಸಾಲುಗಳಲ್ಲಿ ಘೋಷಣೆಯಾದ ಲಾಭಾಂಶದಲ್ಲಿ ಮೊತ್ತ ರೂ.85,09,261.00 ಗಳನ್ನು ವರದಿ ಸಾಲಿನಲ್ಲಿ ಪಾವತಿಸಲಾಗಿದೆ. ಈ ಹಿಂದಿನ ಸಾಲುಗಳಲ್ಲಿ ಘೋಷಣೆ ಯಾದ ಲಾಭಾಂಶದಲ್ಲಿ ಪಾವತಿಯಾಗದೇ ಉಳಿದ ಮೊತ್ತ ರೂ.99,06,096.00 |
| 3)ಲಾಭಾಂಶವನ್ನು ಘೋಷಿಸಿ ವಾಸ್ತವವಾಗಿ ವಿತರಿಸದೇ ಬೇರೆ ಉದ್ದೇಶಕ್ಕಾಗಿ ಸಂಘ ಪಡೆದು ಕೊಂಡಿದ್ದಲ್ಲಿ ಈ ಬಗ್ಗೆ ವಿವರ ನೀಡಿ ಆಕ್ಷೇಪಿಸುವುದು. | ಯಾವುದೂ ಇರುವುದಿಲ್ಲ. |
| 4)ವರ್ಷಾಂತ್ಯದ ವಿತರಣೆಯಾಗದ ಲಾಭಾಂಶದ ವರ್ಷಾವಾರು ಯಾದಿ ತೆಗೆದು ಮೂರು ವರ್ಷ ಮೀರಿದ ಲಾಭಾಂಶದ ಕುರಿತು ಉಪನಿಯಮ ದಂತೆ ಕ್ರಮ ಕೈಗೊಳ್ಳಲಾಗಿದೆಯೇ?. | ಮೂರು ವರ್ಷ ಮೀರಿದ ಲಾಭಾಂಶವನ್ನು ಉಪನಿಯಮದಂತೆ ಆಪದ್ಧನ ನಿಧಿಗೆ ವರ್ಗಾಯಿಸಲಾಗಿದೆ. |
| 23) ಕೂಡಿಬಿದ್ದ ಲಾಭ :<br>1)ವರ್ಷಾಂತ್ಯದ ಹಿಂದಿನ ವರ್ಷಗಳ ಕೂಡಿಬಿದ್ದ ಲಾಭದ ವಿವರ: | ವರ್ಷ 2023–24 ಮತ್ತು ಮೊತ್ತ ರೂ.5,25,35,835.64 |
| 2)ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಹಂಚಿಕೆಯಾಗದ ಕೂಡಿಬಿದ್ದ ಲಾಭವನ್ನು ಆಪದ್ಧನಕ್ಕೆ ವರ್ಗಾಯಿಸಿದ ವಿವರ. | ಮೊತ್ತ ರೂ.3,85,168.00<br>ವಿಮರ್ಶೆ: ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಹಂಚಿಕೆಯಾಗದ ಕೂಡಿಬಿದ್ದ ಲಾಭವನ್ನು ಆಪದ್ಧನ ನಿಧಿಗೆ ನಿಯಮಗಳ ಪ್ರಕಾರ ವರ್ಗಾಯಿಸಲಾಗಿದೆ. |

**24) ನಗದು ಶಿಲ್ಕು ಪರಿಶೀಲನೆ:**

| | |
|---|---|
| 1)ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | ಸಾಲಾಖೈರಿಗೆ ಕೇಂದ್ರಕಛೇರಿ ಮತ್ತು ಶಾಖೆಗಳಲ್ಲಿ ರೂ.39,75,229.60 ಮತ್ತು 15 ಏಜೆನ್ಸಿಗಳಲ್ಲಿ ರೂ.4,99,898.34 ನಗದು ಶಿಲ್ಕು ಇರುತ್ತದೆ. |
| 2)ನಗದು ದಿನವಹಿ, ಡಿನಾಮಿನೇಷನ್ ಪುಸ್ತಕ ಹಾಗೂ ನಗದು ಪುಸ್ತಕ ಇವುಗಳನ್ನು ಪೂರ್ಣ ಬರೆದು ದೃಢೀಕರಿಸಿ ಇಟ್ಟಿರುವರೇ? ವಿವರ | **ಅನುಬಂಧ – 5** ರಲ್ಲಿ ವಿವರಿಸಲಾಗಿದೆ. |
| 3)ನಗದು ಪುಸ್ತಕವನ್ನು ತಹಲ್‌ವರೆವಿಗೂ ಬರೆದು ಪ್ರತಿ ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ದೃಢೀಕರಿಸಿರುತ್ತಾರೆಯೇ?<br>ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಕಡ್ಡಾಯವಾಗಿ ಬರೆಸಿ ಪರಿಶೀಲಿಸುವುದು. ಇಲ್ಲವಾದಲ್ಲಿ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಬಳಿ ಇರುವ ಭೌತಿಕ ನಗದು ಶಿಲ್ಕನ್ನು ಪರಿಶೀಲಿಸಿ ನಗದು ಪುಸ್ತಕ ಬರೆದಿರುವ ಕೊನೆಯ ದಿನಾಂಕದಂದು ಸದರಿ ನಗದು ಶಿಲ್ಕಿನ ಮೊತ್ತವನ್ನು ನಮೂದಿಸಿ ಷರಾ ದಾಖಲಿಸುವುದು. | ವಿಮರ್ಶೆ: ನಗದು ಪುಸ್ತಕವನ್ನು ತಂತ್ರಾಂಶದಲ್ಲಿ ನಿರ್ವಹಣೆ ಮಾಡಲಾಗಿದ್ದು, ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ದೃಢೀಕರಿಸಿರುತ್ತಾರೆ. |
| 4)ನಗದು ಪುಸ್ತಕವನ್ನು ಅಳಿಸಲಾಗದ ಶಾಯಿಯಲ್ಲಿ ಆರಂಭ ಮತ್ತು ಕೊನೆಯ ಶಿಲ್ಕನ್ನು ಅಂತಿಮಗೊಳಿಸಿ ಅಂಕಿ ಮತ್ತು ಅಕ್ಷರಗಳಲ್ಲಿ ಬರೆಯಲಾಗಿದೆಯೇ? ಮತ್ತು ಆಖೈರು ಶಿಲ್ಕು ಯಾರ ಸ್ವಾಧೀನದಲ್ಲಿದೆ? ಪ್ರತಿ ದಿನದ ನಗದು ಪುಸ್ತಕಕ್ಕೆ ಸಂಬಂಧಪಟ್ಟವರು ಸಹಿ ಮಾಡಿರುತ್ತಾರೆಯೇ? ಎಂದು ಪರಿಶೀಲಿಸಿ ದೃಢೀಕರಿಸಲಾಗಿದೆಯೇ? (ಇಲ್ಲವಾದಲ್ಲಿ ಕಡ್ಡಾಯವಾಗಿ ಪ್ರತಿ ದಿನದ ನಗದು ಪುಸ್ತಕಕ್ಕೆ ಸಂಬಂಧಿಸಿದವರ ಸಹಿ ಮಾಡಿಸಿ ಪರಿಶೀಲಿಸುವುದು) | ವಿಮರ್ಶೆ: ನಗದು ಪುಸ್ತಕವನ್ನು ತಂತ್ರಾಂಶದಲ್ಲಿ ನಿರ್ವಹಣೆ ಮಾಡಲಾಗಿದ್ದು, ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ದೃಢೀಕರಿಸಿರುತ್ತಾರೆ. |
| 5)ಸಂಘದ ನಗದು ಕೈ ಶಿಲ್ಕಿನ ಮಿತಿ ನಿಗದಿಪಡಿಸಿದ ವಿವರ ಬೈಲಾ ಸಂಖ್ಯೆ: ಆಡಳಿತ ಮಂಡಳಿಯ ಠರಾವು ಸಂಖ್ಯೆ ಮತ್ತು ದಿನಾಂಕ ನಿಗದಿಪಡಿಸಿದ ಮೊತ್ತ ರೂ. | **ಅನುಬಂಧ – 5**ರಲ್ಲಿ ವಿವರಿಸಲಾಗಿದೆ. |

<table>
<tr><td rowspan="6">6)ಲೆಕ್ಕಪರಿಶೋಧನಾ ಅವಧಿಯಲ್ಲಿ ನಗದು ಪರಿಶೀಲನೆ ಮಾಡಿರುವ ವಿವರಗಳು.<br>ಒಂದು ವೇಳೆ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರಿಂದ ಪರಿಶೀಲನೆ ಮಾಡದಿದ್ದಲ್ಲಿ ಈ ಕುರಿತು ಆಕ್ಷೇಪ ವ್ಯಕ್ತಪಡಿಸಿ ವರದಿಯಲ್ಲಿ ಜವಾಬ್ದಾರಿ ನಿಗದಿಪಡಿಸುವುದು.</td><td>ಕ್ರ. ಸಂ</td><td>ಪರಿಶೀಲಿಸಿದವರ ಹೆಸರು ಮತ್ತು ಹುದ್ದೆ</td><td colspan="2">ಪರಿಶೀಲನೆ ಮಾಡಿದ ದಿನಾಂಕ</td></tr>
<tr><td>1</td><td>ಅಧ್ಯಕ್ಷರು ಮತ್ತು ಆ.ಮಂ.ಯವರಿಂದ</td><td colspan="2">ಅರ್ಧವಾರ್ಷಿಕ ಮತ್ತು ವಾರ್ಷಿಕ ಪರಿಶೀಲನೆ ಆಗಿರುತ್ತದೆ.</td></tr>
<tr><td>2</td><td>ಬ್ಯಾಂಕ್ ನಿರೀಕ್ಷಕರಿಂದ</td><td colspan="2">–</td></tr>
<tr><td>3</td><td>ಆಂತರಿಕ ಲೆಕ್ಕ ಪರಿಶೋಧಕರಿಂದ</td><td colspan="2">ತ್ರೈಮಾಸಿಕ ಪರಿಶೋಧನೆ ಆಗಿರುತ್ತದೆ.</td></tr>
<tr><td>4</td><td>ಸಹಕಾರ ಇಲಾಖೆ ಯಿಂದ</td><td colspan="2">–</td></tr>
<tr><td>*</td><td>ವಿಮರ್ಶೆ</td><td colspan="2">ಕಾಲಕಾಲಕ್ಕೆ ಸಂಬಂಧಪಟ್ಟವರಿಂದ ನಗದು ಪರಿಶೀಲನೆ ಆಗಿರುವುದನ್ನು ಗಮನಿಸಲಾಗಿದೆ.</td></tr>
<tr><td>7)ನಗದು ಭದ್ರತೆಗೆ ಭದ್ರತಾ ಕೊಠಡಿ/ಕ್ಯಾಶ್ ಚೆಸ್ಟ್ ಇದೆಯೇ?</td><td colspan="4">ನಗದು ಭದ್ರತೆಗೆ ಭದ್ರತಾ ಕೊಠಡಿ/ಕ್ಯಾಷ್ ಚೆಸ್ಟ್ ನಿರ್ವಹಿಸಲಾಗಿದೆ.</td></tr>
<tr><td>8)ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆಯೇ?</td><td colspan="4">ಅಗತ್ಯವಿರುವಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ.</td></tr>
<tr><td rowspan="2">9)ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು</td><td>ಕ್ರ. ಸಂ.</td><td>ಪರಿಶೀಲನೆ ಮಾಡಿದ ದಿನಾಂಕ</td><td>ನಗದು ಪುಸ್ತಕದಂತೆ ಇರುವ ಮೊತ್ತ</td><td>ಭೌತಿಕವಾಗಿ ಪರಿಶೀಲಿಸಿದ ಮೊತ್ತ</td></tr>
<tr><td colspan="4">ಅನುಬಂಧ 5 ರಲ್ಲಿ ವಿವರಿಸಲಾಗಿದೆ.</td></tr>
<tr><td>10)ಪರಿಶೀಲನೆಯಲ್ಲಿ ಕೊರತೆ ಕಂಡು ಬಂದಲ್ಲಿ ತಕ್ಷಣ ಇಲಾಖಾ ಅಧಿಕಾರಿಗಳಿಗೆ ವರದಿ ಮಾಡುವುದು.</td><td colspan="4">ವಿಮರ್ಶೆ: ಪರಿಶೀಲನೆಯಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ.</td></tr>
<tr><td>11)ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೇ?</td><td colspan="4">ಅನುಬಂಧ –6 ರಲ್ಲಿ ವಿವರಿಸಲಾಗಿದೆ.</td></tr>
</table>

**25) ಬ್ಯಾಂಕ್ ಖಾತೆಗಳಲ್ಲಿನ ಶಿಲ್ಕು :**

| ಕ್ರ. ಸಂ. | ಬ್ಯಾಂಕಿನ ಹೆಸರು ಮತ್ತು ಶಾಖೆಯ ಹೆಸರು | ಖಾತೆ ವಿಧ | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಸಂಘದ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತ ರ | ಸಮನ್ವಯ ಪಟ್ಟಿ ಕಡ್ಡಾಯವಾಗಿ ಲಗತ್ತಿಸುವುದು |
|---|---|---|---|---|---|---|---|
| **ಅನುಬಂಧ 7 ರಲ್ಲಿ ವಿವರಿಸಲಾಗಿದೆ.** | | | | | | | |

| | |
|---|---|
| 1.ವಿವಿಧ ಬ್ಯಾಂಕ್ ಖಾತೆಗಳ ಬಗ್ಗೆ ವರ್ಷಾಂತ್ಯಕ್ಕೆ ಇರುವ ಮೊತ್ತಕ್ಕೆ ಸಂಬಂಧಿಸಿದಂತೆ ಬ್ಯಾಂಕ್/ಸಂಘ ಸಂಸ್ಥೆಗಳಿಂದ ಆ ವರ್ಷದ ಖಾತೆ ವಿವರ (Extract) ಪಡೆದು ಪರಿಶೀಲಿಸಿ ವರ್ಷಾಂತ್ಯಕ್ಕೆ ದೃಢೀಕರಣ ಪತ್ರ ಪಡೆದು ವರದಿಗೆ ಲಗತ್ತಿಸುವುದು. | ಸಂಘವು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆಯಾಗಿರುತ್ತದೆ. |
| 2.ಪ್ರತಿ ವರ್ಷಾಂತ್ಯಕ್ಕೆ ಬ್ಯಾಂಕಿನ ಸಮನ್ವಯ ತಃಖ್ತೆಯಂತೆ ಶಿಲ್ಕು ತಾಳೆಯಾಗದಿದ್ದಲ್ಲಿ, ಅದರಲ್ಲಿ ಇರುವ ವ್ಯತ್ಯಾಸವನ್ನು ಹಿಂದಿನ ವ್ಯತ್ಯಾಸಗಳೊಂದಿಗೆ ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗದಿಪಡಿಸುವುದು, | ವ್ಯತ್ಯಾಸವಿರುವ ಖಾತೆಗಳಿಗೆ ಸಮನ್ವಯ ಪಟ್ಟಿಯನ್ನು ತಯಾರಿಸಿ **ಅನುಬಂಧ 7** ರಲ್ಲಿ ಲಗತ್ತಿಸಲಾಗಿದೆ. |
| 3.ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 58 ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಯೇ? ಹೊಂದಿದ್ದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 58 ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿರುವುದಿಲ್ಲ. |
| 4.ಸಂಘವು ವಿವಿಧ ಸಂಘ ಸಂಸ್ಥೆ/ಬ್ಯಾಂಕುಗಳಲ್ಲಿ ಅನಗತ್ಯ ನಿಷ್ಕ್ರಿಯ ಖಾತೆಗಳನ್ನು ಹೊಂದಿದ್ದಲ್ಲಿ ಅವುಗಳನ್ನು ಮುಕ್ತಾಯಗೊಳಿಸಲು ಸೂಚಿಸುವುದು. | ಯಾವುದು ಇರುವುದಿಲ್ಲ. |
| 5.ವರದಿ ಸಾಲಿನಲ್ಲಿ ಬ್ಯಾಂಕು ಖಾತೆಗಳ ಮೇಲೆ ಬಂದಿರುವ ಬಡ್ಡಿ ಆದಾಯ. | ರೂ.9,82,502.00 |
| 6. ಬ್ಯಾಂಕು ಖಾತೆಗಳ ಪೈಕಿ ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಶಿಲ್ಕುಗಳ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಸಂಘಕ್ಕೆ ಮರಳಿ ಬಾರದೇ ಇರುವ ಠೇವಣಿ ಮೊತ್ತ ಯಾವುದೂ ಇರುವುದಿಲ್ಲ. |
| 7. ಬ್ಯಾಂಕಿನಿಂದ ಡ್ರಾ ಮಾಡಿ ನಗದು ಪುಸ್ತಕಕ್ಕೆ ತೀರಾ ವಿಳಂಬವಾಗಿ ಜಮೆ ತೆಗೆದುಕೊಂಡ ಮತ್ತು ನಗದು ಪುಸ್ತಕದಲ್ಲಿ ಖರ್ಚು ಹಾಕಿ ಬ್ಯಾಂಕಿಗೆ ತೀರಾ ವಿಳಂಬವಾಗಿ ಜಮೆ ಮಾಡಿದ ಪ್ರಕರಣಗಳು ಇದ್ದಲ್ಲಿ ವಿವರ ನೀಡಿ. | ಪ್ರಕರಣಗಳ ವಿವರ : ಯಾವುದೂ ಇರುವುದಿಲ್ಲ. |

**26) ಸದಸ್ಯರ ಸಾಲ ಮತ್ತು ಮುಂಗಡಗಳು:**

| | |
|---|---|
| 1.ಸಂಘವು ಸಾಲದ ಒಳ ನಿಯಮಾವಳಿಗಳನ್ನು ರಚಿಸಿಕೊಂಡು ಅನುಮೋದನೆ ಪಡೆಯ ಲಾಗಿದೆಯೇ? | ಉಪ ನಿಯಮ 66(1)ರ ತಿದ್ದುಪಡಿ ದಿನಾಂಕ: 27-12-2022ರ ಅಪರ ನಿಬಂದಕರ ಆದೇಶದಂತೆ ದಿನಾಂಕ:24-03-2023ರ ಆಡಳಿತ ಮಂಡಳಿ ತೀರ್ಮಾನದಂತೆ, ಸಾಲದ ಗರಿಷ್ಠ ಮಿತಿಯನ್ನು ರೂ.2,00,000.00ಕ್ಕೆ ನಿಗದಿಪಡಿಸಿ ದಿನಾಂಕ:01-04-2023 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. |

ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲಗಳ ವಿವರ:

| ಕ್ರ.ಸಂ | ಸಾಲದ ವಿಧ | ನಿಯಮಾವಳಿ ಪ್ರಕಾರ ಸಾಲದ ಗರಿಷ್ಟ ಮಿತಿ | ಅಢಾವೆಯಂತೆ ವರ್ಷಾಂತ್ಯದ ಬಾಕಿ (ರೂಗಳಲ್ಲಿ) | ಕುಳುವಾರದಂತೆ ಬಾಕಿ (ರೂಗಳಲ್ಲಿ) | ಅಂತರ | |
|---|---|---|---|---|---|---|
| | | | | | ಹೆಚ್ಚು | ಕಡಿಮೆ |
| 1 | ಠೇವಣಿ ಆಧಾರಿತ ಸಾಲ | ಠೇವಣಿಯ ಶೇ.80 | 23,79,089 | 23,79,089 | – | – |
| 2 | ಕೊಳೆ ಸಾಲ | ರೂ. 50,000.00 | 21,32,473 | 21,32,473 | – | – |
| 3 | ಕಟಾವು ಸಾಲ | ರೂ.1,50,000.00 | 30,07,07,764.60 | 30,07,07,764.60 | – | – |
| 4 | ಅಡಿಕೆ ಆಧಾರ ಮುಂಗಡ | – | 57,51,34,569.16 | 57,51,34,569.16 | – | – |

| | |
|---|---|
| 2.ವರದಿ ವರ್ಷದಲ್ಲಿ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆಯದೇ ನೀಡಿರುವ ಸಾಲಗಳ ವಿವರವಾದ ಅನುಬಂಧ ವರದಿಗೆ ಲಗತ್ತಿಸುವುದು. | ಸಂಘದ ಸಾಲದ ನಿಯಮದ ಪ್ರಕಾರ ಶಾಖಾ ವ್ಯವಸ್ಥಾಪಕರು ಸಾಲ ವಿತರಿಸಿದ್ದು ಘಟನೋತ್ತರ ಅನುಮೋದನೆಗೆ ಕಾರ್ಯನಿರ್ವಾಹಕ ಸಮಿತಿ ಮೂಲಕ ಆಡಳಿತ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆದಿರುವುದನ್ನು ಗಮನಿಸಲಾಗಿದೆ. ಪರಂತು ಅಡಿಕೆ ಆಧಾರ ಸಾಲಗಳನ್ನು ಮಂಡಳಿ ನಿರ್ಧರಿಸಿದ ಮಿತಿಯಲ್ಲಿ ವಿತರಿಸಲಾಗಿದ್ದು ಅಂತಹ ಸಾಲಗಳನ್ನು ಘಟನೋತ್ತರ ಅನುಮೋದನೆಗೆ ಮಂಡಿಸದೆ ಇರುವುದನ್ನು ಗಮನಿಸಲಾಗಿದ್ದು ಈ ಕುರಿತು ಕೂಡಲೆ ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ಆಡಳಿತ ಮಂಡಳಿ ಅನುಮೋದನೆಗೆ ಮಂಡಿಸಲಾಗುತ್ತಿದೆ.** |

| | |
|---|---|
| 3.ಸದಸ್ಯರಿಗೆ ನೀಡಿರುವ ಸಾಲವು ಉಪನಿಯಮದ ಮಿತಿ ಮೀರಿರುವ ಬಗ್ಗೆ ಹಾಗೂ ಕಾರ್ಯ ವ್ಯಾಪ್ತಿ ಮೀರಿರುವ ಬಗ್ಗೆ ವರದಿಯಲ್ಲಿ ವಿವರಿಸುವುದು. | ವರದಿ ಸಾಲಿನಲ್ಲಿ ಕೆಲವೊಂದು ಪ್ರಕರಣಗಳಲ್ಲಿ ಆಧಾರ ಸಾಲಗಳನ್ನು ಉಪನಿಯಮದ ಮಿತಿ ಮೀರಿ ನೀಡಿರುವುದನ್ನು ಗಮನಿಸಲಾಗಿದ್ದು, ಈ ಕುರಿತು ಕ್ರಮವಿಡಲು ಸೂಚಿಸಿದೆ. ವರದಿ ಸಾಲಿನ ಅಂತ್ಯಕ್ಕೆ ಉಪನಿಯಮದ ಮಿತಿ ಮೀರಿ ನೀಡಿದ ಸಾಲಗಳು ಯಾವುದು ಇರುವುದಿಲ್ಲ ಹಾಗೂ ಕಾರ್ಯವ್ಯಾಪ್ತಿ ಮೀರಿ ಯಾವುದೇ ಸಾಲವನ್ನು ನೀಡಿರುವುದಿಲ್ಲ.<br><br>**ಸಮಜಾಯಿಷಿ: ಕೆಲವೊಂದು ಸಂದರ್ಭಗಳಲ್ಲಿ ಮಾರುಕಟ್ಟೆ ಧಾರಣೆಯನ್ನು ಪರಿಗಣಿಸಿ, ತತ್‌ಕ್ಷಣದ ವ್ಯಾಪಾರಕ್ಕೆ ಬಿಡುವುದನ್ನು ದೃಢಪಡಿಸಿಕೊಂಡು ಅಡಿಕೆ ಆಧಾರ ಸಾಲವನ್ನು ಮಿತಿಗಿಂತ ಹೆಚ್ಚಿಗೆ ಪಾವತಿ ಮಾಡಿದ್ದರೂ, ನಂತರ ಸಲುವಳಿ ಹಣದಲ್ಲಿ ಜಮಾ ಪಡೆಯಲಾಗುತ್ತಿದೆ.** |
| 4.ಸಂಘದ ಪ್ರತಿಯೊಬ್ಬ ಸದಸ್ಯರು ಹೊಂದಿರುವ ಆಸ್ತಿ – ಭೂಮಿಯ ಕುರಿತು ಸಂಘದಲ್ಲಿ ರಿಜಿಸ್ಟರ್ ಬರೆದಿರುವುದರ ಬಗ್ಗೆ ಪರಿಶೀಲಿಸಿ ವರದಿಯಲ್ಲಿ ವಿವರಿಸಲಾಗಿದೆಯೇ? | ಸಂಘದ ಪ್ರತಿಯೊಬ್ಬ ಸದಸ್ಯರು ಹೊಂದಿರುವ ಆಸ್ತಿ/ಭೂಮಿಯ ಸಂಪೂರ್ಣ ವಿವರ ಲಭ್ಯವಿರುವುದಿಲ್ಲ. ಪರಂತು ತಂತ್ರಾಂಶದಲ್ಲಿ ಸದಸ್ಯರು ನೀಡಿರುವ ಪಹಣಿಯ ವಿವರಗಳನ್ನು ನಮೂದಿಸಲಾಗಿದೆ. |
| 5.ವರದಿ ಸಾಲಿನಲ್ಲಿ ಸಂಘವು ನೀಡಿರುವ ಸಾಲಗಳಲ್ಲಿ ಒಂದೇ ವ್ಯಕ್ತಿಗೆ/ಒಂದೇ ವ್ಯಕ್ತಿ ಸಮೂಹಕ್ಕೆ ದೊಡ್ಡ ಪ್ರಮಾಣದ ಸಾಲ ನೀಡಲಾಗಿದೆಯೇ? | ಒಂದೇ ವ್ಯಕ್ತಿಗೆ/ಒಂದೇ ವ್ಯಕ್ತಿ ಸಮೂಹಕ್ಕೆ ದೊಡ್ಡ ಪ್ರಮಾಣದ ಸಾಲ ನೀಡಿರುವುದಿಲ್ಲ. |
| 6.ಪ್ರತಿಯೊಂದು ಸಾಲ ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳುವಾರು ಪಟ್ಟಿಯ ಮೊತ್ತ ಅಢಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ತಂತ್ರಾಂಶದಲ್ಲಿ ಸಾಲದ ಖಾತೆಯನ್ನು ನಿರ್ವಹಿಸಲಾಗುತ್ತಿದ್ದು, ಕುಳುವಾರು ಪಟ್ಟಿ ಲಭ್ಯವಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಕುಳುವಾರು ಪಟ್ಟಿಯ ಮೊತ್ತ ಅಢಾವೆ ಮೊತ್ತಕ್ಕೆ ತಾಳೆಯಿರುತ್ತದೆ. |
| 7.ವರದಿ ಸಾಲಿನಲ್ಲಿ ವಸೂಲಾದ ಸಾಲ ಹಾಗೂ ಬಡ್ಡಿಯ ಮೊತ್ತವನ್ನು ವಾಸ್ತವವಾಗಿ ವಸೂಲಿಸದೇ ಪುನರ್ನವೀಕರಿಸಿದ ಪ್ರಕರಣಗಳಿದ್ದಲ್ಲಿ ಸಂಪೂರ್ಣ ವಿವರ ನೀಡುವುದು. | ಅಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |

| | |
|---|---|
| 8.ಲೆಕ್ಕಪರಿಶೋಧನಾ ಸಮಯದಲ್ಲಿ ಚಿನ್ನಾಭರಣ ಸಾಲಕ್ಕೆ ಅಡವಿಟ್ಟಿರುವ ಚಿನ್ನಾಭರಣಗಳನ್ನು ಪ್ರತ್ಯೇಕ ವಾಗಿ ಪರಿಶೀಲಿಸಿ ಬೇರೊಬ್ಬ ಬಂಗಾರ ಪರೀಕ್ಷಕ ರಿಂದ ಪರಿಶೀಲನೆ ಮಾಡಿಸಿಕೊಂಡು ಅವುಗಳ ಸತ್ಯಾ ಸತ್ಯತೆ ಬಗ್ಗೆ ಪ್ರತ್ಯೇಕ ವರದಿ ಪಡೆಯಲಾಗಿದೆಯೇ? | ಚಿನ್ನಾಭರಣ ಸಾಲವನ್ನು ನೀಡಿರುವುದಿಲ್ಲ. |
| 9.ಚಿನ್ನಾಭರಣ ಸಾಲಕ್ಕಾಗಿ ಅಡವಿಟ್ಟಿರುವ ಚಿನ್ನಾಭರಣ ಮೌಲ್ಯದ ಮೇಲೆ ವಿಮೆ ಮಾಡಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |
| 10.ಅಡಮಾನ ಸಾಲ (Mortgage Loan) ಕ್ಕೆ ಅಡವಿಟ್ಟಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಾನ್ಯತೆ ಪಡೆದ ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿಕೊಳ್ಳಲಾಗಿದೆಯೇ? | ಅಡಮಾನ ಸಾಲ ನೀಡಿರುವುದಿಲ್ಲ. |
| 11.ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಮೊತ್ತವನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಿಡುವುದು. | ವ್ಯತ್ಯಾಸ ಕಂಡುಬಂದಿರುವುದಿಲ್ಲ. |
| 12.ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲಾ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ ಮತ್ತು ಆಸ್ತಿ ತಃಖ್ತೆಗಿಂತ ಸಾಲದ ಕುಳುವಾರು ಕಡಿಮೆ ಇದ್ದು, ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು) | ಯಾವುದೂ ಇರುವುದಿಲ್ಲ. |
| 13. ಕುಳುವಾರು ಪಟ್ಟಿಯಲ್ಲಿ 250ಕ್ಕಿಂತ ಕಡಿಮೆ ಸಾಲ ಖಾತೆಗಳಿದ್ದಲ್ಲಿ ಎಲ್ಲಾ ಖಾತೆಗಳನ್ನು ಒಳಗೊಂಡ ಪ್ರತ್ಯೇಕ ಖಾತೆವಾರು ಪಟ್ಟಿ ವರದಿಗೆ ಲಗತ್ತಿಸಲಾಗಿದೆಯೇ? ಕುಳುವಾರು ಪಟ್ಟಿಯಲ್ಲಿ 250ಕ್ಕಿಂತ ಹೆಚ್ಚಿನ ಸಾಲ ಖಾತೆಗಳಿದ್ದಲ್ಲಿ ವರ್ಷಾಂತ್ಯದ ಸಾಲ ಖಾತೆ ಬಾಕಿ ರಿಜಿಸ್ಟರನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | ಕುಳುವಾರು ಪಟ್ಟಿಯ ಸಂಕ್ಷಿಪ್ತ ವಿವರವನ್ನು ವರದಿಗೆ ಲಗತ್ತಿಸಲಾಗಿದೆ. |

| | |
|---|---|
| 14. ವರ್ಷಾಂತ್ಯಕ್ಕೆ ಬರತಕ್ಕ ಇರುವ ಸಾಲದ ಪೈಕಿ ಆಧಾರ ಮತ್ತು ಆಧಾರ ರಹಿತ ಸಾಲಗಳ ಮೊತ್ತ ಎಷ್ಟು? ಒಟ್ಟು ಬರತಕ್ಕ ಸಾಲಿಗೆ ಅದರ ಪ್ರತಿಶತ ಪ್ರಮಾಣ ಎಷ್ಟು? | ಸಂಘದಿಂದ ವಿತರಿಸಿರುವ ಎಲ್ಲಾ ಸಾಲಗಳು ಆಧಾರ ಸಹಿತ ಸಾಲಗಳಾಗಿರುತ್ತದೆ. |
| 15. ಲೆಕ್ಕಪರಿಶೋಧನಾ ನಿರ್ದೇಶನ ಸಂಖ್ಯೆ 17(60) ಹಾಗೂ 19(11) ರಂತೆ ವರದಿ ಸಾಲಿನಲ್ಲಿ ವಿತರಿಸಿದ ಎಲ್ಲಾ ಸಾಲಗಳ ಅರ್ಜಿಗಳನ್ನು ಹಾಗೂ ಅದಕ್ಕೆ ಪಡೆದ ಎಲ್ಲ ದಾಖಲಾತಿಗಳನ್ನು ಅಂದರೆ ಸಾಲದ ಬಾಂಡು. ಭದ್ರತೆ, ಜಾಮೀನು ಮುಂತಾದವುಗಳನ್ನು ನಿಯಮಾನುಸಾರ ಪಡೆದುಕೊಂಡಿರುತ್ತಾರೆಯೇ? ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ಅಗತ್ಯವಿರುವ ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ. |
| 16. ಲೆಕ್ಕಪರಿಶೋಧನಾ ನಿರ್ದೇಶನ ಸಂಖ್ಯೆ 18(29) ರಂತೆ ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ಇಟ್ಟಿರುವ ಭದ್ರತೆಗಳನ್ನು ಈ ಮುಂದೆ ನಮೂದಿಸಿದ ಪ್ರಮಾಣದಲ್ಲಿ ಭೌತಿಕವಾಗಿ ಪರಿಶೀಲಿಸಿ ವಿವರಿಸುವುದು. | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳನ್ನು ಭೌತಿಕವಾಗಿ ಪರಿಶೀಲನೆ ಮಾಡಿದ್ದು, ಸಂಬಂಧಪಟ್ಟ ಭದ್ರತೆಗಳನ್ನು ಸಹ ಪರಿಶೀಲನೆ ಮಾಡಲಾಗಿದೆ. |
| 17. ಲೆಕ್ಕಪರಿಶೋಧನೆಯಲ್ಲಿ ನಿಯಮಾನುಸಾರ ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಅಂಕಿ ಸಂಖ್ಯೆಗಳೊಂದಿಗೆ ಪರಿಶೀಲಿಸಿ ಲೆಕ್ಕಾಚಾರದ ತಃಖ್ತೆಯನ್ನು ವರದಿಗೆ ಲಗತ್ತಿಸುವುದು. | ಬಡ್ಡಿ ಲೆಕ್ಕಾಚಾರವನ್ನು ತಂತ್ರಾಂಶದಲ್ಲಿ ಅಳವಡಿಸಿ ಕೊಂಡಿರುತ್ತಾರೆ. ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸಲಾಗಿದ್ದು ಸರಿ ಇರುವುದನ್ನು ಗಮನಿಸಲಾಗಿದೆ. |
| 18. ಲೆಕ್ಕಪರಿಶೋಧನಾ ಸೂಚನೆ (Audit Instruction No.1) ಸಂಖ್ಯೆ:ಸಿಎಡಿ/ಎಎಫ್ಆರ್–1/ಎ.1,81–82 ದಿನಾಂಕ: 04–07–1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದ ಬಗ್ಗೆ ವಿಮರ್ಶಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು. | ಸಾಲಗಾರರಿಂದ ಧೃಢೀಕರಣ ಪತ್ರವನ್ನು ತೆಗೆದುಕೊಂಡು ವರದಿಗೆ ಲಗತ್ತಿಸಲಾಗಿದೆ. |

| | |
|---|---|
| 19.ಒಟ್ಟು ಸದಸ್ಯರ ಸಂಖ್ಯೆಗೆ ಸಂಘದ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು. | ಸಂಘದ ಒಟ್ಟು 30,587 ಸದಸ್ಯರಲ್ಲಿ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಸಂಖ್ಯೆ 5660 ಇದ್ದು, ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು 18.50 ಇರುತ್ತದೆ. |
| 20.ಸಂಘದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿರುವ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯರ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಷಿಸುವುದು. | ಸಂಘದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ನಿರ್ವಹಿಸಿರುವುದಿಲ್ಲ, ಸಾಲ ವಿತರಿಸಿದ ಸದಸ್ಯರ ಸಂಖ್ಯೆ 3,227 ಮತ್ತು ಮೊತ್ತ ರೂ.34,51,66,529.00. ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ನಿರ್ವಹಿಸುವಂತೆ ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿದೆ**. |
| 21.ಸಾಲದ ವಸೂಲಾತಿಗಾಗಿ ಸಂಘವು ಮಾಡಿರುವ ಎ.ಬಿ.ಎನ್ ಹಾಗೂ ಇ.ಪಿ ವೆಚ್ಚಗಳನ್ನು ಲಾಭ–ನಷ್ಟ ತಃಖ್ತೆಗೆ ಖರ್ಚು ಹಾಕದೇ ಅಥಾವೆ ತಃಖ್ತೆಯಲ್ಲಿ ಪ್ರತ್ಯೇಕ ಕಾಣಿಸಿರುವ ಬಗ್ಗೆ ವಿಮರ್ಶಿಸಿ. | ಸದರಿ ಸಾಲಿನಲ್ಲಿ ಎ.ಬಿ.ಎನ್ ಹಾಗೂ ಇ.ಪಿ ವೆಚ್ಚಗಳನ್ನು ಸದಸ್ಯರಿಗೆ ಹಾಕಿರುವುದಿಲ್ಲ. |

**27) <u>ಸಾಲಗಳಲ್ಲಿ ಗಮನಿಸಲಾದ ನ್ಯೂನ್ಯತೆಗಳ ವಿವರ:</u> ಸಾಲ ವಿತರಣೆಯಲ್ಲಿ ಆಗಿರುವ ಲೋಪದೋಷಗಳ ಮತ್ತು ನ್ಯೂನತೆಗಳು ಲೆಕ್ಕಪರಿಶೋಧನೆ ಕಾಲಕ್ಕೆ ಕಂಡು ಬಂದ ವಿವರಗಳನ್ನು ವಿಮರ್ಶಿಸುವುದು.**

**ಸದಸ್ಯರಿಂದ ಬರತಕ್ಕ ಸಾಲಗಳು:** ಆಡಳಿತ ಮಂಡಳಿ ಸಂಘದ ಸಾಲದ ಉಪನಿಯಮಗಳಿಗೆ ತಿದ್ದುಪಡಿ ತಂದಿದ್ದು, ರೈತರಿಗೆ ಕಟಾವು ಸಾಲ ನೀಡುವಾಗ ಪ್ರತಿ ಗುಂಟೆಗೆ ರೂ.2,000.00ರಂತೆ ಗರಿಷ್ಟ ಮಿತಿ ರೂ.1,50,000.00 ಮತ್ತು ಕೊಳೆ ಔಷಧಿ ಸಾಲ ಒಂದು ಗುಂಟೆಗೆ ರೂ.300.00, ಗರಿಷ್ಟ ಮಿತಿ ರೂ.50,000.00 ಒಟ್ಟಾರೆ ಕಟಾವು ಸಾಲ ಮತ್ತು ಕೊಳೆ ಸಾಲ ರೂ.2,00,000.00 ನೀಡಬಹುದಾಗಿರುತ್ತದೆ. ಇದಕ್ಕೆ ಇಲಾಖೆಯ ಅನುಮೋದನೆ ಪಡೆಯಲಾಗಿದೆ. ಸಂಸ್ಥೆಯು ಸದಸ್ಯರಿಗೆ ನೀಡಲಾಗುತ್ತಿರುವ ಕಟಾವು ಸಾಲ ಮತ್ತು ಕೊಳೆ ಸಾಲವನ್ನು ದಿನಾಂಕ:16/08/2006ರಿಂದ ಜಾರಿಗೆ ಬರುವಂತೆ "ಮಾಮ್‌ಕೋಸ್ ಕ್ರೆಡಿಟ್ ಕಾರ್ಡ್" ಯೋಜನೆಯ ಅಡಿಯಲ್ಲಿ ಸಾಲ ನೀಡಲಾಗುತ್ತಿದೆ. ಇದರ ಅಡಿಯಲ್ಲಿ ಕೇಂದ್ರ ಕಛೇರಿಯಿಂದ ಸಾಲ ಮಂಜೂರು ಆದ ನಂತರದ 2 ವರ್ಷಗಳಲ್ಲಿ ಸಂಘದ ಶಾಖಾ ಹಂತದಲ್ಲಿ ಶಾಖಾ ವ್ಯವಸ್ಥಾಪಕರೇ ಸಾಲ ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ.

ಕಟಾವು ಸಾಲ ಪಾವತಿಯಲ್ಲಿ ಸಂಘದ ನಿಯಮದ ಪ್ರಕಾರ ಸಾಲ ಮಂಜೂರಾತಿಗೆ ಆರ್.ಟಿ.ಸಿ ಪಡೆದು ಸಾಲ ಪಾವತಿಸುವ ಮೊದಲು ಆರ್.ಟಿ.ಸಿ.ಯಲ್ಲಿ ಮಾತ್ರ ಸಂಘಕ್ಕೆ ಆಧಾರ ಮಾಡಿಕೊಳ್ಳುವ ಕ್ರಮ ಇರುತ್ತದೆ. ಈ ರೀತಿ ನಮೂದಾಗಿರುವ ಪಹಣಿಯನ್ನು ಅಂದರೆ ಆಸ್ತಿಯನ್ನು ಪರಬಾರೆ ಮಾಡುವ ಅವಕಾಶವು ಇದ್ದುದರಿಂದ ಕಟಾವು ಸಾಲ ಮತ್ತು ಕೊಳೆಸಾಲದ ಸುಸ್ತಿ ಸಾಲ ಪ್ರತಿ ಸಾಲಿನಲ್ಲಿಯೂ ಹೆಚ್ಚುತ್ತಾ ಬಂದಿರುತ್ತದೆ. ಅಡಿಕೆ ಆಧಾರ ಮುಂಗಡವನ್ನು ಸಂಸ್ಥೆಯ ಉಪ ನಿಯಮದ ಪ್ರಕಾರ ರೈತರ ಅಡಿಕೆ ದಾಸ್ತಾನಿನ ಮೇಲೆ ಕಾಲಕಾಲಕ್ಕೆ ಆಡಳಿತ ಮಂಡಳಿ ನಿಗದಿಪಡಿಸಿದ ಪರಿಮಿತಿಯಲ್ಲಿ ಅಡಿಕೆ ಆಧಾರ ಸಾಲವಾಗಿ ನೀಡಲು ಅವಕಾಶವಿದೆ.

ಅಡಿಕೆ ಆಧಾರ ಮುಂಗಡದ ಪಾವತಿ ಮತ್ತು ವಸೂಲಿ ಬಗ್ಗೆ ಸಂಘದ ವಹಿವಾಟು ನಿಯಮದ ಪ್ರಕಾರ ಸಾಲ ಪಡೆದ ನಿಗದಿತ ದಿನಾಂಕಕ್ಕೆ ಅಡಿಕೆ ವ್ಯಾಪಾರ ಮಾಡಿ ಸಾಲ ಜಮಾ ಮಾಡದಿದ್ದಲ್ಲಿ ಆಧಾರವಾಗಿಟ್ಟ ದಾಸ್ತಾನನ್ನು ಮಾರಾಟ ಮಾಡಿ ಸಾಲ ಜಮಾ ಪಡೆಯುವ ಷರತ್ತನ್ನು ಸಾಲ ಪಾವತಿಸುವ ಮುನ್ನ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆಯನ್ನು ಪಡೆಯುವ ಬಗ್ಗೆ ಕ್ರಮದ ಅಗತ್ಯವಿದೆ. ಆದರೆ ಪ್ರಸ್ತುತ ಸದಸ್ಯರಿಗೆ ಅಡಿಕೆ ಮೇಲಿನ ಮುಂಗಡವನ್ನು ಆರ್.ಟಿ.ಜಿ.ಎಸ್ ಮೂಲಕ ಪಾವತಿಸುತ್ತಿದ್ದು ಸದಸ್ಯರಿಂದ ಮುಂಗಡಕ್ಕೆ ಸದಸ್ಯರ ಪತ್ರದ ಆಧಾರದ ಮೇಲೆಯೇ ಸಾಲವನ್ನು ಪಾವತಿಸಲಾಗುತ್ತಿದ್ದು, ಸದಸ್ಯರಿಗೆ ಸೇವೆ ನೀಡುತ್ತಿರುವ ಉದ್ದೇಶ ಇದ್ದರೂ ಸಹ ನಿಯಮವನ್ನು ಪಾಲಿಸುವುದು ಕಡ್ಡಾಯವಾಗಿದೆ. ಪ್ರಸ್ತುತ ಅಡಿಕೆ ಧಾರಣೆ ಅನುಸರಿಸಿ ಶಾಖೆಗಳಲ್ಲಿ ಆಡಳಿತ ಮಂಡಳಿ ನಿಗದಿಪಡಿಸಿದ ಮಿತಿಯಲ್ಲಿಯೇ ಸಾಲ ನೀಡಲಾಗುತ್ತಿರುವುದನ್ನು ಗಮನಿಸಲಾಗಿದೆ. ಕೆಲವೊಂದು ಅಡಿಕೆ ಆಧಾರ ಮುಂಗಡಗಳು ಒಂದು ವರ್ಷಕ್ಕಿಂತ ಹೆಚ್ಚು ಬಾಕಿ ಇದ್ದು, ಸದಸ್ಯರ ಮನವೊಲಿಸಿ ಅಡಿಕೆ ವ್ಯಾಪಾರ ಮಾಡಿಸಿ ಅವುಗಳ ವಸೂಲಿಗೆ ಕ್ರಮವಿಡಲು ಸೂಚಿಸಲಾಗಿದೆ. ಅಡಿಕೆ ಆಧಾರ ಮುಂಗಡಕ್ಕೆ ಮತ್ತು ಕಟಾವು ಸಾಲ ಹಾಗೂ ಕೊಳೆ ಸಾಲಗಳಿಗೆ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ದಿನಾಂಕ: 01–10–2017ರಿಂದ ಅನ್ವಯವಾಗುವಂತೆ ಸಾಲಗಳ ಮೇಲಿನ ಬಡ್ಡಿಯ ದರವನ್ನು ಪರಿಷ್ಕರಿಸಿ ಈ ಎಲ್ಲಾ ಸಾಲಗಳಿಗೆ ಬಡ್ಡಿ ದರವನ್ನು ಶೇ11.50ಕ್ಕೆ ನಿಗದಿಪಡಿಸಲಾಗಿದೆ. ಅಲ್ಲದೆ ಸದಸ್ಯರು ಸುಸ್ತಿಯಾಗುವ ಮೊದಲು ಸಾಲವನ್ನು ಮರುಪಾವತಿಸಿದ್ದಲ್ಲಿ ಅಂತಹ ಸದಸ್ಯರಿಗೆ 1% ಬಡ್ಡಿ ರಿಯಾಯಿತಿ ನೀಡಲಾಗುತ್ತಿದೆ. ಕೆಲವೊಂದು ಸಾಲವನ್ನು ಕೊಡುವಾಗ ಸದಸ್ಯರನ್ನು ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡದೇ ಇರುವುದನ್ನು ಗಮನಿಸಲಾಗಿದ್ದು, ಈ ಕುರಿತು ಕ್ರಮವಿಡಲು ಸೂಚಿಸಿದೆ. ದಿನಾಂಕ:31–03–2025ಕ್ಕೆ ರೂ.88,03,53,895.76 ಗಳು ಸದಸ್ಯರಿಂದ ಸಂಸ್ಥೆಗೆ ಸಾಲ ಬರಲು ಬಾಕಿ ಇರುತ್ತವೆ.

**ಸಮಜಾಯಿಷಿ: ಶಾಖೆಗೆ ನೇರವಾಗಿ ಬಂದು ಅಡಿಕೆ ಆಧಾರ ಸಾಲ ಪಡೆಯುವ ಸದಸ್ಯರಿಂದ ಕಡ್ಡಾಯವಾಗಿ ಮುಚ್ಚಳಿಕೆಯನ್ನು ಪಡೆಯಲಾಗುತ್ತಿದ್ದು, ಆದರೆ, ಆರ್.ಟಿ.ಜಿ.ಎಸ್. ಮೂಲಕ ಆಧಾರ ಸಾಲ ಪಡೆಯುವ ಸದಸ್ಯರಿಂದ ವಾಟ್ಸಪ್ ಅಥವಾ ಇ-ಮೇಲ್ ಮೂಲಕ ಕೋರಿಕೆ ಪತ್ರವನ್ನು ಪಡೆದು ಹಣ ಪಾವತಿಸಲಾಗುತ್ತಿರುತ್ತದೆ. ಒಂದು ವರ್ಷಕ್ಕಿಂತ ಹೆಚ್ಚಿಗೆ ಅಡಿಕೆ ಆಧಾರ ಸಾಲ ಬಾಕಿ ಇರುವ ಪ್ರಕರಣಗಳಲ್ಲಿ ಅಂತಹ ಸದಸ್ಯರ ಮನವೊಲಿಸಿ, ಬಾಕಿ ವಸೂಲಾತಿಗೆ ಕ್ರಮ ವಹಿಸಲಾಗುತ್ತಿದೆ.**

**ಸಾಧ್ಯವಾದಷ್ಟು ಎಲ್ಲಾ ಪ್ರಕರಣಗಳಲ್ಲೂ ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡಲಾಗುತ್ತಿದ್ದು, ಕೆಲವೊಮ್ಮೆ ನೆಟ್‌ವರ್ಕ್ ಸಮಸ್ಯೆಯಿಂದ 1-2 ಪ್ರಕರಣಗಳಲ್ಲಿ ಕೈಬಿಟ್ಟಿದ್ದರೂ ಮುಂದಿನ ದಿನಗಳಲ್ಲಿ ಅದನ್ನು ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡಲಾಗುತ್ತಿದೆ.**

ಸಂಘವು ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿದಂತೆ ಕೆಲವೊಂದು ಸಾಲಗಳಿಗೆ ಓ.ಟಿ.ಎಸ್ ಮೂಲಕ ಬಡ್ಡಿ ರಿಯಾಯಿತಿ ನೀಡಿ ಸಾಲ ಖಾತೆಗಳನ್ನು ಸಮಾಪನೆಗೊಳಿಸುತ್ತಿರುವುದನ್ನು ಗಮನಿಸಲಾಗಿದ್ದು, ಅಂತಹ ಪ್ರಕರಣಗಳ ಪಟ್ಟಿ ತಯಾರಿಸಿ ಸಾಮಾನ್ಯ ಸಭೆಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಬೇಕಿರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ.**

## 28) ಸುಸ್ತಿ ಸಾಲಗಳ ವಿವರ

<table>
<tr><td>1</td><td colspan="4">ವರ್ಷಾಂತ್ಯಕ್ಕೆ ಸುಸ್ತಿ ಸಾಲದ ಮೊತ್ತ</td><td colspan="3">ವರ್ಷಾಂತ್ಯಕ್ಕೆ ಸುಸ್ತಿ ಸಾಲದ ಮೊತ್ತ– ರೂ.3,77,13,037/–</td></tr>
<tr><td>2</td><td colspan="4">ಒಟ್ಟು ತಗಾದೆಗೆ ಸುಸ್ತಿ ಸಾಲದ ಪ್ರತಿಶತ ಪ್ರಮಾಣ</td><td colspan="3">ಸುಸ್ತಿ ಸಾಲದ ಪ್ರತಿಶತ ಪ್ರಮಾಣ 4.28</td></tr>
<tr><td rowspan="2">3</td><td colspan="7">ವರ್ಷಾಂತ್ಯಕ್ಕೆ ಇರುವ ಸುಸ್ತಿ ಸಾಲದ ವರ್ಷಾವಾರು ವಿವರ ನೀಡುವುದು.</td></tr>
<tr><td colspan="7">(ಎ) ಪ್ರವರ್ಗವಾರು ಹಾಗೂ ವರ್ಷವಾರು ವಿವರ : ಅನುಬಂಧ 17ಎ ರಲ್ಲಿ ಉಲ್ಲೇಖಿಸಲಾಗಿದೆ.</td></tr>
<tr><td></td><td colspan="7">(ಬಿ)ಕಾನೂನು ಕ್ರಮಗಳ ವಿವರ :</td></tr>
<tr><td></td><td>ವಿವರ</td><td>ಸಂಖ್ಯೆ</td><td>1–6 ವರ್ಷ</td><td>ಸಂಖ್ಯೆ</td><td>6 ವರ್ಷ ಮೇಲ್ಪಟ್ಟು</td><td>ಸಂಖ್ಯೆ</td><td>ಒಟ್ಟು</td></tr>
<tr><td></td><td>ಕಟಾವು</td><td rowspan="2">294</td><td>ರೂ.1,76,15,970</td><td rowspan="2">264</td><td>ರೂ. 1,97,36,709</td><td rowspan="2">558</td><td>ರೂ. 3,73,52,679</td></tr>
<tr><td></td><td>ಕೊಳೆ</td><td>ರೂ.2,22,298</td><td>ರೂ. 1,38,060</td><td>ರೂ. 3,60,358</td></tr>
<tr><td>4</td><td colspan="3">ಸುಸ್ತಿ ಸಾಲದ ಪೈಕಿ ದಾವಾ ಹಾಕಿದ ಪ್ರಕರಣ ಗಳ ಸಂಖ್ಯೆ ಮತ್ತು ಸುಸ್ತಿ ಸಾಲದ ಮೊತ್ತ</td><td colspan="4">ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ 152 ಅದರ ಮೊತ್ತ ರೂ.95,53,186.00</td></tr>
<tr><td>5</td><td colspan="3">ದಾವಾ ಪ್ರಕರಣಗಳ ಪೈಕಿ ಡಿಕ್ರಿಯಾದ ಪ್ರಕರಣ ಸಂಖ್ಯೆ ಮತ್ತು ಡಿಕ್ರಿ ಮೊತ್ತ</td><td colspan="4">ಸುಸ್ತಿ ಪ್ರಕರಣಗಳ ಪೈಕಿ ಡಿಕ್ರಿಯಾದ ಪ್ರಕರಣ ಸಂಖ್ಯೆ 43 ಮತ್ತು ಅದರ ಮೊತ್ತ ರೂ.27,45,702.00</td></tr>
<tr><td>6</td><td colspan="3">ಡಿಕ್ರಿಯಾದ ಪೈಕಿ ಅಮಲ್ಜಾರಿಗೆ ಕಳುಹಿಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ.</td><td colspan="4">ಡಿಕ್ರಿಯಾದ ಪ್ರಕರಣಗಳ ಪೈಕಿ ಅಮಲ್ಜಾರಿ/ಸಿವಿಲ್‌ಗೆ ಕಳುಹಿಸಿದ. ಪ್ರಕರಣಗಳ ಸಂಖ್ಯೆ 99 ಮತ್ತು ಮೊತ್ತ ರೂ.55,39,380.00</td></tr>
<tr><td>7</td><td colspan="3">ಸುಸ್ತಿ ಸಾಲ ವಸೂಲಿಗೆ ಕಾನೂನು ರೀತ್ಯಾ ಕ್ರಮ ಜರುಗಿಸದೇ ಇರುವ ಪ್ರಕರಣಗಳು ಮತ್ತು ಮೊತ್ತ</td><td colspan="4">ಸುಸ್ತಿಸಾಲ ವಸೂಲಿಗೆ ಕಾನೂನು ರೀತ್ಯ ಕ್ರಮ ಜರುಗಿಸದೇ ಇರುವ ಪ್ರಕರಣಗಳ ಮೊತ್ತ ರೂ.1,98,74,769.00 ಮತ್ತು ಸಂಖ್ಯೆ–264. ಈ ಕುರಿತು ಪ್ರಕರಣ ದಾಖಲಿಸಲು ಕ್ರಮವಿಡಲು ಸೂಚಿಸಿದೆ.<br><br>ಸಮಜಾಯಿಷಿ: ಕ್ರಮವಿಡಲಾಗಿದೆ.</td></tr>
<tr><td>8</td><td colspan="3">ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು.</td><td colspan="4">ಅಮಲ್ಜಾರಿಯಲ್ಲಿ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ.</td></tr>
</table>

## 29) ಸಂಘದ ಸ್ಥಿರಾಸ್ತಿ–ಚರಾಸ್ತಿಗಳ ಪರಿಶೀಲನೆ

| ಎ | | ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು | ಸ್ಥಿರಾಸ್ತಿಯ ವಿವರ | ಖರೀದಿ ಮತ್ತು ನೋಂದಣಿ ವಿವರ | ವಿಸ್ತೀರ್ಣ | ಆಸ್ತಿ ಮೌಲ್ಯ ರೂ. |
|---|---|---|---|---|---|---|
| | | ನಿವೇಶನ (ಖರೀದಿಸಿದ ಆಸ್ತಿಯ ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ ಮತ್ತು ಪತ್ರಗಳಿಗೆ ಮಾಡಿದ ಖರ್ಚನ್ನು ಬಂಡವಳೀಕರಿಸ ಬೇಕು. | ಗ್ರಾಮ :<br>ಆಸ್ತಿ<br>ಸಂಖ್ಯೆ :<br>ವಿಳಾಸ : | | ------<br>ಚದರಡಿ | |

| | | | | | | |
|---|---|---|---|---|---|---|
| | | ಕಟ್ಟಡ<br>ಉಗ್ರಾಣಗಳು<br>ಮಳಿಗೆಗಳು | ಗ್ರಾಮ :<br>ಆಸ್ತಿ<br>ಸಂಖ್ಯೆ :<br>ವಿಳಾಸ : | | ------<br>ಚದರಡಿ | |
| | | **ಅನುಬಂಧ 10 ರಲ್ಲಿ ವಿವರಿಸಲಾಗಿದೆ.** | | | | |
| | 1 | ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ಸಂಪೂರ್ಣ ದಾಖಲಾತಿಗಳು ಹಾಗೂ ಇ.ಸಿ., ಖಾತಾ ಉತಾರೆ (khatha-Extract) ಪರಿಶೀಲಿಸಿದ ಬಗ್ಗೆ ವಿಮರ್ಶೆ | ಪರಿಶೀಲಿಸಲಾಗಿದೆ. | | | |
| | 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡ ಲಾಗಿದೆಯೇ? | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ. | | | |
| | 3 | ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು | | | |
| | 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸ ಲಾಗಿದೆಯೇ? | ವಿಮೆ ಮಾಡಿಸಲಾಗಿದೆ. ಅನುಬಂಧ–6 | | | |
| | 5 | ಸ್ಥಿರಾಸ್ತಿಗಳ ಮೇಲೆ ನಿಯಮಾನುಸಾರ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ. | ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಸವಕಳಿ ತೆಗೆದಿರಿಸಲಾಗಿದೆ. | | | |
| | 6 | ಗೋದಾಮುಗಳಿದ್ದಲ್ಲಿ ಅವುಗಳ ಸಾಮರ್ಥ್ಯ ಹಾಗೂ ಅದರ ಉಪಯುಕ್ತತೆ ಬಗ್ಗೆ ವಿಮರ್ಶೆ | ದಿನಾಂಕ 01–04–2023 ರಿಂದ ಅನ್ವಯವಾಗುವಂತೆ ದಿನಾಂಕ 24–03–2023ರ ಆಡಳಿತ ಮಂಡಳಿ ಸಭೆ ತೀರ್ಮಾನದಂತೆ ವರ್ತಕರು ಮೂರು ತಿಂಗಳಿಂದ ಆರು ತಿಂಗಳವರೆಗೆ ಖರೀದಿಸಿದ ಮಾಲು ಎತ್ತುವಳಿಯಾಗದೆ ಉಳಿದ ದಾಸ್ತಾನನ್ನು ಬಿಡುಗಡೆಗೊಳಿಸುವಾಗ ಮೂಟೆ ಒಂದಕ್ಕೆ ರೂ.10.00 ಹಾಗು 6 ತಿಂಗಳ ನಂತರ ರೂ.15.00 ನಿರ್ವಹಣಾ ವೆಚ್ಚವನ್ನು ವಿಧಿಸಲು ತಿರ್ಮಾನಿಸಲಾಗಿದೆ.<br><br>ಅಲ್ಲದೆ ಸದಸ್ಯರ ಅಡಿಕೆ ದಾಸ್ತಾನು ಸಂಬಂಧ ವ್ಯಾಪಾರ ಮಾಡದೆ ದಾಸ್ತಾನು ಇಟ್ಟಲ್ಲಿ 1 ವರ್ಷದ ನಂತರ ಪ್ರತಿ ಮೂಟೆಗೆ ಪ್ರತಿ 1 ತಿಂಗಳಿಗೆ ರೂ.20 ರಂತೆ ನಿರ್ವಹಣೆ ವೆಚ್ಚ ವಿಧಿಸಲು ತೀರ್ಮಾನಿಸಲಾಗಿದೆ. ಸಂಸ್ಥೆಯಲ್ಲಿ ಸದಸ್ಯರ ದಾಸ್ತಾನನ್ನು ಇಟ್ಟುಕೊಳ್ಳಲು ಗೋದಾಮುಗಳನ್ನು ಉಪಯೋಗಿಸಿ ಹೆಚ್ಚುವರಿಯಾಗಿ ಬಾಡಿಗೆಗೆ ಪಡೆದಿದ್ದು ಈ ಸಾಲಿನಲ್ಲಿ, ಒಟ್ಟು ರೂ.84,71,009.00 ಪಾವತಿಸಲಾಗಿದೆ. ಸಂಘದ ಒಟ್ಟು ಸ್ವಂತ ಗೋದಾಮುಗಳ ಸಾಮರ್ಥ್ಯವನ್ನು | | | |

<table>
<tr><td></td><td></td><td colspan="3"></td><td colspan="2">ಗಮನಿಸಿದಾಗ ಸುಮಾರು 1,30,000 ದಿಂದ 1,40,000ಗಳ ವರೆಗೆ ಮೂಟೆಗಳನ್ನು ದಾಸ್ತಾನು ಮಾಡಲು ಅವಕಾಶ ಇರುತ್ತದೆ. ಆದರೆ ಕೆಲವು ಶಾಖೆಗಳಲ್ಲಿ ಸದಸ್ಯರ ಅಡಿಕೆ ದಾಸ್ತಾನು 3 ರಿಂದ 4 ವರ್ಷದ ಅಡಿಕೆ ದಾಸ್ತಾನು ವ್ಯಾಪಾರವಾಗದೆ ದಾಸ್ತಾನು ಇರುವುದರಿಂದ ಸ್ವಂತ ಗೋದಾಮುಗಳ ಸಾಮರ್ಥ್ಯ ಕಡಿಮೆಯಾಗಿದ್ದರಿಂದ ಗೋದಾಮುಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಆದ್ದರಿಂದ ಈ ಶಾಖೆಗಳಲ್ಲಿ ಅಡಿಕೆಯನ್ನು ವ್ಯಾಪಾರ ಮಾಡಿಸುವ ಬಗ್ಗೆ ಕ್ರಮವಿಡಬೇಕಿದೆ. ಈ ರೀತಿ ಬಾಡಿಗೆ ಗೋದಾಮು ಪಡೆಯುತ್ತಿರುವುದರಿಂದ ಸಂಘಕ್ಕೆ ಪ್ರತಿ ಮಾಹೆಯಲ್ಲಿ 7 ಲಕ್ಷ ಮೀರಿ ಪಾವತಿ ಮಾಡುತ್ತಿರುವುದರಿಂದ ಸುಮಾರು ರೂ.85ಲಕ್ಷ ದವರೆಗೆ ಹೊರೆಯಾಗುವುದನ್ನು ಗಮನಿಸಿದೆ. ಈ ಮೇಲ್ಕಂಡಂತೆ ಸಂಘವು ಬಾಡಿಗೆ ಗೋದಾಮುಗಳನ್ನು ಪಡೆದು ದಾಸ್ತಾನು ಮಾಡಿ ಇಟ್ಟಿರುವುದರಿಂದ ಈ ಗೋದಾಮಿಗೆ ಕಾವಲು ಮತ್ತು ಭದ್ರತೆಯ ವೆಚ್ಚವೂ ಸಹ ಸಂಘಕ್ಕೆ ಆರ್ಥಿಕ ಹೊರೆಯಾಗುವುದನ್ನು ಗಮನಿಸಿದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br><br>ಸಮಜಾಯಿಷಿ: ಮೂರು ತಿಂಗಳು ಮೇಲ್ಪಟ್ಟು ದಾಸ್ತಾನಿಟ್ಟಿರುವ ವರ್ತಕರಿಗೆ ಆದಷ್ಟುಬೇಗ ಹಣ ಪಾವತಿಸಿ ಮೂಟೆ ಡಿಲವರಿ ಪಡೆಯುವಂತೆ ತಿಳಿಸಲಾಗುತ್ತಿದೆ.</td></tr>
<tr><td></td><td>7</td><td colspan="5">ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ ಕರಾರು ಪತ್ರ ಮಾಡಿಕೊಳ್ಳಲಾಗಿದೆಯೇ? ಇದ್ದಲ್ಲಿ ವಿವರ</td></tr>
<tr><td></td><td></td><td>ಕರಾರು ಅವಧಿ</td><td>ಬಾಡಿಗೆ ದರ</td><td>ವಸೂಲಾದ ಬಾಡಿಗೆ</td><td>ವರ್ಷಾಂತ್ಯಕ್ಕೆ ವಸೂಲಾಗಬೇಕಿರುವ ಮೊತ್ತ</td><td>ಭದ್ರತಾ ಠೇವಣಿ ಮೊತ್ತ</td></tr>
<tr><td></td><td></td><td colspan="5">ಅನುಬಂಧ 10ಎ ರಲ್ಲಿ ವಿವರಿಸಲಾಗಿದೆ.</td></tr>
<tr><td></td><td></td><td colspan="5">ವಿಮರ್ಶೆ: ಸಾಮಾನ್ಯವಾಗಿ ಬಾಡಿಗೆ ಸ್ವೀಕೃತಿಯಾಗುತ್ತಿದ್ದು, ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆ. ಪರಂತು ಸಂಘವು ಮೈಸೂರು ಎಜುಕೇಷನ್ ಸೊಸೈಟಿಗೆ ಕಟ್ಟಡವನ್ನು ಬಾಡಿಗೆಗೆ ನೀಡಿದ್ದು ಸದರಿ ಸಂಸ್ಥೆಯಿಂದ ನಿಗದಿತ ಸಮಯಕ್ಕೆ ಬಾಡಿಗೆ ಸಂದಾಯ ಆಗದಿರುವುದನ್ನು ಗಮನಿಸಲಾಗಿದ್ದು ವರದಿ ಸಾಲಿನ ಅಂತ್ಯಕ್ಕೆ ರೂ.12,98,720 ಬಾಡಿಗೆ ಸಂದಾಯ ಆಗುವುದು ಬಾಕಿ ಇರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br><br>ಸಮಜಾಯಿಷಿ: ಮೈಸೂರು ಎಜುಕೇಶನ್ ಸೊಸೈಟಿಯವರಿಗೆ ಬಾಡಿಗೆ ಹಣವನ್ನು ಪಾವತಿಸುವಂತೆ ಹಲವಾರು ಬಾರಿ ನೋಟೀಸು ನೀಡಿದ್ದು, ಅನಿವಾರ್ಯವಾದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.</td></tr>
<tr><td></td><td>8</td><td colspan="3">ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಕಟ್ಟಡ ನಿರ್ಮಿಸಲು ಅಗತ್ಯ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸ ಲಾಗಿದೆಯೇ ಹಾಗೂ ನಿಯಮಾನುಸಾರ</td><td colspan="2">ಯಾವುದೂ ಇರುವುದಿಲ್ಲ.</td></tr>
</table>

| | | | |
|---|---|---|---|
| | | ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ಹಾಗೂ ಮಂಜೂರಾತಿ ಪಡೆಯಲಾಗಿದೆಯೇ? ಕಟ್ಟಡ ನಿರ್ಮಾಣದ ವೇಳೆಯಲ್ಲಿ ಆಡಳಿತಾತ್ಮಕ ಮಂಜೂರಾತಿ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಲಾಗಿದೆಯೇ? ಕಟ್ಟಡ ಕಾಮಗಾರಿ ಸಮಯದಲ್ಲಿ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗಿದೆಯೇ? ಕಟ್ಟಡ ನಿರ್ಮಾಣ ವೆಚ್ಚಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸುವುದು ಮತ್ತು ವಿವರವಾದ ದಾಖಲೆಗಳನ್ನು ಪರಿಶೀಲಿಸಿ, ಈ ವರದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರ ನೀಡುವುದು. | |

| | | | |
|---|---|---|---|
| | 9 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಶೆ ನೀಡಿ, ಸ್ಥಿರಾಸ್ತಿ ಮಾರಾಟದಿಂದ ಗಳಿಸಿದ ಬಂಡವಾಳ ಲಾಭವನ್ನು ಆದಾಯಕ್ಕೆ ತೆಗೆದುಕೊಳ್ಳದೇ ಕಡ್ಡಾಯವಾಗಿ ಬಂಡವಾಳ ಮೀಸಲು ನಿಧಿ ಖಾತೆಗೆ ಜಮೆ ಕೊಡಬೇಕು. | ಸ್ಥಿರಾಸ್ತಿಗಳ ವಿಲೇವಾರಿ ಆಗಿರುವುದಿಲ್ಲ. |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲ್ ದಿನಾಂಕದವರೆಗೂ ಪಾವತಿಸಲಾಗಿದೆಯೇ ? | ಪಾವತಿಸಲಾಗಿದೆ. |
| | 11 | ಹಳೆಯ ಕಟ್ಟಡ ದುರಸ್ತಿ ಮಾಡಿದಲ್ಲಿ ಪೂರ್ಣ ವಿವರ ನೀಡುವುದು. | **ಅನುಬಂಧ– 11** ರಲ್ಲಿ ವಿವರಿಸಲಾಗಿದೆ. |

| ಬಿ | | ಚರಾಸ್ತಿ | |
|---|---|---|---|
| | 1 | ಸಂಘವು ಹೊಂದಿರುವ ಚರಾಸ್ತಿ ವಿವರಗಳ ಬಗ್ಗೆ ಪ್ರತ್ಯೇಕ ಯಾದಿ ಲಗತ್ತಿಸಲಾಗಿದೆಯೇ? | ಲಗತ್ತಿಸಲಾಗಿದೆ. |
| | 2 | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ. |
| | 3 | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| | 4 | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ವಿಮೆ ಮಾಡಿಸಲಾಗಿದೆ |
| | 5 | ಚರಾಸ್ತಿಗಳ ಮೇಲೆ ನಿಯಮಾನುಸಾರ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ (ಅನುಬಂಧ–1ರಲ್ಲಿ ನೀಡಿರುವ ಮಾಹಿತಿಯನ್ನು ವಿವರವಾಗಿ ವಿಮರ್ಶಿಸುವುದು) | ಆದಾಯ ತೆರಿಗೆ ಕಾಯ್ದೆಯ ಪ್ರಕಾರ ಸವಕಳಿ ತೆಗೆದಿರಿಸಲಾಗಿದೆ. |

| | | | |
|---|---|---|---|
| | 6 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಚರಾಸ್ತಿಗಳ ಕುರಿತು ವಿಮರ್ಶೆ ನೀಡಿ, ಚರಾಸ್ತಿ ಮಾರಾಟದಿಂದ ಆಗಿರುವ ಬಂಡವಾಳ ಲಾಭವನ್ನು ಆದಾಯಕ್ಕೆ ಪರಿಗಣಿಸದೇ, ಬಂಡವಾಳ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿರುವ ಬಗ್ಗೆ ವಿಮರ್ಶಿಸುವುದು. | ವರದಿ ಸಾಲಿನಲ್ಲಿ ಕೆಲವು ಚರಾಸ್ತಿಗಳನ್ನು ವಿಲೇವಾರಿ ಮಾಡಿದ್ದು ಅದರಿಂದ ಬಂದ ಲಾಭವನ್ನು ಬಂಡವಾಳ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿರುತ್ತಾರೆ. |
| | 7 | ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಅನುಪಯುಕ್ತ ಚರಾಸ್ತಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ. |
| | 8 | ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಶೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ? | ಸಂಘವು 2 ಇನ್ನೋವಾ, 2 ಎರಟಿಗಾ ಮತ್ತು 1 ಐಶರ್ ಲಾರಿ ವಾಹನಗಳನ್ನು ಹೊಂದಿದ್ದು, ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆದಿಡಲಾಗಿದೆ. |

| ವಿವರ | **ಜೈಲೋ 1476** | **ಇನ್ನೋವಾ 8737** | **ಇನ್ನೋವಾ 2624** | **ಎರಟಿಗಾ 3851** | **ಎರಟಿಗಾ 3852** | **ಐಶರ್ ಬಿ 3560** |
|---|---|---|---|---|---|---|
| ಚಲಿಸಿದ ದೂರ | 5,003.00 | 4,455.00 | 51,810.00 | 29,746.00 | 50,266.60 | 30,600.00 |
| ಇಂಧನ ಬಳಕೆ (ಲೀ) | 555.00 | 445.05 | 4,710.00 | 2,099.00 | 3,610.11 | 6,120.00 |
| ಓಡಿದ ಸರಾಸರಿ ದೂರ | 9 | 10 | 11 | 14 | 14 | 5 |
| ರಿಪೇರಿ ವೆಚ್ಚ/ವಿಮೆ (ರೂ.) | 24,571.00 | 91,877.00 | 2,23,715.00 | 3,16,637.00 | 1,36,319.00 | 2,27,831.00 |
| ಇಂಧನ ವೆಚ್ಚ (ರೂ.) | 54,715.00 | 25,623.00 | 4,91,393.00 | 1,80,347.00 | 3,38,339.00 | 5,05,277.00 |

| | | | |
|---|---|---|---|
| | 9 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ವಾಹನದ ಕುರಿತು ವಿಮರ್ಶೆ ನೀಡಿ, ವಾಹನ ಮಾರಾಟದಿಂದ ಗಳಿಸಿದ ಬಂಡವಾಳ ಲಾಭವನ್ನು ಆದಾಯಕ್ಕೆ ತೆಗೆದುಕೊಳ್ಳದೆ ಕಡ್ಡಾಯವಾಗಿ ಬಂಡವಾಳ ಮೀಸಲು ನಿಧಿ ಖಾತೆಗೆ ಜಮೆ ಕೊಡಬೇಕು. ಅದರಂತೆ ಒಂದುವೇಳೆ ವಾಹನ ಮಾರಾಟದಿಂದ ನಷ್ಟ ಸಂಭವಿಸಿದಲ್ಲಿ ನಷ್ಟದ ಮೊತ್ತದಿಂದ ಸಂಬಂಧಿಸಿದ ವಾಹನಕ್ಕೆ ಕಾಯ್ದಿರಿಸಿದ ಸವಕಳಿ ಮೊತ್ತವನ್ನು ಕಡಿತಗೊಳಿಸುವುದು. ನಂತರ ಬಾಕಿ ಉಳಿದ | ವರದಿ ಸಾಲಿನಲ್ಲಿ ಒಂದು ವಾಹನ ವಿಲೇವಾರಿ ಮಾಡಿದ್ದು, ವಾಹನ ಮಾರಾಟದಿಂದ ಗಳಿಸಿದ ಲಾಭ ರೂ.8,755.00 ಗಳನ್ನು ಮೀಸಲು ನಿಧಿಗೆ ವರ್ಗಾಯಿಸಿರುತ್ತಾರೆ. ಪರಂತು ಆದಾಯ ತೆರಿಗೆ ಕಾನೂನಿನ ಪ್ರಕಾರ ಸದರಿ ಮೊತ್ತವನ್ನು ಆದಾಯ ಎಂದು ಪರಿಗಣಿಸಬೇಕಾಗಿರುತ್ತದೆ. |

| | | | |
|---|---|---|---|
| | | ಹಾನಿಯನ್ನು ಬಂಡವಾಳ ಕಾಯ್ದಿಟ್ಟ ನಿಧಿಯಿಂದ ಕಳೆಯಬೇಕು. | **ಸಮಜಾಯಿಷಿ: ಲೆಕ್ಕಪರಿಶೋಧನಾ ಕೈಪಿಡಿಯ ಪ್ರಕಾರ ಚರಾಸ್ತಿಯ ಮೌಲ್ಯವು ಮಾರಾಟದ ಮೌಲ್ಯಕ್ಕಿಂತ ಹೆಚ್ಚಾಗಿದ್ದಲ್ಲಿ ಅದನ್ನು 'ಬಂಡವಾಳ ಮೀಸಲು ನಿಧಿ'ಗೆ ಮತ್ತು ಕೊರತೆ ಬಂದರೆ ಅದನ್ನು ನೇರವಾಗಿ ನಷ್ಟದ ಖಾತೆಗೆ ವರ್ಗಾಯಿಸಬೇಕಾಗಿರುತ್ತದೆ. ಆದರೆ, ಸಂಘದಲ್ಲಿ 'ಬಂಡವಾಳ ಮೀಸಲು ನಿಧಿ' ಖಾತೆ ಇಲ್ಲದಿರುವುದರಿಂದ ಇದನ್ನು ಮೀಸಲು ನಿಧಿಗೆ ವರ್ಗಾಯಿಸಲಾಗಿರುತ್ತದೆ. ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ. ಹಾಗೆಯೇ, ಆದಾಯ ತೆರಿಗೆ ಇಲಾಖೆಗೆ ವರದಿ ಸಲ್ಲಿಸುವಾಗ ಸದರಿ ಮೊತ್ತವನ್ನು `Capital Gain' Head ನಲ್ಲಿ ಆದಾಯ ಎಂದು ಪರಿಗಣಿಸಲಾಗುವುದು.** |
| ಸಿ | | ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮೇಲೆ ಸವಕಳಿಯ ಸಂಕ್ಷಿಪ್ತ ವಿವರ | **ಅನುಬಂಧ 12ರಲ್ಲಿ ಲಗತ್ತಿಸಲಾಗಿದೆ.**<br><br>1)ಕೇಂದ್ರ ಕಛೇರಿಯ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಖರೀದಿಸಲಾದ ಹವಾ ನಿಯಂತ್ರಣ ಯಂತ್ರ, ಸಿ.ಸಿ.ಕ್ಯಾಮೆರಾ, ಮುಂತಾದ ಕಛೇರಿ ಸಲಕರಣೆಗೆ ಸಂಬಂಧ ಪಟ್ಟ ಚರಾಸ್ತಿಗಳನ್ನು ಪೀಠೋಪಕರಣಗಳಲ್ಲಿ ಸೇರಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಮೊತ್ತವನ್ನು ಪೀಠೋಪಕರಣದಿಂದ ಬೇರ್ಪಡಿಸಿ ಕಛೇರಿ ಸಲಕರಣೆಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ಸಲಹೆಯಂತೆ ಕ್ರಮವಿಡಲಾಗುವುದು.**<br><br>2) ಸಂಘವು ಹೊಂದಿರುವ ಆಸ್ತಿಯನ್ನು ಶಾಖಾವಾರು ವಿಂಗಡಿಸಿ ಪ್ರತಿ ಆಸ್ತಿಗೆ ಕ್ರಮಸಂಖ್ಯೆಯನ್ನು ನಮೂದಿಸಿ ಆಸ್ತಿಯನ್ನು ನಿರ್ವಹಿಸಿ ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ಸಲಹೆಯಂತೆ ಕ್ರಮವಿಡಲಾಗುವುದು.** |

**30) ಅಖೈರು ದಾಸ್ತಾನು.**

| | |
|---|---|
| ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲ್ಪಟ್ಟಿದೆಯೇ? ಸದರಿ ದಾಸ್ತಾನು ಬೆಲೆಗೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಅದರಂತೆ ದಾಸ್ತಾನು ಮೌಲ್ಯ ನಿರ್ಧರಿಸಿದ್ದಾರೆಯೇ? | ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲಾಗಿದೆ. ಅಡಿಕೆಯ ಅಂತಿಮ ದಾಸ್ತಾನನ್ನು ಖರೀದಿ ಬೆಲೆಯ ಸರಾಸರಿ ಮೌಲ್ಯದ (AS-02 ನ Weighted Average ಪದ್ದತಿಯಲ್ಲಿ) ಮೇಲೆ ನಿರ್ಧರಿಸಲಾಗಿದೆ. ಹಾಗೂ ಇನ್ನುಳಿದ ಇತರೆ ದಾಸ್ತಾನಿನ ಮೌಲ್ಯವನ್ನು ಖರೀದಿ ಬೆಲೆ ಮೇಲೆ ನಿರ್ಧರಿಸಲಾಗಿದೆ. ಅಂತಿಮ ದಾಸ್ತಾನಿನ ಮೌಲ್ಯವನ್ನು ದಾಸ್ತಾನು ಬೆಲೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಇದೆಯೋ ಅದರಂತೆ ನಿರ್ಧರಿಸಲಾಗಿದೆ. ವಿವರವನ್ನು ಅನುಬಂಧ–15 ರಲ್ಲಿ ವಿವರಿಸಲಾಗಿದೆ. |
| ದಾಸ್ತಾನು ಆಗಿಂದಾಗ್ಗೆ ಇಲಾಖಾ ಅಧಿಕಾರಿಗಳು / ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆಯೆ? | ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲಾಗಿದೆ. |
| ದಾಸ್ತಾನು ರಿಜಿಸ್ಟರ್ ನಿಗದಿಪಡಿಸಿದ ನಮೂನೆಯಲ್ಲಿ ನಿರ್ವಹಿಸಲ್ಪಟ್ಟಿದೆಯೇ? | ದಾಸ್ತಾನು ರಿಜಿಸ್ಟರ್ ನಿರ್ವಹಿಸಲಾಗಿದೆ. |
| ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ / ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆಯೇ? | ಯಾವುದು ಇರುವುದಿಲ್ಲ. |

**31) ಇತರೆ ಬರತಕ್ಕವುಗಳು:**

| ಕ್ರ.ಸಂ | ವಿವರ | ಮೊತ್ತ (ರೂ.) |
|---|---|---|
| 1 | ಶಾಖಾ ಉಗ್ರಾಣಗಳ ಬಾಡಿಗೆ ಮುಂಗಡ | 43,82,860.00 |
| 2 | ಸಿಬ್ಬಂದಿ ಹಬ್ಬದ ಮುಂಗಡ | 6,90,000.00 |
| 3 | ಕ್ರೆಡಿಟಾರ್ಸ್ ಫಾರ್ ಎಕ್ಸ್‌ಪೆನ್ಸಸ್ (ವಿಮಾ ಕಂತು ಮುಂಗಡ) | 32,79,351.00 |
| 4 | ಇತರೆ ಮುಂಗಡ | 5,20,886.00 |
| 5 | ಭದ್ರತಾ ಠೇವಣಿ | 2,50,39,133.00 |
| 6 | ಸಿಬ್ಬಂದಿ ಗೃಹ ನಿರ್ಮಾಣ ಸಾಲ | 13,42,864.00 |
| 7 | ಬರಬೇಕಾದ ಬಾಕಿ | 2,05,16,296.80 |
| | **ಒಟ್ಟು ಮೊತ್ತ** | **5,57,71,390.80** |

| | |
|---|---|
| ಇತರೆ ಬರತಕ್ಕ ಬಾಬ್ತುಗಳ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ತಿಳಿವಳಿಕೆ ಪತ್ರ ನೀಡಲಾಗಿದೆಯೇ? | ಹಿಂದಿನ ಅಂತರ ಕಂಡುಬಂದಿರುವುದಿಲ್ಲ. |

| | |
|---|---|
| ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಪ್ರಸಕ್ತ ಸಾಲಿನಲ್ಲಿ ಯಾವುದೇ ಅಂತರ ಕಂಡುಬಂದಿರುವುದಿಲ್ಲ. |
| ಅನಾಮಧೇಯ ಬರತಕ್ಕವುಗಳು ಇವೆಯೇ? ಇದ್ದಲ್ಲಿ ಅವುಗಳನ್ನು ಆಡಿಟ್ ಆಕ್ಷೇಪಣೆಯಲ್ಲಿಟ್ಟು ವಸೂಲಿಗೆ ಸೂಚಿಸುವುದು. | ಯಾವುದೂ ಇರುವುದಿಲ್ಲ. |
| ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ಬರತಕ್ಕವುಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆಯಲ್ಲಿಡುವುದು. | ಯಾವುದೂ ಇರುವುದಿಲ್ಲ. |

5)ಎರಡು ವರ್ಷಕ್ಕೂ ಮೇಲ್ಪಟ್ಟು ಇತ್ಯರ್ಥವಾಗದೇ ಮುಂದುವರೆದ ಬರತಕ್ಕವುಗಳ ವಿವರ:

| ಕ್ರ. ಸಂ. | ವಿವರ | ಯಾವ ದಿನಾಂಕದಿಂದ | ಆಡಳಿತ ಮಂಡಳಿ ತೆಗೆದುಕೊಂಡ ಕ್ರಮ |
|---|---|---|---|
| 1 | ಕ್ರಾಮ್, ಶಿವಮೊಗ್ಗ | 31–03–2022 | ಕ್ರಾಮ್, ಶಿವಮೊಗ್ಗ ಇವರು ಸಂಘದಲ್ಲಿ ನೋಂದಾಯಿತ ವರ್ತಕ ರಾಗಿದ್ದು, ಸದರಿಯವರಿಂದ ಆರ್ಥಿಕ ವರ್ಷ 2021–22ನೇ ಸಾಲಿಗೆ ಸಂಬಂಧಿಸಿದ ಬಡ್ಡಿಯನ್ನು ಸ್ವೀಕರಿಸಲು ಬಾಕಿ ಇರುತ್ತದೆ. ಸದರಿ ಯವರು ಸಂಘದಲ್ಲಿ ವ್ಯಾಪಾರ ಭದ್ರತಾ ಠೇವಣಿಯನ್ನು ತೊಡಗಿಸಿ ರುತ್ತಾರೆ. ಸದರಿ ವರ್ತಕರಿಂದ ಬರಬೇಕಾದ ಬಡ್ಡಿ ರೂ.5,69,118.00 ಕೂಡಲೇ ವಸೂಲಿ ಮಾಡಲು ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ಕ್ರ್ಯಾಮ್, ಶಿವಮೊಗ್ಗ ಇವರಿಗೆ ನೋಟಿಸ್ ನೀಡಲಾಗಿದ್ದು, ವಸೂಲಾತಿ ಆಗದಿದ್ದಲ್ಲಿ ಪ್ರಕರಣ ದಾಖಲಿಸಲು ಕ್ರಮವಿಡಲಾಗುವುದು.** |

**32) ಮೋಸ, ವಂಚನೆ, ಹಣ ದುರುಪಯೋಗದ ವರದಿ:**

| | | |
|---|---|---|
| 1 | ನಗದು/ದಾಸ್ತಾನು ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕಪರಿಶೋಧನಾ ಇಲಾಖಾ ಮೇಲಾಧಿಕಾರಿಗಳಿಗೆ ಮಧ್ಯಂತರ ವರದಿ ಸಲ್ಲಿಸಲಾಗಿದೆಯೇ? | ವರದಿ ಸಾಲಿನಲ್ಲಿ ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲ. |
| 2 | ಸಂಘದಲ್ಲಿ ಜರುಗಿರುವ ಹಣ/ದಾಸ್ತಾನು ದುರುಪಯೋಗದ ಪ್ರತಿಯೊಂದು ಅಂಶದ ಸ್ವರೂಪವನ್ನು ದಿನಾಂಕವಾರು, ಹಣ ದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅನ್ವಯವಾಗುವುದಿಲ್ಲ. |
| 3 | ಸದರಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಮತ್ತು ಹಣ ದುರುಪಯೋಗ ಸಾಬೀತಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ (Criminal & Civil) ಕ್ರಮಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಆಪಾದಿತರಿಗೆ ವಿವರಣೆ ನೀಡುವಂತೆ ಸೂಚಿಸಿ ನೋಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ/ನೋಟೀಸ್/ಸಮನ್ಸ್‌ಗಳನ್ನು ನೀಡಲಾಗಿದೆಯೇ? | ಅನ್ವಯವಾಗುವುದಿಲ್ಲ. |

| | | |
|---|---|---|
| 4 | ಸದರಿ ನೋಟೀಸುಗಳಿಗೆ ಆಪಾದಿತರು ನೀಡಲಾದ ಸಮಜಾಯಿಷಿ/ ವಿವರಣೆಯನ್ನು ಪರಿಗಣಿಸಿರುವ ಬಗ್ಗೆ ಅಂದರೆ ಲೆಕ್ಕಪರಿಶೋಧಕರು ಒಪ್ಪದೇ ಇರುವ ಬಗ್ಗೆ/ ಒಪ್ಪಿರುವ ಬಗ್ಗೆ ಸ್ಪಷ್ಟವಾಗಿ ಮತ್ತು ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 5 | ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ಅನುಬಂಧಗಳ ರೂಪದಲ್ಲಿ ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 6 | ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತಃಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ಮೊಬಲಗಿಗೆ ಸೂಕ್ತ ಅವಕಾಶ ಕಲ್ಪಿಸಿರುವುದರ ಬಗ್ಗೆ ಹಾಗೂ ಹಣ ದುರುಪಯೋಗದ ಮೊಬಲಗನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 7 | ಹಣ ದುರುಪಯೋಗದ ಮೊಬಲಗನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 8 | ಮಾನ್ಯ ನಿರ್ದೇಶಕರವರ ಸುತ್ತೋಲೆ ಸಂಖ್ಯೆ: ಲೆಪಶಾ–1/ ಇತರೆ/ಲೆಪನೆ/16/2016–17, ದಿ:23.02.2017ರ ಹಾಗೂ ನಿರ್ದೇಶನಗಳಂತೆ ಹಣ ದುರುಪಯೋಗವುಳ್ಳ ವರದಿಗಳನ್ನು ಲೆಕ್ಕಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಗೊಂಡು, ಅವರು ಸೂಚಿಸಿರುವ ಎಲ್ಲಾ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |

## 33) ನಿಬಂಧಕರ ಆದೇಶಗಳ ಅನುಪಾಲನೆ

| | |
|---|---|
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ? | ಅನ್ವಯವಾಗುವುದಿಲ್ಲ. |
| ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ? | ಅನ್ವಯವಾಗುವುದಿಲ್ಲ. |

**34) ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು:**

(ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ)

| | | |
|---|---|---|
| ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ | ಚುನಾಯಿತ ಪ್ರತಿನಿಧಿಗಳು | 19 |
| | ಪದ ನಿಮಿತ್ತ ಅಧ್ಯಕ್ಷರು | 01 |
| | ಪದ ನಿಮಿತ್ತ ನಿರ್ದೇಶಕರು | 01 |
| | ವೃತ್ತಿಪರ ನಿರ್ದೇಶಕರು | 02 |
| | ಒಟ್ಟು | 23 |
| ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ | ಸಂಘದ ಉಪ ವಿಧಿ ಭಾಗ– 6, ಕಂಡಿಕೆ ಸಂಖ್ಯೆ 44(3)(ಎ) ರಂತೆ ಪರಿಶಿಷ್ಟ ಜಾತಿ–1 ಪರಿಶಿಷ್ಟ ವರ್ಗದ–1, ಮಹಿಳಾ ಸದಸ್ಯರ–2 ಹಾಗೂ ಹಿಂದುಳಿದ ವರ್ಗದ–2, ಸಾಮಾನ್ಯ ವರ್ಗ– 13 | |
| ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ | 27/02/2025 | |
| ಮಂಡಳಿಯ ಅವಧಿ | 5 ವರ್ಷ | |
| ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ | ಯಾವುದು ಇರುವುದಿಲ್ಲ. | |
| ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ | ಆಡಳಿತ ಮಂಡಳಿ ಸಭೆ | 10 |
| | ಕಾರ್ಯನಿರ್ವಾಹಕ ಸಮಿತಿ ಸಭೆ | 12 |
| | ಲೆಕ್ಕಪರಿಶೋದನೆ ಮತ್ತು ಹಣಕಾಸು ಸಮಿತಿ ಸಭೆ | 9 |
| | ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ | 9 |
| | ಅಡಿಕೆ ಖರೀದಿ ವ್ಯವಹಾರ ಸಮಿತಿ | 10 |
| ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ | ಈ ಮೇಲ್ಕಂಡ ಸಭೆಗಳಿಗೆ ಆದ ವೆಚ್ಚ ರೂ. 3,64,107.00 | |
| ನಿರ್ದೇಶಕರ ತರಬೇತಿ / ಅಧ್ಯಯನ ಪ್ರವಾಸ ಕಾರ್ಯಕ್ರಮಗಳ ವಿವರ:– | ನಿರ್ದೇಶಕರ ತರಬೇತಿ / ಅಧ್ಯಯನ ಪ್ರವಾಸ ಕಾರ್ಯಕ್ರಮಗಳು ಯಾವುದು ಇರುವುದಿಲ್ಲ. | |
| ನಿರ್ದೇಶಕರ ತರಬೇತಿ / ಅಧ್ಯಯನ ಕಾರ್ಯಕ್ರಮಗಳಿಗೆ ಆದ ವೆಚ್ಚ | ಯಾವುದು ಇರುವುದಿಲ್ಲ. | |
| ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ. | ವರದಿ ಸಾಲಿನಲ್ಲಿ 10 ಆಡಳಿತ ಮಂಡಳಿ ಸಭೆಗಳು ಜರುಗಿದ್ದು, ಸಭೆಯಲ್ಲಿ ಸಂಘದ ಕಾರ್ಯಚಟುವಟಿಕೆ, ಹಣಕಾಸು ನಿರ್ವಹಣೆ, ಸಂಘದ ಸದಸ್ಯತ್ವಕ್ಕೆ ಸೇರ್ಪಡೆ, ಸಂಘದ ಸಿಬ್ಬಂದಿ | |

| | |
|---|---|
| | ನೇಮಕಾತಿ ಬಗ್ಗೆ, ಸುಸ್ತಿ ಸಾಲದ ವಸೂಲಾತಿ ಬಗ್ಗೆ, ಅಡಿಕೆ ಆವಕ–ಜಾವಕ ಹಾಗೂ ಇನ್ನಿತರ ಅಂಶಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ತೀರ್ಮಾನ ಕೈಗೊಂಡಿರುತ್ತಾರೆ. |

**35) ಸಂಘದ ಆಡಳಿತ :**

ನಿರ್ದೇಶಕರ ಸಭಾ ಹಾಜರಾತಿ

| ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|
| **ಅನುಬಂಧ– 19** | | | |

**ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ**

| | |
|---|---|
| ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆಯೇ? | ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುತ್ತಿದ್ದಾರೆ |
| ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ? | ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆ |
| ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವರದಿ ಸಾಲಿನಲ್ಲಿ ಜರುಗಿದ ಸಭೆಗಳ ನಡವಳಿ ಮತ್ತು ನಿರ್ಣಯಗಳನ್ನು ಯಥಾವತ್ತಾಗಿ ವಿಷಯ ಸೂಚಿಯಂತೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಸಭೆಯ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ. |

**ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ**

| | |
|---|---|
| ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ? | ಹೌದು |
| ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಠ ವ್ಯವಹಾರ ನಡೆಸಿದ್ದಾರೆಯೆ? | ಹೌದು |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ | ಅನುಬಂಧ 18ರಲ್ಲಿ ವಿವರಿಸಿದ್ದು, ವಿವರವನ್ನು ವರದಿಗೆ ಲಗತ್ತಿಸಲಾಗಿದೆ. |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ | ಅನ್ವಯಿಸುವುದಿಲ್ಲ. |
| ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ. | ಮುದ್ದತ್ತು ಮೀರಿರುವ ನಿರ್ದೇಶಕರ ಮತ್ತು ಕುಟುಂಬದವರ ಸಾಲ ಇರುವುದಿಲ್ಲ. ಅನುಬಂಧ 18 ಲಗತ್ತಿಸಿದೆ. |

**36) ವಾರ್ಷಿಕ ಸಾಮಾನ್ಯ ಸಭೆ:**

| | |
|---|---|
| 1. ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | 23–09–2024 |
| 2. ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ | 1585 |
| 3. ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ | 5890 |
| 4. ಸಭೆಯ ವಿಷಯ ಪಟ್ಟಿಯನ್ನು ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆ ರಲ್ಲಿ ನಿಗದಿಪಡಿಸಿದಂತೆ ವಾರ್ಷಿಕ ಮಹಾಸಭೆಯಲ್ಲಿ ಅವಶ್ಯವಿರುವ ವಿಷಯಗಳನ್ನು ಒಳಗೊಂಡಿರುವುದೆ? ವಿವರಿಸುವುದು. | ಸಂಘದ ವಾರ್ಷಿಕ ಸಭೆಯಲ್ಲಿ ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆಯಲ್ಲಿ ನಿಗದಿಪಡಿಸಿದಂತೆ ಅಗತ್ಯವಿರುವ ವಿಷಯಗಳನ್ನೊಳಗೊಂಡಂತೆ ಒಟ್ಟು 30 ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿರುವುದನ್ನು ಗಮನಿಸಲಾಗಿದೆ. |
| 5. ಈ ಮೇಲಿನ ನಿಯಮಗಳಲ್ಲಿ ನಿಗದಿಪಡಿಸಿದ ಎಲ್ಲಾ ವಿಷಯಗಳ ಕುರಿತು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆಯೇ? | ಸಂಘದ ವಾರ್ಷಿಕ ಸಭೆಯಲ್ಲಿ ಮಂಡನೆ ಮಾಡಿರುವ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಯಥಾವತ್ತಾಗಿ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆ. |
| 6. ಅವಶ್ಯವಿರುವ ವಿಷಯಗಳ ಪೈಕಿ ಕೈಬಿಟ್ಟು ಹೋದ ವಿಷಯಗಳ ಕುರಿತು ವಿಮರ್ಶಿಸುವುದು. | ಯಾವುದು ಇರುವುದಿಲ್ಲ. |

| | | | |
|---|---|---|---|
| 7. ಕಾಯ್ದೆ ಕಲಂ 28ರಂತೆ ಸಂಘದಲ್ಲಿ ವರದಿ ಸಾಲಿನಲ್ಲಿ ವಿಶೇಷ ಮಹಾಸಭೆ ಜರುಗಿದ್ದಲ್ಲಿ | ಸಭೆ ದಿನಾಂಕ | ವಿಷಯ | ನಿಬಂಧಕರ ಮಂಜೂರಿ ಇದ್ದಲ್ಲಿ |
| | – | – | ವಿಶೇಷ ಮಹಾಸಭೆ ಜರುಗಿರುವುದಿಲ್ಲ. |
| 8. ವಾರ್ಷಿಕ ಮಹಾಸಭೆಯ/ವಿಶೇಷ ಮಹಾ ಸಭೆಯ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವಾರ್ಷಿಕ ಮಹಾಸಭೆ ನಿಯಮಾನುಸಾರ ನಡೆದಿದ್ದು, ಅಗತ್ಯವಿರುವ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆದಿರುತ್ತದೆ ಮತ್ತು ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕವಾಗಿ ಸಮಜಾಯಿಷಿ ನೀಡಿರುವುದನ್ನು ಮತ್ತು ಅಗತ್ಯವಿರುವ ಹಾಗೂ ಪ್ರಾಮುಖ್ಯವಿರುವ ವಿಷಯಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಂಡಿರುವುದನ್ನು ಗಮನಿಸಲಾಗಿದೆ. | | |

**37) ಸಿಬ್ಬಂದಿ ವರ್ಗ**

| | | | |
|---|---|---|---|
| | 1 | ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ. | ಸಂಘದಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ–175, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ–130 |
| | 2 | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವ ಬಗ್ಗೆ. | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಲಾಗಿದೆ. |
| | 3 | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ. | ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ. |

| | | | |
|---|---|---|---|
| | 4 | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು. | **ಅನುಬಂಧ – 20** |
| | 5 | ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ: | **ಅನುಬಂಧ– 20** |
| | 6 | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು ರೂ. 8,33,41,564.00 |
| | 7 | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ 1.80% |
| | 8 | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ/ ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು. | ವರದಿ ಸಾಲಿನಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿದ್ದು, ಈ ನೇಮಕಾತಿಯು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 18ರಂತೆ ಇರುತ್ತದೆ. |

| | | | |
|---|---|---|---|
| | 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಡೀಕರಿಸುವುದು. | ಸಿಬ್ಬಂದಿ ಬೋನಸ್ ಪಾವತಿ ಸಂಬಂಧ ಈ ಸಾಲಿನಲ್ಲಿ ಲಾಭ ನಷ್ಟ ತ:ಖ್ತೆಯಲ್ಲಿ ಅನುಗ್ರಹ ಪೂರ್ವಕ ಕೊಡಿಗೆ / ಬೋನಸ್ ಎಂದು ಸಂಬಳದ ಶೇ.20% ಖರ್ಚು ಬರೆದಿದ್ದು ಪಾವತಿಗೆ ವಾರ್ಷಿಕ ಮಹಾಸಭೆಯ ಅನುಮೋದನೆ ಅಗತ್ಯವಿದೆ. |
| | 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆಯಾಗಿರುತ್ತದೆ. |
| | 11 | ಸಿಬ್ಬಂದಿಗಾಗಿ ಖರ್ಚುಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ? | ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯಲ್ಲಿ ಇರುತ್ತದೆ. |
| | 12 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ಸಿಬ್ಬಂದಿ ತರಬೇತಿಗೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ಬೆಂಗಳೂರು, ಇವರ ಆಶ್ರಯದಲ್ಲಿ ಹೊಸದಾಗಿ ಸೇರ್ಪಡೆಗೊಂಡ ಸಿಬ್ಬಂದಿಗಳಿಗೆ 10 ದಿನಗಳ ಕಾರ್ಯಗಾರವನ್ನು ನಡೆಸಿರುತ್ತಾರೆ. ಅದೇ ರೀತಿ ಸಂಘದ ಸಿಬ್ಬಂದಿಗಳಿಗೆ ಸಂಘದ ಮುಖ್ಯ ಕಛೇರಿಯಲ್ಲಿ ಒಂದು ದಿನದ ತರಬೇತಿ ಶಿಬಿರ ಆಯೋಜಿಸಲಾಗಿದೆ. ಈ ತರಬೇತಿಯಲ್ಲಿ ವ್ಯಾಪಾರ ಅಭಿವೃದ್ಧಿ ಕಾರ್ಯಕ್ರಮ, ಸಹಕಾರ ಸಂಘಗಳಿಗೆ ಅನ್ವಯವಾಗುವ ತೆರಿಗೆ |

| | | | |
|---|---|---|---|
| | | | ವಿಧಾನ, ಗ್ರಾಹಕರ ಸಂಬಂಧ ನಿರ್ವಹಣೆ, ಕಛೇರಿ ಶಿಷ್ಟಾಚಾರಗಳು ಮತ್ತು ಒತ್ತಡ ನಿರ್ವಹಣೆ ಹಾಗೂ ಸಮಯ ನಿರ್ವಹಣೆ ಈ ರೀತಿಯ ವಿಷಯಗಳನ್ನು ತರಬೇತಿ ರೂಪದಲ್ಲಿ ನೀಡಲಾಗಿದೆ. |
| | 13 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ರೂ.2,42,356.70 |
| | 14 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ತರಬೇತಿ ಕಾರ್ಯಕ್ರಮ ನಡೆದಿರುವುದಿಲ್ಲ, ಸದಸ್ಯರಿಗೆ ನಿಯಮಿತವಾಗಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮ ನಡೆಸುವುದು ಸೂಕ್ತ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ತಾಲ್ಲೂಕು ಮಟ್ಟದಲ್ಲಿ ಷೇರುದಾರರ ಸಮಾಲೋಚನಾ ಸಭೆಯನ್ನು ನಡೆಸಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಕನಿಷ್ಟ ವ್ಯವಹಾರ ಇತ್ಯಾದಿಗಳ ಬಗ್ಗೆ ತಿದ್ದುಪಡಿಯಾದ ಸಹಕಾರ ಕಾಯ್ದೆ, ನಿಯಮ ಮತ್ತು ಸಂಘದ ಉಪವಿಧಿಗಳ ಕುರಿತು ಹಾಗೂ ಸಂಘದಿಂದ ನೀಡುತ್ತಿರುವ ಸೌಲಭ್ಯ ಇತ್ಯಾದಿಗಳ ಬಗ್ಗೆ ಮಾಹಿತಿ ಯನ್ನು ನೀಡುವ ಕುರಿತು ತರಬೇತಿ ಹಮ್ಮಿಕೊಳ್ಳ ಲಾಗುತ್ತಿದೆ.** |
| | 15 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಅನ್ವಯಿಸುವುದಿಲ್ಲ |

**38)ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು :**

ಹಣಕಾಸಿನ ವರದಿಯ ವಿಶ್ಲೇಷಣೆ

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ಸಂಘದ ಒಟ್ಟು ವಹಿವಾಟು | 1297,38,19,130.81 | 1244,42,81,566.50 |
| ಸಂಘದ ಒಟ್ಟು ದುಡಿಯುವ ಬಂಡವಾಳ | 462,68,85,453.20 | 420,79,61,717.09 |
| ಸಂಘದ ಲಾಭ ಅಥವಾ ನಷ್ಟ | 5,52,62,459.08 | 5,25,35,835.64 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | 5,52,62,459.08 | 5,25,35,835.64 |

**39)ತಲಾ ಷೇರಿನ ಗಳಿಕೆ**

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ನಿವ್ವಳ ಲಾಭ | 5,52,62,459.08 | 5,25,35,835.64 |
| ಒಟ್ಟು ಷೇರುಗಳು | 9,02,685 | 8,76,152 |
| | ಒಟ್ಟು ಷೇರು ಬಂಡವಾಳವನ್ನು ಪ್ರಸಕ್ತ ಸಾಲಿನ ಷೇರಿನ ಮುಖಬೆಲೆ ರೂ.100/- ರಿಂದ ಭಾಗಿಸಲಾಗಿದೆ. | |
| ತಲಾ ಷೇರಿನ ಗಳಿಕೆ | 61.22 | 59.96 |

**40)ಆರ್ಥಿಕ ತ:ಖ್ತೆಗಳ ಬಗ್ಗೆ ವಿಮರ್ಶೆ :**

| | | |
|---|---|---|
| | ರೂಪಾಂತರ / ಸಂಸ್ಕರಣ ಘಟಕ ಹಾಗೂ ಯಂತ್ರೋಪಕರಣಗಳು: | |
| 1 | ಸಂಘವು ರೂಪಾಂತರ/ಸಂಸ್ಕರಣ ಘಟಕಗಳನ್ನು ಹೊಂದಿದೆಯೇ? ಹೊಂದಿದ್ದರೆ ವಿವರಗಳನ್ನು ಕೊಡುವುದು. (ಅಕ್ಕಿ ಗಿರಣಿ, ಜಿನ್ನಿಂಗ್, ಪ್ರಸ್ಸಿಂಗ್, ಶೈತ್ಯಾಗಾರ ಇತ್ಯಾದಿ) | ಸಂಘವು ರೂಪಾಂತರ / ಸಂಸ್ಕರಣ ಘಟಕಗಳನ್ನು ಹೊಂದಿರುವುದಿಲ್ಲ. |
| 2 | ಈ ಘಟಕಗಳಿಗೆ ಬಂಡವಳೀಕರಿಸಿದ ಯಂತ್ರೋಪಕರಣಗಳ ವಿವರ. | ಅನ್ವಯವಾಗುವುದಿಲ್ಲ. |

| ಕ್ರಮ ಸಂಖ್ಯೆ. | ಘಟಕ | ಮೊತ್ತ |
|---|---|---|
| 1. | | |
| 2. | | |

| | | |
|---|---|---|
| 3 | ಈ ಯಂತ್ರೋಪಕರಣಗಳ ರಿಜಿಸ್ಟರ್ ಬರೆಯಲಾಗಿದೆಯೇ? ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ? | ಅನ್ವಯವಾಗುವುದಿಲ್ಲ. |
| 4 | ವರದಿ ವರ್ಷದಲ್ಲಿ ಹೊಸ ಯಂತ್ರೋಪಕರಣ ಗಳನ್ನು ಖರೀದಿಸಲಾಗಿದೆಯೇ? ಈ ಬಗ್ಗೆ ಅನುಸರಿಸಿದ ವಿಧಿ–ವಿಧಾನಗಳು ಸಮರ್ಪಕ ವಾಗಿವೆಯೇ? | ಅನ್ವಯವಾಗುವುದಿಲ್ಲ. |
| 5 | ವರ್ಷಾಂತ್ಯಕ್ಕೆ ಯಂತ್ರೋಪಕರಣಗಳ ಮೇಲೆ ನಿಗದಿತ ದರದಲ್ಲಿ ಸವಕಳಿ ತೆಗೆಯಲಾಗಿದೆಯೇ? ಸವಕಳಿ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 6 | ಯಂತ್ರೋಪಕರಣಗಳ ಬಿಡಿ ಭಾಗಗಳ (ಉಪಕರಣ) ಖರೀದಿ, ಉಪಯೋಗ ಹಾಗೂ ದಾಸ್ತಾನು ಸಂಬಂಧಿಸಿದಂತೆ ಸಮರ್ಪಕ ರೀತಿಯಲ್ಲಿ ಲೆಕ್ಕಪತ್ರ ಇಡಲಾಗಿದೆಯೇ? | ಅನ್ವಯವಾಗುವುದಿಲ್ಲ. |
| 7 | ವರ್ಷಾಂತ್ಯಕ್ಕೆ ಇದ್ದ ಬಿಡಿ ಭಾಗಗಳ ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ ? | ಅನ್ವಯವಾಗುವುದಿಲ್ಲ. |
| 8 | ಯಂತ್ರೋಪಕರಣಗಳಿಗೆ ಸಮರ್ಪಕವಾದ ವಿಮೆ ಮಾಡಿಸಲಾಗಿದೆಯೇ? ವಿಮೆ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 9 | ವರದಿ ವರ್ಷದಲ್ಲಿ ಯಂತ್ರೋಪಕರಣಗಳು ಪೂರ್ತಿ ಸಾಮರ್ಥ್ಯದಷ್ಟು ಉಪಯೋಗ ವಾಗಿವೆಯೇ? ಇಲ್ಲದಿದ್ದಲ್ಲಿ ಉಪಯೋಗವಾದ ಪ್ರತಿಶತ ಪ್ರಮಾಣವೆಷ್ಟು? | ಅನ್ವಯವಾಗುವುದಿಲ್ಲ. |

| | | | |
|---|---|---|---|
| | * | **ಕಮಿಷನ್ ವ್ಯವಹಾರ:** | |
| | 1 | ಸಂಘವು ಕೃಷಿ ಉತ್ಪನ್ನಗಳನ್ನು ದಲ್ಲಾಳಿಗಳ ಮುಖಾಂತರ ಕಮಿಷನ್ ಆಧಾರದ ಮೇಲೆ ಮಾರಾಟ ಮಾಡುವ ವ್ಯವಹಾರ ಮಾಡಿದೆಯೇ? | ಸಂಘವು ಅಡಿಕೆ ದಲ್ಲಾಳಿ ವ್ಯವಹಾರ ಮಾಡಿದೆ. |
| | 2 | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕ ಗಳನ್ನುಸಮರ್ಪಕವಾಗಿ ನಿರ್ವಹಿಸಲಾಗಿದೆಯೇ? | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ. |
| | 3 | ಕಮೀಷನ್ ಆಧಾರದ ಮೇಲೆ ಇನ್ನಿತರ ಕೃಷಿಯೇತರ ಉತ್ಪನ್ನಗಳ ಮಾರಾಟ ವ್ಯವಹಾರ ಮಾಡಿದೆಯೇ? ಇದ್ದರೆ ವಿವರಗಳು. | ಯಾವುದೇ ರೀತಿಯ ವ್ಯವಹಾರ ಮಾಡಿರುವುದಿಲ್ಲ. |
| | 4 | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳಲಾಗಿದೆಯೇ ? | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳಲಾಗಿದೆ. |

5 ಕಮೀಷನ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸಂಕ್ಷಿಪ್ತ ವಿವರಗಳನ್ನು ನೀಡುವುದು.

**ಪ್ರಸಕ್ತ ಸಾಲಿನಲ್ಲಿ ವರ್ತಕರಿಂದ ಬಂದ ದಲ್ಲಾಳಿ ವಿವರ:** ಕ್ಯಾಂಪ್ಕೋ ಸಂಸ್ಥೆಯವರಿಂದ ಅಡಿಕೆ ಖರೀದಿಯ ಮೇಲೆ ಶೇ.1.30 ಹಾಗೂ ಹಾಸನ ಅಡಿಕೆ ಬೆಳೆಗಾರರ ಸಹಕಾರ ಸಂಘದಿಂದ (ಹಾಪ್ಸ್‌ಕೋಸ್), ಕ್ರಾಮ್ಕೋ ಹಾಗೂ ಖಾಸಗಿ ವರ್ತಕರಿಂದ ಶೇ.1.60ರ ದರದಲ್ಲಿ ದಲ್ಲಾಳಿ ಪಡೆಯುತ್ತಿದ್ದು, 2024–25ನೇ ಸಾಲಿನಲ್ಲಿ ಪಡೆದ ದಲ್ಲಾಳಿ ವಿವರ ಕೆಳಕಂಡಂತಿರುತ್ತದೆ.

| ವಿವರ | ಟ್ರೇಡರ್ಸ್ ಮೊತ್ತ | ಪಡೆದ ದಲ್ಲಾಳಿ | ಮೂಟೆ | ತೂಕ | ಶೇಕಡ ವಹಿವಾಟು |
|---|---|---|---|---|---|
| ಕ್ಯಾಂಪ್ಕೋ | 191,17,85,867.00 | 2,47,06,527.00 | 57,169 | 38,38,327 | 23.28 |
| ಹಾಪ್‌ಕೋಸ್ | 26,03,37,675.00 | 41,88,021.00 | 7,688 | 5,23,246.40 | 3.17 |
| ಕ್ರಾಮ್‌ಕೋ | 1,28,35,048.00 | 2,22,003.00 | 372 | 25,666.10 | 0.16 |
| ಖಾಸಗಿ ವರ್ತಕರು | 247,46,54,249.00 | 4,05,44,971.00 | 1,14,048 | 64,26,929.30 | 30.14 |
| ದಲ್ಲಾಳಿ ವಹಿವಾಟು ಒಟ್ಟು | 465,96,12,839.00 | 6,96,61,522.00 | 1,79,277 | 1,08,14,168.80 | 56.75 |
| ಮಾಮ್‌ಕೋಸ್ ಖರೀದಿ | 355,22,16,143.00 | – | 1,09,091 | 72,17,089.110 | 43.25 |
| **ಒಟ್ಟು** | **821,18,28,982.00** | **6,96,61,522.00** | **2,88,368** | **1,80,31,257.91** | **100.00** |

ಮೇಲ್ಕಂಡಂತೆ ನಿಗದಿತ ದರಕ್ಕನುಗುಣವಾಗಿ ದಲ್ಲಾಳಿ ಪಡೆದಿದ್ದು, ನಿಯಮಾನುಸಾರ ವರ್ತಕರು ಟಿ.ಡಿ.ಎಸ್. ಕಟಾಯಿಸಿಕೊಂಡಿರುತ್ತಾರೆ. ಸಂಘದಲ್ಲಿ ಹಿಂದಿನ ಸಾಲಿಗೆ ಹೋಲಿಸಿದಾಗ ಅಡಿಕೆ ವಹಿವಾಟು ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ. ಮೇಲ್ಕಂಡ ದಲ್ಲಾಳಿ ವ್ಯವಹಾರದಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ.26.61ರಷ್ಟು ಖರೀದಿ ವ್ಯವಹಾರವು ಸಹಕಾರ ಸಂಸ್ಥೆಗಳಿಂದ ಆಗಿದ್ದು ಶೇ.30.14ರಷ್ಟು ವ್ಯವಹಾರವು

| | | |
|---|---|---|
| | | ಖಾಸಗಿ ವರ್ತಕರಿಂದ ನಡೆದಿರುವುದು ಕಂಡು ಬಂದಿರುತ್ತದೆ. ಒಟ್ಟು ಅಡಿಕೆ ವಹಿವಾಟಿನಲ್ಲಿ ಮಾಮ್‌ಕೋಸ್ ಸಂಸ್ಥೆಯ ಖರೀದಿ ಪ್ರಮಾಣ 43.25% ರಷ್ಟಿರುತ್ತದೆ. ಈ ಪ್ರಮಾಣವು ಹಿಂದಿನ ಸಾಲಿಗೆ ಹೋಲಿಸಿದಾಗ ಶೇ.64.88 ರಷ್ಟು ವೃದ್ಧಿಯಾಗಿರುವುದನ್ನು ಗಮನಿಸಲಾಗಿದೆ. |

**41)(1)ಆದಾಯ ತೆರಿಗೆ ಸಲ್ಲಿಕೆ (IT returns) ವಿವರಗಳು:**

| | | |
|---|---|---|
| 1 | ಸಂಘದ ಪ್ಯಾನ್ | AAAJM0788P |
| 2 | ಹಿಂದಿನ ಆರ್ಥಿಕ ವರ್ಷದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲಾಗಿದೆಯೇ? | ಸಲ್ಲಿಸಲಾಗಿದೆ. |
| | ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ದಿನಾಂಕ | 29–09–2024 |
| | ITR - V Acknowledgement Number | 544733231290924 |
| 3 | ITR - V ಪ್ರತಿಯನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು. | ಲಗತ್ತಿಸಿದೆ. |

**41)(2)ಜಿ.ಎಸ್.ಟಿ. ವಿವರಗಳು:**

| | | |
|---|---|---|
| 1 | ಜಿ.ಎಸ್.ಟಿ. ನೋಂದಣಿ ಸಂಖ್ಯೆ (ನೋಂದಣಿ ಹೊಂದಿದ್ದಲ್ಲಿ) | 29AAAJM0788P1ZD |
| 2 | ಸಂಘದಿಂದ ಜಿ.ಎಸ್.ಟಿ. ಕಾನೂನಿನಡಿ ಬಡ್ಡಿ ಮತ್ತು ದಂಡಗಳು ಪಾವತಿಯಾಗಿದ್ದಲ್ಲಿ ವಿವರಗಳನ್ನು ನೀಡುವುದು. | ಯಾವುದೂ ಇರುವುದಿಲ್ಲ. |

**42)(1) ಸಹಕಾರ ಸಂಘವು ಹೊಂದಿರುವ ನೌಕರರ ಭವಿಷ್ಯ ನಿಧಿ ನೋಂದಣಿ ಮತ್ತು ರಿಟರ್ನ್ಸ್‌ಗಳ ಬಗ್ಗೆ ವಿವರಗಳು:**

| | | |
|---|---|---|
| 1 | ಸಹಕಾರ ಸಂಘ ಹೊಂದಿರುವ ನೌಕರರ ಭವಿಷ್ಯ ನಿಧಿ ಕಛೇರಿಯಲ್ಲಿನ ನೋಂದಣಿ ವಿವರ | KNSHG0002619000 |
| 2 | ಮಾಸಿಕ ರಿಟರ್ನ್ಸ್, ತ್ರೈಮಾಸಿಕ ರಿಟರ್ನ್ಸ್‌ಗಳನ್ನು ಮತ್ತು ವಾರ್ಷಿಕ ರಿಟರ್ನ್ಸ್‌ಗಳನ್ನು ಕಾಲಕಾಲಕ್ಕೆ ಸಲ್ಲಿಸಲಾಗುತ್ತಿದೆಯೇ. | ಸಲ್ಲಿಸಲಾಗಿದೆ. |
| 3 | ನಿಗದಿತ ಸಮಯಕ್ಕೆ ಕಂತುಗಳನ್ನು ಪಾವತಿಸದಿರುವುದಕ್ಕೆ ಮತ್ತು ಇತರೆ ಯಾವುದಾದರೂ ದಂಡ ವಿಧಿಸಲಾಗಿದೆಯೇ, ದಂಡದ ಮೊತ್ತ ಮತ್ತು ದಂಡಕ್ಕೆ ಕಾರಣಗಳು. ಸದರಿ ದಂಡಕ್ಕೆ ಸಂಬಂಧಿಸಿದವರುಗಳ ಜವಾಬ್ದಾರಿ ಗುರುತಿಸಿ ಆರ್ಥಿಕ ತಃಖ್ತೆಯಲ್ಲಿ ವಸೂಲಾತಿಗೆ ತೋರಿಸಿರುವ ಬಗ್ಗೆ ವಿವರ. | ಯಾವುದೂ ಇರುವುದಿಲ್ಲ. |
| 4 | ಇತರೆ ವಿವರಗಳು | – |

**42)(2) ಸಹಕಾರ ಸಂಘವು ವೃತ್ತಿ ತೆರಿಗೆ, ಹೊಂದಿದ ವಿವಿಧ ಲೈಸೆನ್ಸ್‌ಗಳ ರಿನಿವಲ್ ಮಾಡಿರುವ ಬಗ್ಗೆ ವಿವರಗಳು :**

| | | |
|---|---|---|
| 1 | ಸಹಕಾರ ಸಂಘದ ವೃತ್ತಿ ತೆರಿಗೆ ಪಾವತಿ ಮತ್ತು ಬಾಕಿ ಇತ್ಯಾದಿಗಳ ಬಗ್ಗೆ ವಿವರ. | ಪಾವತಿಸಲಾಗಿದೆ. |
| 2 | ಸಹಕಾರ ಸಂಘದ ನಿಯಂತ್ರಿತ ಆಹಾರ ಧಾನ್ಯ ಮಾರಾಟ ಲೈಸೆನ್ಸ್ ನಂ. ಆಹಾರ ಸಂರಕ್ಷಣೆ ಕಾಯ್ದೆಯಂತಿನ ಲೈಸೆನ್ಸ್, ರಾಸಾಯನಿಕ ಗೊಬ್ಬರ ಮಾರಾಟ ಲೈಸೆನ್ಸ್ ನಂ. ಇತ್ಯಾದಿಗಳ ರಿನಿವಲ್ ದಿನಾಂಕ ಮುಂತಾದವುಗಳ ಬಗ್ಗೆ ವಿವರ. | ಲೈಸೆನ್ಸ್ ನಂ. 10020043002994 FSSAI ಪರವಾನಗಿ ದಿನಾಂಕ:19/01/2026 ರವರೆಗೆ ಚಾಲ್ತಿಯಲ್ಲಿರುತ್ತದೆ. ರಾಸಾಯನಿಕ ಗೊಬ್ಬರ ಮಾರಾಟ ಇರುವುದಿಲ್ಲ. |
| 3 | ಸಹಕಾರ ಸಂಘದ ತೂಕ ಮತ್ತು ಅಳತೆಯ ಲೈಸೆನ್ಸ್ ನಂ. ಮತ್ತು ರಿನಿವಲ್ ದಿನಾಂಕ ಮುಂತಾದವುಗಳ ಬಗ್ಗೆ ವಿವರ. | ಕಾಲಕಾಲಕ್ಕೆ ತೂಕ ಮತ್ತು ಅಳತೆಯ ಲೈಸೆನ್ಸ್ ನವೀಕರಣ ಆಗಿರುವುದನ್ನು ಗಮನಿಸಿದೆ. |
| 4 | ಇತರೆ ವಿವರಗಳು | – |

**43) ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ/ವಿಶ್ಲೇಷಣೆ:**

ಸಂಘದ ವ್ಯಾಪಾರ ತ:ಖ್ತೆ: (ರೂ. ಲಕ್ಷಗಳಲ್ಲಿ)

| ವಿವರ | ಪ್ರಾರಂಭದ ದಾಸ್ತಾನು | ವರದಿ ಸಾಲಿನಲ್ಲಿ ಖರೀದಿ | ಅಖ್ಯೆರು ದಾಸ್ತಾನು | ವರದಿ ಸಾಲಿನಲ್ಲಿ ಮಾರಾಟ | ಮಾರಾಟ ಲಾಭ | ಮಾರಾಟ ಲಾಭ ಪ್ರತಿಶತ |
|---|---|---|---|---|---|---|
| ಅಡಿಕೆ | 9,809 | 68719.44 | 18219.44 | 61342.07 | 1033.07 | 1.68 |
| ಮೈಲುತುತ್ತ | 159.76 | 287.15 | 3.25 | 498.13 | 54.48 | 10.93 |
| ಹೊಸ ಗೋಣಿಚೀಲ | 218.65 | 320.96 | 245.59 | 380.40 | 86.38 | 22.71 |
| ಗಟಾರ್ ಸ್ಪ್ರೇಯರ್ | 2.04 | – | 1.66 | 0.40 | 0.01 | 2.50 |
| ಸುಣ್ಣ | 5.25 | 43.2 | 1.50 | 54.53 | 7.59 | 13.90 |
| ರಾಳ | 0 | 26.89 | 0.16 | 33.21 | 6.48 | 19.51 |
| ಸಾವಯವ ಗೊಬ್ಬರ | 6.29 | 155.91 | 9.60 | 178.14 | 25.54 | 14.34 |
| ಪವರ್ ಸ್ಪ್ರೇಯರ್ | 0.19 | – | 0.19 | – | – | – |
| ಪ್ಲಾಸ್ಟಿಕ್ ಪ್ರೋಡಕ್ಟ್ | 0.60 | – | 0.26 | 0.39 | 0.04 | 10.26 |
| **ಒಟ್ಟು** | **10,201.8** | **69,553.55** | **18,481.65** | **62,487.32** | **1,213.59** | **1.94** |

| ವಿವರ | ಚೀಲ | ತೂಕ (ಕ್ವಿಂಟಾಲ್) | ಅಡಿಕೆ ಖರೀದಿ ಮೌಲ್ಯ | ಒಟ್ಟು ಖರೀದಿ ಮೌಲ್ಯದ ಪ್ರಮಾಣ |
|---|---|---|---|---|
| ಇತರೆ ಸಹಕಾರಿ ಸಂಸ್ಥೆಗಳಿಂದ | 67,129 | 45,237.23 | 228,12,25,861.00 | 33% |
| ಸದಸ್ಯರಿಂದ ನೇರವಾಗಿ | 32,976 | 22,306.21 | 102,10,98,814.00 | 15% |
| ಸಂಘದ ಶಾಖೆಗಳಿಂದ | 1,09,091 | 72,170.89 | 356,96,20,055.00 | 52% |
| **ಒಟ್ಟು** | **2,09,196** | **1,39,714.33** | **687,19,44,730.00** | **100%** |

**ಸಂಘದ ಪ್ರಸಕ್ತ ಸಾಲಿನ ವ್ಯಾಪಾರ ವಹಿವಾಟು ಕಳೆದ ಸಾಲಿನ ಹೋಲಿಕೆಯೊಂದಿಗೆ ಪ್ರಗತಿ ಸಂಕ್ಷಿಪ್ತ ಇಂತಿದೆ.**

| ಕ್ರ.ಸಂ. | ವಿವರ | ಹಿಂದಿನ ಸಾಲಿನಲ್ಲಿ | ಪ್ರಸಕ್ತ ಸಾಲಿನಲ್ಲಿ | ಶೇಕಡಾವಾರು ಪ್ರಗತಿ |
|---|---|---|---|---|
| 0 | ಆರಂಭಿಕ ದಾಸ್ತಾನು | 80,06,11,478.00 | 102,01,81,748.12 | 27.43 |
| 1 | ಇತರೆ ಖರೀದಿ | 11,15,24,367.90 | 8,34,12,766.41 | –25.21 |
| 2 | ಅಡಿಕೆ ಖರೀದಿ | 403,92,87,071.20 | 687,19,44,730.00 | 70.13 |
| 3 | ಇತರೆ ಮಾರಾಟ | 12,33,40,773.42 | 11,45,24,950.98 | –7.15 |
| 4 | ಅಡಿಕೆ ಮಾರಾಟ | 382,43,51,501.00 | 613,42,07,813.00 | 60.40 |
| 5 | ಆಖೈರು ದಾಸ್ತಾನು | 102,01,81,748.12 | 184,81,65,588.36 | 81.16 |
| 6 | ಖರೀದಿ ವೆಚ್ಚ | – | – | – |
| 7 | ವ್ಯಾಪಾರ ಲಾಭ | 1,64,51,105.44 | 12,13,59,107.81 | 637.70 |

| | | |
|---|---|---|
| 2 | ವ್ಯಾಪಾರ ಲಾಭದ ಪ್ರಮಾಣವು ಸಾಮಾನ್ಯವಾಗಿ ಸರಿಯಿರುವ ಬಗ್ಗೆ. | ವರದಿ ಸಾಲಿನಲ್ಲಿ ಅಡಿಕೆ ಮಾರಾಟದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದ್ದು ನಿವ್ವಳ ಮಾರ್ಜಿನ್‌ನಲ್ಲಿ ಸಹ ಏರಿಕೆಯಾಗಿರುವುದನ್ನು ಗಮನಿಸಲಾಗಿದೆ. |
| 3 | ವ್ಯಾಪಾರ ನಷ್ಟವಿದ್ದಲ್ಲಿ ಕಾರಣಗಳೊಂದಿಗೆ ವಿವರಿಸುವುದು. | ಅನ್ವಯವಾಗುವುದಿಲ್ಲ |
| 4 | ವರದಿ ಸಾಲಿನಂತ್ಯಕ್ಕೆ ಇರುವ ಆಖೈರು ದಾಸ್ತಾನು ಯಾರಿಂದಲಾದರೂ ಪರಿಶೀಲನೆಯಾಗಿ ದೃಢೀಕರಿಸಲಾಗಿದೆಯೇ? ದಾಸ್ತಾನು ಮೌಲ್ಯ ನಿಖರವಾಗಿದೆಯೇ? ದಾಸ್ತಾನಿನ ಮೇಲೆ ವಿಮೆ ಮಾಡಿಸಲಾಗಿದೆಯೇ? | ವರದಿ ಸಾಲಿನಂತ್ಯಕ್ಕೆ ಇರುವ ಆಖೈರು ದಾಸ್ತಾನು ಆಡಳಿತ ಮಂಡಳಿಯ ಸದಸ್ಯರಿಂದ ಪರಿಶೀಲನೆಯಾಗಿ ದೃಢೀಕರಿಸಲಾಗಿದ್ದು, ದಾಸ್ತಾನು ಮೌಲ್ಯವನ್ನು ಖರೀದಿ ಬೆಲೆಯಲ್ಲಿ ಮತ್ತು ಅಡಿಕೆ ದಾಸ್ತಾನು ಮೌಲ್ಯವನ್ನು ಖರೀದಿ, ಮಾರಾಟದ ಸರಾಸರಿ ದರವನ್ನು ಪರಿಗಣಿಸಿ ಮೌಲ್ಯವನ್ನು ನಿಗದಿಗೊಳಿಸಲಾಗಿದೆ. ದಾಸ್ತಾನಿನ ಮೇಲೆ ವಿಮೆ ಮಾಡಿಸಲಾಗಿದೆ. |

## ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಿಗೆ ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆ ವಿಮರ್ಶೆ

| ಕ್ರ. ಸಂ | ವಿವರ | | | | ಪ್ರತಿಶತ ಪ್ರಮಾಣ | | ಹೆಚ್ಚು | ಕಡಿಮೆ |
|---|---|---|---|---|---|---|---|---|
| | ವಿವರ | ಪ್ರಸಕ್ತ ಸಾಲಿನ ಮೊತ್ತ | ಹಿಂದಿನ ಸಾಲಿನ ಮೊತ್ತ | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | | |
| 1 | ಒಟ್ಟು ಮಾರಾಟ | 624,87,32,763.98 | 394,76,92,274.42 | – | 3.71 | 3.50 | 0.21 | – |
| | ವ್ಯಾಪಾರ ಮತ್ತು ದಲ್ಲಾಳಿ ಮಾರಾಟ ಲಾಭ | 23,19,70,111.08 | 13,82,18,123.04 | ಒಟ್ಟು ಮಾರಾಟ | | | | |
| | ವ್ಯಾಪಾರಿ ನಷ್ಟ | | | | | | | |
| 2 | ಒಟ್ಟು ಗುಂತಾವಣಿಗಳು | 26,33,91,006 | 20,33,79,023 | – | 6.25 | 6.00 | 0.25 | – |
| | ಗುಂತಾವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿ | 2,41,59,917 | 2,28,31,226 | ಒಟ್ಟು ಗುಂತಾವಣಿಗಳು | | | | |
| 3 | ಒಟ್ಟು ನೀಡಿದ ಸಾಲ | 206,54,73,527.83 | 262,20,26,039.00 | – | 5.66 | 3.88 | 1.78 | – |
| | ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ | 11,70,46,128.40 | 10,17,58,139.73 | ಒಟ್ಟು ನೀಡಿದ ಸಾಲ | | | | |
| 4 | **ದುಡಿಯುವ ಬಂಡವಾಳ** | 462,68,85,453.20 | 420,79,61,717.09 | – | 0.09 | 0.09 | – | – |
| | ಇತರೆ ಆದಾಯ | 40,94,955.19 | 40,62,098 | ದುಡಿಯುವ ಬಂಡವಾಳ | | | | |
| 5 | ಒಟ್ಟು ಪಡೆದ ಸಾಲ | 107,39,42,002 | 109,94,88,948 | | 3.95 | 3.25 | 0.70 | – |
| | ಸಾಲುಗಳ ಮೇಲೆ ಪಾವತಿಸಿದ ಬಡ್ಡಿ | 4,23,62,159 | 3,57,50,720 | ಒಟ್ಟು ಪಡೆದ ಸಾಲ | | | | |
| 6 | ಒಟ್ಟು ಠೇವಣಿ | 237,48,25,422.98 | 207,37,02,286 | – | 5.30 | 5.97 | – | 0.67 |
| | ಠೇವುಗಳ ಪಾವತಿಸಿದ ಬಡ್ಡಿ | 12,59,80,414.87 | 12,39,51,357 | ಒಟ್ಟು ಠೇವಣಿ | | | | |
| | **ದುಡಿಯುವ ಬಂಡವಾಳ** | 462,68,85,453.20 | 420,79,61,717.09 | | | | | |
| 7 | ಸಿಬ್ಬಂದಿ ವೆಚ್ಚ | 8,33,41,564 | 8,05,77,010 | ದುಡಿಯುವ ಬಂಡವಾಳ | 1.80 | 1.91 | – | 0.11 |
| 8 | ಆಡಳಿತ ವೆಚ್ಚ | 8,08,97,070.11 | 5,93,05,931 | | 1.75 | 1.41 | 0.34 | – |
| 9 | ಇತರೆ ವೆಚ್ಚ | | | | – | – | – | – |
| 10 | ಸವಕಳಿಗಳು | 2,16,45,826 | 2,27,20,196 | | 0.46 | 0.54 | – | 0.08 |
| 11 | ಅವಕಾಶಗಳು | 4,40,50,000 | 40,00,000 | | 0.95 | 0.10 | 0.85 | – |
| 12 | ನಿವ್ವಳ ಲಾಭ | 5,52,62,459.08 | 5,25,35,835 | | 1.19 | 1.25 | – | 0.06 |
| | ನಿವ್ವಳ ನಷ್ಟ | – | – | | | | | |
| | ಈ ಮೇಲಿನ ತುಲನಾತ್ಮಕ ಅಂಕಿಸಂಖ್ಯೆಗಳ ಬಗ್ಗೆ ವಿಮರ್ಶೆ : | | | | | | | |
| | ಲಾಭ–ನಷ್ಟದ ತ:ಖ್ತೆ: ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ: | | | | ರೂ. 5,52,62,459.08 | | | |

| | | |
|---|---|---|
| 1 | ಸಂಘವು ಪ್ರಸಕ್ತ 2024–2025 ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣೀಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಷೆ. | ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22ರ ಪ್ರಕಾರ ಅವಕಾಶ ಗಳನ್ನು ಮಾಡಿ ಲಾಭವನ್ನು ಪ್ರಮಾಣೀಕರಿಸಲಾಗಿದೆ. |
| 2 | ವರ್ಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ) ರನ್ವಯ ನಿಬಂಧಕರ ಮಂಜೂರಿ ಪಡೆಯಲಾಗಿದೆಯೇ ? | ವರದಿ ಸಾಲಿನಲ್ಲಿ ಬ್ಯಾಂಕಿನ ಠೇವಣಿಗಳ ಮೇಲೆ ಬರತಕ್ಕ ಬಡ್ಡಿಯನ್ನು ಹೊರತುಪಡಿಸಿ ಉಳಿದ ಯಾವುದೇ ಬರ ಬೇಕಾದ ಬಡ್ಡಿಯನ್ನು ಲಾಭ ವೆಂದು ಪರಿಗಣಿಸಿರುವುದಿಲ್ಲ. |
| 3 | ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು / ಕಡಿಮೆ ಇರುವುದರ ಬಗ್ಗೆ ವಿಮರ್ಶೆ | ನಿವ್ವಳ ಲಾಭ ಕಳೆದ ಸಾಲಿಗೆ ಹೋಲಿಸಿದಾಗ ಶೇಕಡ 5.19 ರಷ್ಟು ಹೆಚ್ಚಾಗಿರುತ್ತದೆ. |
| 4 | ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ | ಲಾಭ ವಿಲೇವಾರಿ ಆಗಿರುತ್ತದೆ. |
| 5 | ನಷ್ಟವಾಗಿದ್ದಲ್ಲಿ ಕಾರಣಗಳು : | ಅನ್ವಯವಾಗುವುದಿಲ್ಲ. |

**44) ಇತರೆ ಷರಾ ಹಾಗೂ ಬಾಬ್ತುಗಳು :**

**ವರ್ತಕರ ಖಾತೆ:– ರೂ.27,08,33,944.23**

1) ಮೇಲ್ಕಂಡ ಮೊತ್ತದಲ್ಲಿ ದಾವಾ ಡಿಕ್ರಿ ಮತ್ತು ಇ.ಪಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 5 ಪ್ರಕರಣದಲ್ಲಿ ವರದಿ ಸಾಲಿನ ಅಂತ್ಯಕ್ಕೆ ಒಟ್ಟು ರೂ.1,68,59,163.65 ವಸೂಲಾಗತಕ್ಕದ್ದಿರುತ್ತದೆ. ವರದಿ ಸಾಲಿನಲ್ಲಿ ಒಂದು ಪ್ರಕರಣವಾದ ಶ್ರೀ ವೀರೇಶ್ವರ ಟ್ರೇಡರ್ಸ್ ಬೀರೂರು ಇವರ ಪ್ರಕರಣ ಸಂಖ್ಯೆ 57951/ 2017 & 697/2018 ರ ಪ್ರಕಾರ ರೂ.5 ಕೋಟಿಗೆ ಇತ್ಯರ್ಥಗೊಂಡಿದ್ದು, ಸದರಿ ವರ್ತಕರಿಂದ ಬರಬೇಕಾದ ಬಾಕಿ ಮತ್ತು ಬಡ್ಡಿ ಮೊತ್ತದಲ್ಲಿ ರೂ.4,15,00,000 ಸಂಘಕ್ಕೆ ಸಂದಾಯವಾಗಿದ್ದು ಪ್ರಸಕ್ತ ಸಾಲಿನಲ್ಲಿ ರೂ.40,00,000.00 ಸಂದಾಯವಾಗಿದ್ದು ಉಳಿದ ಬಾಕಿ ಹಣ ರೂ.45,00,000.00 ಸಂಘಕ್ಕೆ ಸಂದಾಯ ವಾಗಬೇಕಿರುತ್ತದೆ. ಉಳಿದ ಮೊತ್ತವನ್ನು ಆದಷ್ಟು ಶೀಘ್ರ ವಸೂಲಿ ಮಾಡಲು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಮೆ.ಶ್ರೀ ವೀರೇಶ್ವರ ಟ್ರೇಡರ್ಸ್, ಬೀರೂರು ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಉಳಿದ ಬಾಕಿ ಹಣ ರೂ.45,00,000.00 ಪ್ರಸಕ್ತ ಸಾಲಿನಲ್ಲಿ ಸಂದಾಯವಾಗಿದ್ದು, ಇದರಿಂದಾಗಿ ರೂ.5.00 ಕೋಟಿ ಪೂರ್ಣ ಮೊಬಲಗು ಸಂಘಕ್ಕೆ ಸಂದಾಯವಾದಂತಾಗಿರುತ್ತದೆ.**

2) ಮೆ.ಶ್ರೀಧರ ಅಡಿಕೆ ಸ್ಟೋರ್ಸ್ ಇವರಿಂದ ಬರಬೇಕಾದ ಬಾಕಿ ರೂ.11,55,888.65 ಗಳಿದ್ದು ಇದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಜೆ.ಎಂ.ಎಫ್.ಸಿ ಕೋರ್ಟ್ ಸಂಘದ ಪರವಾಗಿ ತೀರ್ಪು ನೀಡಿದ್ದು, ತೀರ್ಪಿನ ಅನ್ವಯದಂತೆ ಬಾಕಿ ವಸೂಲಾತಿಗೆ ಸಂಘದಿಂದ ಕ್ರಮವಿಡಬೇಕಾದ ಅಗತ್ಯವಿರುತ್ತದೆ. ಈ ಕುರಿತು ವಸೂಲಾತಿಗೆ ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಬಾಕಿ ವಸೂಲಾತಿ ಬಗ್ಗೆ ಕ್ರಮವಿಡಲಾಗಿದೆ.**

3) ಮೆ.ಶ್ರೀ ರಾಮ ಟ್ರೇಡರ್ಸ್, ಸಾಗರ ಇವರಿಂದ ಬರಬೇಕಾದ ಬಾಕಿ ರೂ.66,33,232, ಮೆ.ಸಿದ್ದಲಿಂಗೇಶ್ವರ ಅಡಿಕೆ ಸ್ಟೋರ್ಸ್ ಸಾಗರ ಇವರಿಂದ ಬರಬೇಕಾದ ಬಾಕಿ ರೂ.2,87,981.00 ಮತ್ತು ಶ್ರೀ ಅಶ್ವಿನಿಕುಮಾರ್ ಸಾಗರ ಇವರಿಂದ ಬರಬೇಕಾದ ಬಾಕಿ ರೂ.2,82,062.00 ಗಳಿದ್ದು ಈ ಪ್ರಕರಣಗಳನ್ನು ಕೂಡ ಆದಷ್ಟು ಶೀಘ್ರವಾಗಿ ಬಗೆಹರಿಸಿಕೊಂಡು ಬಾಕಿ ವಸೂಲಾತಿಗೆ ಕ್ರಮವಿಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಈ ದಾವಾ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶಾನುಸಾರ ಕ್ರಮ ಕೈಗೊಳ್ಳಲಾಗುವುದು.**

4) ಶ್ರೀ ರಾಧಾಕೃಷ್ಣ ಅಡಿಕೆ ಸ್ಟೋರ್ಸ್, ಸಾಗರ ಇವರಿಗೆ ಸಂಘದಲ್ಲಿ ರೂ.55 ಲಕ್ಷ ಖರೀದಿ ಮಿತಿ ನಿಗದಿಪಡಿಸಿದ್ದು, ಹೊಸನಗರ ಮತ್ತು ಸಾಗರ ಶಾಖೆಗಳಲ್ಲಿ ಮಿತಿಯನ್ನು ಮೀರಿ ಖರೀದಿಗೆ ಅವಕಾಶವನ್ನು ನೀಡಿದ್ದನ್ನು ಗಮನಿಸಲಾಗಿದ್ದು, ಹೊಸನಗರ ಶಾಖೆಯಲ್ಲಿ 2023–24 ರ ಸಾಲಿನಲ್ಲಿ ರೂ.2,09,90,841.00 ಮತ್ತು ಸಾಗರ ಶಾಖೆಯಲ್ಲಿ ರೂ.6,19,954.00 ಮೌಲ್ಯದ ಅಡಿಕೆಯನ್ನು ಖರೀದಿ ಮಾಡಿರುವುದನ್ನು ಗಮನಿಸಲಾಗಿದ್ದು, ವರದಿ ಸಾಲಿನ ಅಂತ್ಯಕ್ಕೆ ಸಾಗರ ಶಾಖೆಯಲ್ಲಿ ರೂ.5,24,793.86 ಮತ್ತು ಹೊಸನಗರ ಶಾಖೆಯಲ್ಲಿ ರೂ.2,08,03,481.66 ಬಾಕಿ ಇದ್ದು ಬಹುತೇಕ ದಾಸ್ತಾನುಗಳನ್ನು ಬಿಡುಗಡೆ ಮಾಡಿಕೊಂಡಿರುವುದಿಲ್ಲ. ಈ ಕುರಿತು ಹೊಸನಗರ ಶಾಖಾ ವ್ಯವಸ್ಥಾಪಕರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು ಅವರಿಂದ ನೋಟಿಸ್‌ಗೆ ಪ್ರತಿಕ್ರಿಯೆಯನ್ನು ಪಡೆದಿರುತ್ತಾರೆ. ದಾಸ್ತಾನು ದಿನಕಳೆದಂತೆ ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತಿರುವುದರಿಂದ ಆದಷ್ಟು ಶೀಘ್ರ ಅವರಿಂದ ಹಣ ವಸೂಲಿ ಮಾಡಲು ಕ್ರಮವಿಡುವಂತೆ ಸೂಚಿಸಿದೆ.

**ಸಮಜಾಯಿಷಿ: ಮೆ.ಶ್ರೀ ರಾಧಾಕೃಷ್ಣ ಅಡಿಕೆ ಸ್ಟೋರ್ಸ್, ಸಾಗರ ಇವರು 2025ರ ಸೆಪ್ಟಂಬರ್ ಅಂತ್ಯದೊಳಗೆ ಪೂರ್ಣ ಹಣ ಪಾವತಿ ಮಾಡಿ ಅಡಿಕೆ ಮೂಟೆ ಬಿಡಿಸಿಕೊಂಡು ಹೋಗುವುದಾಗಿ ತಿಳಿಸಿದ್ದು, ಅನುಸರಣಾ ಕ್ರಮವಿಡಲಾಗುತ್ತಿದೆ.**

5) ಮೆ.ಗುಡ್ಡೆಕೇರಿ ಟ್ರೇಡರ್ಸ್ ಸಾಗರ ಇವರಿಗೆ ಸಂಘದಲ್ಲಿ 1.5ಲಕ್ಷ ಖರೀದಿ ಮಿತಿ ನಿಗದಿಪಡಿಸಿದ್ದು ಸಾಗರ ಶಾಖೆಯಲ್ಲಿ ಒಟ್ಟು ರೂ.24,99,837.00 ಮೌಲ್ಯದ ಅಡಿಕೆಯನ್ನು ಖರೀದಿ ಮಾಡಿರುವುದನ್ನು ಗಮನಿಸಲಾಗಿದ್ದು, ಸದರಿ ವರ್ತಕರು ದಾಸ್ತಾನನ್ನು ಬಿಡುಗಡೆಗೊಳಿಸಿಕೊಳ್ಳದೆ ಮರು ಹರಾಜು ಮಾಡಿಕೊಳ್ಳುವಂತೆ ಮನವಿ ಮಾಡಿಕೊಂಡ ಹಿನ್ನಲೆಯಲ್ಲಿ ಸದರಿ ವರ್ತಕರು ಖರೀದಿಸಿದ ಅಡಿಕೆಯನ್ನು

ಕಾರ್ಯದರ್ಶಿ ಎ.ಪಿ.ಎಂ.ಸಿ ಸಾಗರ ಇವರ ಅನುಮತಿಯನ್ನು ಪಡೆದು ಮರು ಹರಾಜಿನಲ್ಲಿ ವಿಕ್ರಯಿಸಿ ಬಂದ ರೂ.17,81,824.00 ಮೊತ್ತವನ್ನು ಸದರಿ ವರ್ತಕರ ಬಾಕಿ ಖಾತೆಗೆ ಜಮಾ ಪಡೆಯಲಾಗಿರುತ್ತದೆ. ಹೀಗೆ ಮರು ಹರಾಜಿನಿಂದ ಬಂದ ಮೊತ್ತವನ್ನು ಜಮಾ ಪಡೆದ ನಂತರ ಸದರಿ ವರ್ತಕರಿಂದ ವರದಿ ಸಾಲಿನ ಅಂತ್ಯಕ್ಕೆ ಬರಬೇಕಾದ ಬಾಕಿ ರೂ.10,16,296.30 ಇರುತ್ತದೆ. ಆದಷ್ಟು ಶೀಘ್ರ ಈ ಬಾಕಿ ವಸೂಲಾತಿಗೆ ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಮೆ.ಗುಡ್ಡೆಕೇರಿ ಟ್ರೇಡರ್ಸ್, ಸಾಗರ ಇವರಿಂದ ಬರಬೇಕಾದ ಬಾಕಿ ವಸೂಲಾತಿಗೆ ಕ್ರಮವಿಡಲಾಗುವುದು.**

6) ಕರ್ನಾಟಕ ರಾಜ್ಯ ಅಡಿಕೆ ಮಾರಾಟದ ಸಹಕಾರ ಮಂಡಳ ನಿಯಮಿತ, ಶಿವಮೊಗ್ಗ (ಕ್ರಾಮ್ಕೋ), ಸದರಿ ಸಂಘವು ಹಲವಾರು ವರ್ಷಗಳಿಂದ ಸಂಘದಿಂದ ಅಡಿಕೆ ಖರೀದಿ ಮಾಡುತ್ತಿದ್ದು ಇತ್ತೀಚಿನ ದಿನಗಳಲ್ಲಿ ಸದರಿ ಸಂಘದ ವಹಿವಾಟು ಇಳಿಕೆ ಆಗಿದ್ದು, ಹಿಂದೆ ಖರೀದಿಸಿದ ದಾಸ್ತಾನನ್ನು ಬಿಡುಗಡೆ ಮಾಡಿಸಿಕೊಂಡು ಉಳಿಸಿಕೊಂಡಿರುವ ಖಾತೆ ಬಾಕಿ ವರದಿ ಸಾಲಿನ ಅಂತ್ಯಕ್ಕೆ ರೂ.2,42,87,747.00 ಇದ್ದು ಅದಕ್ಕೆ ಬರಬೇಕಾದ ಬಡ್ಡಿ ಸೇರಿ ಒಟ್ಟು ರೂ.3,62,47,830.87 ಬಾಕಿ ಇರುತ್ತದೆ. ಸದರಿ ಮೊತ್ತದ ವಸೂಲಾತಿಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಿದೆ.

**ಸಮಜಾಯಿಷಿ: ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ ನಿಯಮಿತ, ಶಿವಮೊಗ್ಗ ಇವರ ಮೇಲೆ ಕಾನೂನು ಕ್ರಮಕೈಗೊಳ್ಳಲು ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದು, ಈ ಕುರಿತು ಮುಂದಿನ ಕ್ರಮವಿಡಲಾಗುತ್ತಿದೆ.**

ಮೇಲ್ಕಂಡ ಖಾತೆ ಬಾಕಿಗಳ ಸಂಬಂಧ ಕುಳುವಾರು ಮಾಹಿತಿ ಲಭ್ಯವಿದ್ದು, ಈ ಮೊಬಲಗು ವರ್ತಕರಿಂದ ಬರಬೇಕಾದ ಬಾಕಿ ಕುಳುವಾರಿನಲ್ಲಿ ಸೇರಿರುತ್ತದೆ. ಕುಳುವಾರು ತಾಳೆ ಇರುತ್ತದೆ.

ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ, ಶಾಖಾ ವ್ಯವಸ್ಥಾಪಕರು ಕೆಲವೊಂದು ಪ್ರಕರಣಗಳಲ್ಲಿ ಖರೀದಿ ಮಿತಿಯನ್ನು ಮೀರಿ ಖರೀದಿಗೆ ಅವಕಾಶ ಮಾಡಿಕೊಡುತ್ತಿರುವುದು ಮತ್ತು ಕೆಲವು ವರ್ತಕರಿಗೆ ಹಣ ಸಂದಾಯವಾಗದೆ ದಾಸ್ತಾನು ಬಿಡುಗಡೆ ಮಾಡುತ್ತಿರುವುದನ್ನು ಗಮನಿಸಲಾಗಿದ್ದು ಸಂಘದ ನಿಯಮದ ಪ್ರಕಾರ ಬಾಕಿ ವಸೂಲಾಗದ ಪ್ರಕರಣಗಳಲ್ಲಿ ಶಾಖಾ ವ್ಯವಸ್ಥಾಪಕರನ್ನು ಜವಾಬ್ದಾರರನ್ನಾಗಿಸಿ ಅವರಿಗೆ ಕೊಡಬೇಕಾದ ನಿವೃತ್ತಿ ನಂತರದ ಆರ್ಥಿಕ ಸೌಲಭ್ಯಗಳನ್ನು ತಡೆಹಿಡಿಯಲಾಗುತ್ತದೆ. ಪರಂತು ಬರಬೇಕಾದ ಬಾಕಿ ಗರಿಷ್ಠ ಪ್ರಮಾಣದಲ್ಲಿದ್ದರೆ ಅದನ್ನು ಸಿಬ್ಬಂದಿಗಳಿಂದ ವಸೂಲಿ ಮಾಡುವುದು ಕಷ್ಟಸಾಧ್ಯ. ಇಂತಹ ಪ್ರಕರಣಗಳಿಂದ ಸಂಘಕ್ಕೆ ಆರ್ಥಿಕ ನಷ್ಟ ಆಗುವ ಸಂಭವವಿದ್ದು ಈ ಕುರಿತು ಸೂಕ್ತ ನಿಯಮಾವಳಿ ರೂಪಿಸಿಕೊಂಡು ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕುವ ಅವಶ್ಯಕತೆ ಇರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಸಂಘದ ವ್ಯಾಪಾರಾಭಿವೃದ್ಧಿಗೆ ಧಕ್ಕೆಯಾಗದಂತೆ ಲೆಕ್ಕಪರಿಶೋಧಕರ ಸಲಹೆಯನ್ನು ಪಡೆದು ಸಾಧಕ-ಬಾಧಕ ಗಮನಿಸಿಕೊಂಡು ಕ್ರಮವಿಡಲಾಗುವುದು ಹಾಗೂ ಈ ಕುರಿತು ಸೂಕ್ತ ನಿಯಮಾವಳಿ ರೂಪಿಸಲಾಗುವುದು.**

ಸಂಸ್ಥೆಯ ವ್ಯಾಪಾರ ನಿಯಮಗಳ ರೀತ್ಯಾ, ವರ್ತಕರು ಕೊಡಬೇಕಾದ ಹಣಕ್ಕೆ ಆಯಾ ಸಮಯಕ್ಕನುಸಾರವಾಗಿ ಬಡ್ಡಿದರ ವಿಧಿಸುತ್ತಿದ್ದು, ಪ್ರಥಮ ಆದ್ಯತೆಯಲ್ಲಿ ಬಡ್ಡಿ ಜಮಾ ಬರುತ್ತಿರುವುದನ್ನು ಪರಿಶೀಲಿಸಿದೆ.

ವರ್ತಕರಿಂದ ದಿನಾಂಕ 31.03.2025 ಕ್ಕೆ ದಾವಾ ಪ್ರಕರಣದಲ್ಲಿ ಬಡ್ಡಿ ರೂ.290.77 ಲಕ್ಷ ಬರಲು ಬಾಕಿ ಇರುತ್ತದೆ. ಉಳಿದಂತೆ ವರ್ತಕರ ಬಡ್ಡಿಯನ್ನು ಸಾಲಾಂತ್ಯಕ್ಕೆ ವಸೂಲಿ ಮಾಡಲಾಗಿರುತ್ತದೆ. ವರ್ತಕರು ದಾಸ್ತಾನು ಬಿಡುಗಡೆಗೆ ಬಾಕಿ ಇರುವ ದಾಸ್ತಾನು ಮೌಲ್ಯದ ಬಡ್ಡಿ ಹೊರತುಪಡಿಸಿ ಉಳಿದಂತೆ ಬಡ್ಡಿ ವಸೂಲಿಯಾಗಿರುತ್ತದೆ.

ವಸೂಲಾಗದ ಬಾಕಿಗಳ ಮತ್ತು ಬಡ್ಡಿ ವಸೂಲಿಗೆ ಪೂರ್ಣ ಪ್ರಮಾಣದಲ್ಲಿ ಕಾನೂನು ಕ್ರಮ ಜಾರಿಗೊಳಿಸಲಾಗಿದ್ದು ವಸೂಲಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

**ಸಮಜಾಯಿಷಿ: ಕಾನೂನು ಪ್ರಕರಣಗಳಲ್ಲಿ ನ್ಯಾಯಾಲಯದ ಆದೇಶಾನುಸಾರ ಕ್ರಮ ಕೈಗೊಳ್ಳಲಾಗುವುದು.**

ಸಂಘವು ವ್ಯಾಜ್ಯಗಳನ್ನು ಸೂಕ್ತವಾಗಿ ಬಗೆಹರಿಸಿಕೊಂಡು ಸಂಘಕ್ಕೆ ಆಗಬಹುದಾದ ನಷ್ಟವನ್ನು ತಪ್ಪಿಸಲು ಕ್ರಮವಿಡುವಂತೆ ಸಲಹೆ ನೀಡಲಾಗಿದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿದೆ.**

**<u>ಅಡಿಕೆ ಖರೀದಿ ಮತ್ತು ಮಾರಾಟದ ಬಗ್ಗೆ:</u>**

1. ಶಿವಮೊಗ್ಗ ನೇರ ಖರೀದಿ ಕೇಂದ್ರದಲ್ಲಿ ಅಡಿಕೆ ಖರೀದಿ ಮಾಡುವಾಗ ಇರುವ ಆಂತರಿಕ ನಿಯಂತ್ರಣ ಇನ್ನಷ್ಟು ಬಲಪಡಿಸಿಕೊಳ್ಳಬೇಕು. ಅಡಿಕೆ ಖರೀದಿ ಮಾಡುವ ಸಂದರ್ಭದಲ್ಲಿ ಬೇಡಿಕೆಯ ಮೇಲೆ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಅವಶ್ಯಕತೆಗೆ ಮೀರಿ ಖರೀದಿ ಮಾಡುವುದರಿಂದ ಮತ್ತು ಹೆಚ್ಚಿನ ಅಂತಿಮ ದಾಸ್ತಾನು ಇಡುವುದರಿಂದ ಸಂಘಕ್ಕೆ ಆರ್ಥಿಕ ಹೊರೆ ಬೀಳುವ ಸಂಭವವಿರುತ್ತದೆ ಮತ್ತು ದಾಸ್ತಾನು ಶೇಖರಣೆಗೆ ಅಗತ್ಯವಿರುವ ಬಂಡವಾಳಕ್ಕೆ ಸಾಲ ತೆಗೆದುಕೊಂಡು ಬಡ್ಡಿ ಪಾವತಿ ಮಾಡಬೇಕಾಗಿರುತ್ತದೆ. ಅಗತ್ಯಕ್ಕಿಂತ ಹೆಚ್ಚಿನ ದಾಸ್ತಾನು ಇಡುವುದರಿಂದ ಮುಂದೆ ದರ ಇಳಿಕೆಯಾದರೆ ಅದು ಸಂಘಕ್ಕೆ ನಷ್ಟ ಉಂಟು ಮಾಡುವ ಸಾಧ್ಯತೆಯಿರುತ್ತದೆ. ಈ ಕುರಿತು ಆಡಳಿತ ಮಂಡಳಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಅವಶ್ಯವಾಗಿರುತ್ತದೆ.

**ಸಮಜಾಯಿಷಿ: ಮಾರುಕಟ್ಟೆ ಪರಿಸ್ಥಿತಿ ಮತ್ತು ಮಾರುಕಟ್ಟೆ ಸುದ್ದಿಯಾಧರಿಸಿ (Market News) ಅಡಿಕೆ ಖರೀದಿ ವ್ಯವಹಾರ ಮಾಡಲಾಗುತ್ತಿದೆ. ಆಂತರಿಕ ನಿಯಂತ್ರಣವನ್ನು ಮತ್ತಷ್ಟು ಬಲಗೊಳಿಸುವ ಬಗ್ಗೆ ಅಗತ್ಯ ಕ್ರಮವಿಡಲಾಗುವುದು. ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ.**

| | |
|---|---|
| | 2. ವರದಿ ಸಾಲಿನಲ್ಲಿ ಮೆ.ಜೈನ್ ಆಗ್ರೋ ಇಂಡಸ್ಟ್ರೀಸ್, ರಾಯಪುರ ಇವರಿಗೆ ದಿನಾಂಕ 07–01–2025 ರಂದು ರೂ.1,36,66,685.00 ಮೌಲ್ಯದ ಒಂದು ಲೋಡ್(350 ಚೀಲ, 245 ಕ್ವಿಂಟಾಲ್) AA –API ಮಾದರಿಯ ಅಡಿಕೆಯನ್ನು ಸಂಘದ ನೋಂದಾಯಿತ ಏಜೆಂಟರಾದ ಶ್ರೀ ಹರ್ಷಿತಾ ಏಜೆನ್ಸಿ, ಮಂಗಳೂರು ಇವರ ಮೂಲಕ ಸಂಘದ ಅಡಿಕೆ ನೇರ ಖರೀದಿ ಕೇಂದ್ರ ಕೋಟೆ ರಸ್ತೆಯಿಂದ ರವಾನಿಸಲಾಗಿದ್ದು, ಸಾಲಾಂತ್ಯದವರೆಗೂ ಬಿಲ್ ಮೊತ್ತವು ಪಾವತಿಯಾಗದೆ ಇರುವ ಕಾರಣ ಪ್ರಸಕ್ತ ಸಾಲಿನಲ್ಲಿ ಸಂಬಂಧಪಟ್ಟವರ ವಿರುದ್ದ ನಗರದ ವಿನೋಬನಗರ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ ಎಫ್.ಐ.ಆರ್ ಮಾಡಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಖರೀದಿದಾರರಿಂದ ಬರಬೇಕಾದ ಮೊತ್ತವನ್ನು ಆದಷ್ಟು ಶೀಘ್ರ ವಸೂಲಿ ಮಾಡಲು ಕ್ರಮವಿಡುವಂತೆ ಸೂಚಿಸಲಾಗಿದೆ.<br><br>**ಸಮಜಾಯಿಷಿ: ಮೆ.ಜೈನ್ ಆಗ್ರೋ ಇಂಡಸ್ಟ್ರೀಸ್, ರಾಯಪುರ ಇವರಿಂದ ಬರಬೇಕಾದ ಬಾಕಿ ಮೊಬಲಗಿಗೆ ಸಂಬಂಧಿಸಿದಂತೆ ಶಿವಮೊಗ್ಗದ ವಿನೋಬನಗರ ಪೋಲಿಸ್ ಸ್ಟೇಷನ್‌ನಲ್ಲಿ ದಿನಾಂಕ 16.06.2025 ರಂದು ಕ್ರಿಮಿನಲ್ ಪ್ರಕರಣ (ಎಫ್.ಐ.ಆರ್. ಸಂಖ್ಯೆ:0141/2025) ದಾಖಲಿಸಲಾಗಿದೆ. ಅಲ್ಲದೆ, ದಿನಾಂಕ 08.07.2025ರ ಆಡಳಿತ ಮಂಡಳಿ ಸಭೆಯಲ್ಲಿ ಶಿವಮೊಗ್ಗದ ನ್ಯಾಯಾಲಯದಲ್ಲಿ ವಾಣಿಜ್ಯ ಪ್ರಕರಣ (Commercial original suit) ದಾಖಲಿಸಲು ಸಹ ನಿರ್ಣಯಿಸಲಾಗಿದ್ದು, ಆ ಪ್ರಕಾರ ಕ್ರಮವಿಡಲಾಗುತ್ತಿದೆ.**<br><br>ವರದಿ ಸಾಲಿನ ಅಂತ್ಯಕ್ಕೆ ವರ್ತಕರ ಬಾಕಿ ಮೊತ್ತಕ್ಕೆ ಸಂಬಂಧಪಟ್ಟವರಿಂದ ಧೃಢೀಕರಣ ಪಡೆದುಕೊಂಡಿರುತ್ತಾರೆ. ವರದಿಯೊಂದಿಗೆ ವರ್ತಕರ ಖಾತೆಯ ಕುಳುವಾರು ಪಟ್ಟಿಯನ್ನು ಲಗತ್ತಿಸಿದೆ. |

**45) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:– (ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ನಂತರ ಸಂಘದ ಲೆಕ್ಕಪುಸ್ತಕಗಳ ನಿರ್ವಹಣೆ,ಹಿಂದಿರುಗಿಸುವಿಕೆ, ಸಂಘವು ಹೊಂದಿರುವ ಲಾಭ/ನಷ್ಟ ಹಾಗೂ ಸಂಘವು ಆರ್ಥಿಕ ಅಭಿವೃದ್ಧಿ ಹೊಂದಲು ಕೈಗೊಳ್ಳಬೇಕಾದ ಕ್ರಮಗಳ ಹಿನ್ನೆಲೆಯಲ್ಲಿ ನೀಡುವುದು)**

| |
|---|
| 1. ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು 1960 ನಿಯಮ 28 ರ ಪ್ರಕಾರ ದ್ರವ್ಯಾಸ್ತಿ ನಿರ್ವಹಣೆ ಮಾಡಲು ಸೂಚಿಸಿದೆ.<br>**ಸಮಜಾಯಿಷಿ: ಈ ಸಾಲಿನಿಂದ ದ್ರವ್ಯಾಸ್ತಿ ನಿರ್ವಹಣೆ ಮಾಡಲು ಕ್ರಮವಿಡಲಾಗಿದೆ.**<br><br>2. ಸಂಘದ ಉಪವಿಧಿ 89(2) ರನ್ವಯ ಕಾಯ್ದಿಟ್ಟ ನಿಧಿಯನ್ನು ಕಾಯ್ದೆ ಕಲಂ 58(ಇ) ಪ್ರಕಾರ ಪ್ರತ್ಯೇಕವಾಗಿ ಹೂಡಿಕೆ ಮಾಡಲು ಸೂಚಿಸಿದೆ.<br><br>**ಸಮಜಾಯಿಷಿ: ಆಪದ್ಧನ ನಿಧಿ ರೂ.1,51,84,681.82 ಗಳನ್ನು ಪ್ರಸಕ್ತ ಸಾಲಿನಲ್ಲಿ ಲೆಕ್ಕಪರಿಶೋಧಕರ ಸಲಹೆಯಂತೆ ಪ್ರತ್ಯೇಕವಾಗಿ ಹೂಡಿಕೆ ಮಾಡಲಾಗಿದೆ. ಸಹಕಾರ ಸಂಘಗಳ ನಿಬಂಧಕರಿಂದ ಕಟ್ಟಡ ನಿರ್ಮಾಣ ಕಾಮಗಾರಿಗೆ ಮತ್ತು ನಿವೇಶನ ಖರೀದಿಗೆ ಒಟ್ಟು ರೂ.12.25 ಕೋಟಿ ಮೀಸಲು ನಿಧಿಯನ್ನು ಉಪಯೋಗಿಸಲು ಅನುಮತಿ ಪಡೆದಿದ್ದು, ಇದುವರೆಗೂ ರೂ.11.25 ಕೋಟಿ ಮರುಪೂರಣಗೊಂಡಿದ್ದು, ವರ್ಷಾಂತ್ಯಕ್ಕೆ ರೂ.ಒಂದು ಕೋಟಿ ಮರುಪೂರಣ ಮಾಡಲು ಬಾಕಿ ಇರುತ್ತದೆ.** |

3. ಸಂಘದ ಬೈಲಾ ಸಂಖ್ಯೆ 29ರ ಪ್ರಕಾರ ನಾಮಮಾತ್ರ ಸದಸ್ಯತ್ವವು ಸಂಘದೊಂದಿಗೆ ಹೊಂದಿದ ನಿರ್ದಿಷ್ಟ ಕೆಲಸ ಅಥವಾ ವ್ಯವಹಾರ ಕೊನೆಗೊಂಡ ತಕ್ಷಣ ಕೊನೆಗೊಳ್ಳತಕ್ಕದ್ದು. ನಾಮ ಮಾತ್ರ ಸದಸ್ಯತ್ವ ಕೊನೆಗೊಂಡವನು ಪುನಃ ನಿಯಮಾನುಸಾರ ಹೊಸ ಸದಸ್ಯತ್ವ ಪಡೆಯಬೇಕಾಗಿರುತ್ತದೆ. ಈ ಕುರಿತು ಕ್ರಮವಿಡಲು ಸಲಹೆ ನೀಡಲಾಗಿದೆ.

**ಸಮಜಾಯಿಷಿ: ಸಂಘದ ಉಪವಿಧಿ ಸಂಖ್ಯೆ 29(3) ರ ಪ್ರಕಾರ ನಾಮಮಾತ್ರ ಸದಸ್ಯತ್ವದ ಅವಧಿಯು ಸದಸ್ಯತ್ವ ಪಡೆದ ದಿನಾಂಕದಿಂದ ಮೂರು ವರ್ಷಗಳು ಅಥವಾ ಅವರು ಸಂಘದಲ್ಲಿ ಮಾಡುವ ವ್ಯವಹಾರ ಮುಕ್ತಾಯಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಗೆ ಕೊನೆಗೊಳ್ಳಅದ್ದು, ಈ ಸದಸ್ಯತ್ವವು ಕೊನೆಗೊಂಡಲ್ಲಿ ಪುನಃ ನಿಯಮಾನುಸಾರ ಹೊಸ ಸದಸ್ಯತ್ವವನ್ನು ಪಡೆಯಲಾಗುತ್ತಿದೆ.**

4. ಸದಸ್ಯರಿಗೆ ಷೇರು ಬಂಡವಾಳದ ಮೇಲಿನ ಲಾಭಾಂಶ ಸಂಘದ ಉಪವಿಧಿ 86(ಎಫ್) ಪ್ರಕಾರ ಘೋಷಣೆಯಾದ ಮೂರು ತಿಂಗಳೊಳಗಾಗಿ ಸದಸ್ಯರಿಗೆ ಲಾಭಾಂಶ ಪಾವತಿಸಲು ಸೂಚಿಸಲಾಗಿದೆ.

**ಸಮಜಾಯಿಷಿ: ಲಾಭಾಂಶ ಪಡೆಯುವ ಬಗ್ಗೆ ಸದಸ್ಯರಿಗೆ ಸಂಘದ ವಾರ್ಷಿಕ ವರದಿ ಪುಸ್ತಕದಲ್ಲಿ ಮತ್ತು ದಿನಚರಿಯಲ್ಲಿ ಮುದ್ರಿಸುವ ಮೂಲಕ ಹಾಗೂ ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತಿದೆ.**

5. ಸಂಘದ ಉಪವಿಧಿ 26(2)(ಈ) ಪ್ರಕಾರ ಸದಸ್ಯನ ಮರಣ ನಂತರದ 3 ತಿಂಗಳೊಳಗಾಗಿ ಸದಸ್ಯರಿಗೆ ಕೊಡಬೇಕಾದ (ಬರಬೇಕಾದ ಬಾಕಿಯನ್ನು ಕಳೆದು) ಮೊತ್ತವನ್ನು ಅಮಾನತ್ ಖಾತೆಗೆ ವರ್ಗಾವಣೆ ಮಾಡಲು ಸೂಚಿಸಲಾಗಿದೆ.

**ಸಮಜಾಯಿಷಿ: ದಿನಾಂಕ 11.06.2025ರ ಆಡಳಿತ ಮಂಡಳಿ ನಿರ್ಣಯದಂತೆ ಇಂತಹ 500 ಪ್ರಕರಣಗಳಲ್ಲಿ ಷೇರು ಮತ್ತು ಉಳಿತಾಯ ಖಾತೆಯ ಮೊಬಲಗನ್ನು ಅಮಾನತ್ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಇನ್ನುಳಿದ ಹಲವು ಪ್ರಕರಣಗಳಲ್ಲಿ ಅಡಿಕೆ ದಾಸ್ತಾನು ಮತ್ತು ಅವಧಿ ಗತಿಸದ ನಿಗದಿತ ಠೇವಣಿ ಮೊಬಲಗು ಇದ್ದು, ವಾರಸುದಾರರು ಉತ್ತಮ ಧಾರಣೆ ನಿರೀಕ್ಷಿಸಿ ಅಡಿಕೆ ಮಾರಾಟ ಮಾಡುತ್ತಿಲ್ಲ ಮತ್ತು ಅವಧಿ ಗತಿಸದ ಠೇವಣಿ ಹಣವನ್ನು ಅವಧಿ ಪೂರ್ವ ನಗದೀಕರಣ ಮಾಡುತ್ತಿಲ್ಲ. ಆದರೂ ಇಂತಹ ಪ್ರಕರಣಗಳಲ್ಲಿ ವಾರಸುದಾರರ ಮನವೊಲಿಸಿ ಆದಷ್ಟು ಶೀಘ್ರವಾಗಿ ಇತ್ಯರ್ಥಗೊಳಿಸಲು ಪ್ರಯತ್ನಿಸಲಾಗುತ್ತಿದೆ.**

6. ಬಾಕಿ ಉಳಿದ ಸದಸ್ಯರ ಕೆ.ವೈ.ಸಿ ದಾಖಲೆಗಳನ್ನು ಪಡೆದುಕೊಳ್ಳಲು ಸೂಚಿಸಿದೆ.

**ಸಮಜಾಯಿಷಿ: ಉಳಿದ ಸದಸ್ಯರ ಕೆ.ವೈ.ಸಿ. ಪಡೆದುಕೊಳ್ಳಲಾಗುತ್ತಿದೆ.**

7. ಆಪದ್ಧನ ನಿಧಿಯಿಂದ ಕಟ್ಟಡ ನಿಧಿಗೆ ವರ್ಗಾಯಿಸಿದ ಮೊತ್ತದಲ್ಲಿ ರೂ.1,00,00,000.00 ಗಳನ್ನು ಆಪದ್ಧನ ನಿಧಿಗೆ ಮರುಪೂರಣ ಮಾಡಲು ಬಾಕಿ ಉಳಿದಿದ್ದು ಆದಷ್ಟು ಶೀಘ್ರ ಮರುಪೂರಣ ಮಾಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಲಾಭದ ಪ್ರಮಾಣಕ್ಕನುಗುಣವಾಗಿ ಪ್ರತಿ ವರ್ಷ ಹಂತ ಹಂತವಾಗಿ ಮರುಪೂರಣ ಮಾಡಲಾಗುತ್ತಿದೆ.**

8. ಹೂಡಿಕೆಯಲ್ಲಿ ರೂ.50,00,000.00 ಶಿವಮೊಗ್ಗ ಶಾಖೆಯಲ್ಲಿ ಪಾರಿತೋಷಕ ಠೇವಣಿ ಎಂದು ನಿಗದಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ಇದನ್ನು ಹೂಡಿಕೆ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸದರಿ ಹೂಡಿಕೆಯನ್ನು ವ್ಯವಹಾರದಿಂದ ಹೊರತುಪಡಿಸಿ ಅನುಸೂಚಿತ ಬ್ಯಾಂಕಿನಲ್ಲಿ ಹೂಡುವುದು ಸೂಕ್ತವಾಗಿರುತ್ತದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯಂತೆ ಕ್ರಮವಿಡಲಾಗುವುದು.**

9. ಸಂಘವು ಇತರೆ ಸಂಘಗಳಲ್ಲಿ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ.

**ಸಮಜಾಯಿಷಿ: ಲಾಭಾಂಶ ಪಾವತಿಯಾಗಿರದಿದ್ದರೂ ಸಹ ಸಂಘದ ವ್ಯವಹಾರದ ಹಿತದೃಷ್ಟಿಯಿಂದ ಅಂತಹ ಸಂಸ್ಥೆಗಳ ಷೇರುಗಳನ್ನು ಹೊಂದುವುದು ಅಪೇಕ್ಷಣೀಯವಾದ ಕಾರಣ ಮುಂದುವರೆಸಲಾಗಿರುತ್ತದೆ. ಕೆಲವು ಸಂಸ್ಥೆಗಳು ನಷ್ಟದಲ್ಲಿರುವ ಕಾರಣ ಲಾಭಾಂಶ ಪಾವತಿಯಾಗಿರುವುದಿಲ್ಲ. ಆದಾಗ್ಯೂ ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿಕೊಂಡು ಸಾಧಕ-ಬಾಧಕ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುವುದು.**

10 ಅಡಿಕೆ ಆಧಾರ ಸಾಲಗಳನ್ನು ಆಡಳಿತ ಮಂಡಳಿ ನಿರ್ಧರಿಸಿದ ಮಿತಿಯಲ್ಲಿ ವಿತರಿಸಲಾಗಿದ್ದು ಅಂತಹ ಸಾಲಗಳನ್ನು ಘಟನೋತ್ತರ ಅನುಮೋದನೆಗೆ ಮಂಡಿಸದೆ ಇರುವುದನ್ನು ಗಮನಿಸಲಾಗಿದ್ದು ಈ ಕುರಿತು ಕೂಡಲೆ ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಆಡಳಿತ ಮಂಡಳಿ ಅನುಮೋದನೆಗೆ ಮಂಡಿಸಲಾಗುತ್ತಿದೆ.**

11. ಸಂಘವು ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿದಂತೆ ಕೆಲವೊಂದು ಸಾಲಗಳಿಗೆ ಬಡ್ಡಿ ರಿಯಾಯಿತಿ ನೀಡಿ ಅಥವಾ ಓ.ಟಿ.ಎಸ್ ಯೋಜನೆಯಡಿ ಬಡ್ಡಿ ರಿಯಾಯಿತಿ ನೀಡಿ ಸಾಲದ ಖಾತೆಗಳನ್ನು ಸಮಾಪನೆಗೊಳಿಸುತ್ತಿರುವುದನ್ನು ಗಮನಿಸಲಾಗಿದ್ದು, ಅಂತಹ ಪ್ರಕರಣಗಳ ಪಟ್ಟಿ ತಯಾರಿಸಿ ಸಾಮಾನ್ಯ ಸಭೆಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಬೇಕಿರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿದೆ. ಈ ಸಾಲಿನಿಂದ ವಾರ್ಷಿಕ ಸಾಮಾನ್ಯ ಸಭೆಗೆ ಮಂಡಿಸಲಾಗುತ್ತಿದೆ.**

12. ಸುಸ್ತಿಸಾಲ ವಸೂಲಿಗೆ ಕಾನೂನು ರೀತ್ಯ ಕ್ರಮ ಜರುಗಿಸದೇ ಇರುವ ಪ್ರಕರಣಗಳ ಮೊತ್ತ ರೂ.1,98,74,769.00 ಮತ್ತು ಸಂಖ್ಯೆ–264. ಈ ಕುರಿತು ಪ್ರಕರಣ ದಾಖಲಿಸಲು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ದಾವಾ ಪ್ರಕರಣ ದಾಖಲಿಸಲಾಗಿದೆ.**

13. ಸಂಘವು ಮೈಸೂರು ಎಜುಕೇಷನ್ ಸೊಸೈಟಿಗೆ ಕಟ್ಟಡವನ್ನು ಬಾಡಿಗೆಗೆ ನೀಡಿದ್ದು ಸದರಿ ಸಂಸ್ಥೆಯಿಂದ ನಿಗದಿತ ಸಮಯಕ್ಕೆ ಬಾಡಿಗೆ ಸಂದಾಯ ಆಗದಿರುವುದನ್ನು ಗಮನಿಸಲಾಗಿದ್ದು ವರದಿ ಸಾಲಿನ ಅಂತ್ಯಕ್ಕೆ ರೂ.12,98,720.00 ಬಾಡಿಗೆ ಸಂದಾಯ ಆಗುವುದು ಬಾಕಿ ಇರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಮೈಸೂರು ಎಜುಕೇಶನ್ ಸೊಸೈಟಿಯವರಿಗೆ ಬಾಡಿಗೆ ಹಣವನ್ನು ಪಾವತಿಸುವಂತೆ ಹಲವಾರು ಬಾರಿ ನೋಟೀಸು ನೀಡಿದ್ದು, ಅನಿವಾರ್ಯವಾದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.**

14. ಸಂಘವು ವ್ಯಾಜ್ಯಗಳನ್ನು ಸೂಕ್ತವಾಗಿ ಬಗೆಹರಿಸಿಕೊಂಡು ಸಂಘಕ್ಕೆ ಆಗಬಹುದಾದ ನಷ್ಟವನ್ನು ತಪ್ಪಿಸಲು ಕ್ರಮವಿಡುವಂತೆ ಸಲಹೆ ನೀಡಲಾಗಿದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ.**

15. ಸಾಲದ ಮೊತ್ತವನ್ನು ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಿ ನಗದು ಪಾವತಿ ಮಾಡಲಾಗುತ್ತಿದೆ. ರೂ.20,000.00 ಪಾವತಿ ಮೇಲಿನ ಮೊಬಲಗನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಯ ಮೂಲಕ ಪಾವತಿಸುವ ಕ್ರಮ ಅಗತ್ಯವಿದೆ.

**ಸಮಜಾಯಿಷಿ: ರೂ.20,000.00 ಮೇಲಿನ ಮೊಬಲಗನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಯ ಮೂಲಕವೇ ಪಾವತಿಸಲಾಗುತ್ತಿದೆ.**

16. ಕಟಾವು ಸಾಲ ಪಾವತಿಸುವಾಗ ಪಹಣಿಯಲ್ಲಿ ಇತರೆ ಸಂಘ ಸಂಸ್ಥೆಗೆ ಆಧಾರವಾಗಿದ್ದು ಇಸಿಯಲ್ಲಿ ನಮೂದಿಸದಿರುವುದು ಕಂಡು ಬಂದಿದ್ದು, ಇದರ ಬಗ್ಗೆ ಗಮನಿಸಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಮತ್ತು ಇಸಿ ರಿಜಿಸ್ಟರ್ ನಿರ್ವಹಿಸಲೂ ಸೂಚಿಸಲಾಗಿದೆ.

**ಸಮಜಾಯಿಷಿ: ಸಂಘದ ಸದಸ್ಯರಿಗೆ ಸಾಲ ನೀಡುವಾಗ ಫ್ರೂಟ್ ಆ್ಯಪ್‌ನಲ್ಲಿ ದಾಖಲಿಸುವುದರಿಂದ ಇ.ಸಿ. ರಿಜಿಸ್ಟರ್ ಅವಶ್ಯಕತೆ ಕಂಡು ಬಂದಿರುವುದಿಲ್ಲ. ಅಲ್ಲದೆ, ಪಹಣಿಯಲ್ಲಿ ಋಣಭಾರವಾಗಿರುವುದನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ.**

17. ಸಾಲಾಖೈರಿಗೆ ಕೊಡಬೇಕಾದ ಮತ್ತು ಬರಬೇಕಾದ ಖಾತೆಗಳ ಈ ವಿವರವನ್ನು ಲಗತ್ತಿಸಿದೆ. ಆಗಿಂದಾಗ್ಗೆ ಈ ಖಾತೆಯ ಮೊಬಲಗನ್ನು ಪರಿಶೀಲಿಸಿ ನಿಖರವಾದ ಖಾತೆಗೆ ವರ್ಗಾವಣೆ ಮಾಡುವ, ಬರಬೇಕಾದ ಮೊಬಲಗನ್ನು ಕರಾರುವಕ್ಕಾಗಿ ವಸೂಲಿ ಮಾಡುವ ಮತ್ತು ಪ್ರಕರಣವಾರು ಗುರುತಿಸಿ ಪಾವತಿಗೆ ಕ್ರಮವಿಡುವ ಪ್ರಕ್ರಿಯೆಯನ್ನು ನಿರಂತರವಾಗಿ ಪಾಲಿಸಬೇಕಾಗಿರುತ್ತದೆ.

**ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ.**

18. ಅಗತ್ಯಕ್ಕಿಂತ ಹೆಚ್ಚಿನ ದಾಸ್ತಾನು ಇಡುವುದರಿಂದ ಮುಂದೆ ದರ ಇಳಿಕೆಯಾದರೆ ಅದು ಸಂಘಕ್ಕೆ ನಷ್ಟ ಉಂಟು ಮಾಡುವ ಸಾಧ್ಯತೆಯಿರುತ್ತದೆ. ಈ ಕುರಿತು ಕ್ರಮವಿಡುವಂತೆ ಸೂಚಿಸಲಾಗಿದೆ.

**ಸಮಜಾಯಿಷಿ: ಮಾರುಕಟ್ಟೆ ಸಮಾಚಾರವನ್ನು ಆಧರಿಸಿ ಸಂಘಕ್ಕೆ ಲಾಭವಾಗುವ ರೀತಿಯಲ್ಲಿ ಅಗತ್ಯ ದಾಸ್ತಾನನ್ನು ಉಳಿಸಿಕೊಳ್ಳಲಾಗಿರುತ್ತದೆ. ಆದಾಗ್ಯೂ ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿಕೊಂಡು ಮುಂಜಾಗ್ರತಾ ಕ್ರಮವಿಡಲಾಗುವುದು.**

**46)ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:**

| ಕ್ರ.ಸಂ. | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ | ನ್ಯೂನತೆಯ ಸಂಕ್ಷಿಪ್ತ ವಿವರ |
|---|---|---|---|
| 1 | 12(1) | 12 | ಕರ್ನಾಟಕ ಸಹಕಾರಿ ಸಂಘಗಳ ನಿಯಮಗಳು 1960 ನಿಯಮ 28 ರ ಪ್ರಕಾರ ದ್ರವ್ಯಾಸ್ತಿ ನಿರ್ವಹಣೆ ಮಾಡಿರುವುದಿಲ್ಲ. |
| 2 | 12(1) | 12 | ಸಂಘದ ಉಪವಿಧಿ 89(2) ರನ್ವಯ ಕಾಯ್ದಿಟ್ಟ ನಿಧಿಯನ್ನು ಕಾಯ್ದೆ ಕಲಂ 58(ಇ) ಪ್ರಕಾರ ಪ್ರತ್ಯೇಕವಾಗಿ ಹೂಡಿಕೆ ಮಾಡಿರುವುದಿಲ್ಲ. |
| 3 | 12(1) | 12 | ಹೊರರಾಜ್ಯದ ದಲ್ಲಾಳಿಗಳನ್ನು ನಾಮಾಮಾತ್ರ ಸದಸ್ಯರನ್ನಾಗಿ ಸೇರಿಸಿಕೊಂಡಿರುವುದು ಕಾಯ್ದೆ ಕಲಂ(18) ರ ಉಲ್ಲಂಘನೆಯಾಗಿರುತ್ತದೆ. |
| 4 | 12(2) | 12 | 1. ಬೈಲಾ ಕ್ರಮ ಸಂಖ್ಯೆ 16ರ ಪ್ರಕಾರ ಒಟ್ಟು ಸದಸ್ಯರಲ್ಲಿ ಶೇ.48.16 ರಷ್ಟು ಸದಸ್ಯರು ಕನಿಷ್ಟ ವ್ಯವಹಾರ ನಡೆಸಿರುವುದಿಲ್ಲ.<br>2. ಸಂಘದ ಬೈಲಾ ಸಂಖ್ಯೆ 29 ರ ಪ್ರಕಾರ ನಾಮಮಾತ್ರ ಸದಸ್ಯತ್ವವು ಸಂಘದೊಂದಿಗೆ ಹೊಂದಿದ ನಿರ್ದಿಷ್ಟ ಕೆಲಸ ಅಥವಾ ವ್ಯವಹಾರ ಕೊನೆಗೊಂಡ ತಕ್ಷಣ ಕೊನೆಗೊಳ್ಳತಕ್ಕದ್ದು. |
| 5 | 13ಎ(3) | 13 | ಸಂಘದ ಎಲ್ಲಾ ಸದಸ್ಯರಿಂದ ಕೆವೈಸಿ ದಾಖಲಾತಿಗಳನ್ನು ಪಡೆಯಲು ಸೂಚಿಸಿದೆ. |
| 6 | 15(3) | 17 | ಆಪದ್ಧನ ನಿಧಿಯಿಂದ ಕಟ್ಟಡ ನಿಧಿಗೆ ವರ್ಗಾಯಿಸಿದ ಮೊತ್ತದಲ್ಲಿ ರೂ.1,00,00,000.00 ಗಳನ್ನು ಆಪದ್ಧನ ನಿಧಿಗೆ ಮರುಪೂರಣ ಮಾಡಲು ಬಾಕಿ ಉಳಿದಿದ್ದು ಆದಷ್ಟು ಶೀಘ್ರ ಮರುಪೂರಣ ಮಾಡಲು ಸೂಚಿಸಲಾಗಿದೆ. |
| 7 | 16(5) | 17 | ಹೂಡಿಕೆಯಲ್ಲಿ ರೂ.50,00,000.00 ಶಿವಮೊಗ್ಗ ಶಾಖೆಯಲ್ಲಿ ಪಾರಿತೋಷಕ ಠೇವಣಿ ಎಂದು ನಿಗದಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ಇದನ್ನು ಹೂಡಿಕೆ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸದರಿ ಹೂಡಿಕೆಯನ್ನು ವ್ಯವಹಾರದಿಂದ ಹೊರತುಪಡಿಸಿ ಅನುಸೂಚಿತ ಬ್ಯಾಂಕಿನಲ್ಲಿ ಹೂಡುವುದು ಸೂಕ್ತವಾಗಿರುತ್ತದೆ. |
| 8 | 16(7) | 19 | ಸಂಘವು ಇತರೆ ಸಂಘಗಳಲ್ಲಿ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ. |
| 9 | 21(1) | 23 | ಇತರೆ ಬಾಬ್ತುಗಳನ್ನು ಆದಷ್ಟು ಶೀಘ್ರವಾಗಿ ಪರಿಶೀಲನೆ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲು ಸಲಹೆ ನೀಡಲಾಗಿದೆ. |
| 10 | 21(2) | 23 | ಇತರೆ ಜವಾಬ್ದಾರಿಗಳನ್ನು ಪಾವತಿಸಲು ಸೂಚಿಸಲಾಗಿದೆ. |
| 11 | 26(2) | 27 | ಅಡಿಕೆ ಆಧಾರ ಸಾಲಗಳನ್ನು ಮಂಡಳಿ ನಿರ್ಧರಿಸಿದ ಮಿತಿಯಲ್ಲಿ ವಿತರಿಸ ಲಾಗಿದ್ದು ಅಂತಹ ಸಾಲಗಳನ್ನು ಘಟನೋತ್ತರ ಅನುಮೋದನೆಗೆ ಮಂಡಿಸದೆ ಇರುವುದನ್ನು ಗಮನಿಸಲಾಗಿದ್ದು ಈ ಕುರಿತು ಕೂಡಲೆ ಕ್ರಮವಿಡಲು ಸೂಚಿಸಿದೆ. |

| | | | |
|---|---|---|---|
| 12 | 27 | 30 | ಸಂಘವು ಸಾಮಾನ್ಯ ಸಭೆಯಲ್ಲಿ ನಿರ್ಧರಿಸಿದಂತೆ ಕೆಲವೊಂದು ಸಾಲಗಳಿಗೆ ಬಡ್ಡಿ ರಿಯಾಯಿತಿ ನೀಡಿ ಅಥವಾ ಓ.ಟಿ.ಎಸ್ ಯೋಜನೆಯಡಿ ಬಡ್ಡಿ ರಿಯಾಯಿತಿ ನೀಡಿ ಸಾಲದ ಖಾತೆಗಳನ್ನು ಸಮಾಪನೆಗೊಳಿಸುತ್ತಿರುವುದನ್ನು ಗಮನಿಸಲಾಗಿದ್ದು, ಅಂತಹ ಪ್ರಕರಣಗಳ ಪಟ್ಟಿ ತಯಾರಿಸಿ ಸಾಮಾನ್ಯ ಸಭೆಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಬೇಕಿರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಲಾಗಿದೆ. |
| 13 | 28(7) | 31 | ಸುಸ್ತಿಸಾಲ ವಸೂಲಿಗೆ ಕಾನೂನು ರೀತ್ಯ ಕ್ರಮ ಜರುಗಿಸದೇ ಇರುವ ಪ್ರಕರಣಗಳ ಮೊತ್ತ ರೂ.1,98,74,769.00 ಮತ್ತು ಸಂಖ್ಯೆ–264. ಈ ಕುರಿತು ಪ್ರಕರಣ ದಾಖಲಿಸಲು ಕ್ರಮವಿಡಲು ಸೂಚಿಸಿದೆ. |
| 14 | 29(ಸಿ) | 33 | ಕೇಂದ್ರಕಛೇರಿಯ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಖರೀದಿಸಲಾದ ಹವಾನಿಯಂತ್ರಣ ಯಂತ್ರ, ಸಿ.ಸಿ.ಕ್ಯಾಮೆರಾ, ಮುಂತಾದ ಕಛೇರಿ ಸಲಕರಣೆಗೆ ಸಂಬಂಧಪಟ್ಟ ಚರಾಸ್ತಿಗಳನ್ನು ಪೀಠೋಪಕರಣದಲ್ಲಿ ಸೇರಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಮೊತ್ತವನ್ನು ಪೀಠೋಪಕರಣದಿಂದ ಬೇರ್ಪಡಿಸಿ ಕಛೇರಿ ಸಲಕರಣೆಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ. |
| | | | **ಸಮಜಾಯಿಷಿ: ಲೆಕ್ಕಪರಿಶೋಧಕರ ಸಲಹೆ ಮತ್ತು ಸೂಚನೆಗಳನ್ನು ಗಮನಿಸಿದೆ. ಸಂಬಂಧಿಸಿದ ಕಂಡಿಕವಾರುಗಳಲ್ಲಿ ಸಮಜಾಯಿಷಿ ನೀಡಲಾಗಿದೆ.** |

## ಲೆಕ್ಕಪರಿಶೋಧಕರ ಧೃಢೀಕರಣ ಪತ್ರ

**(ಕರ್ನಾಟಕ ಸಹಕಾರ ಸಂಘಗಳ ಅಧಿ ನಿಯಮ 1959ರ ಕಾಲಂ 63(16) ರಂತೆ)**

ನಾವು ಮೆ. ಮಧುಕರ ಹೆಗಡೆ ಅಂಡ್ ಕೋ., ಬೆಂಗಳೂರು ಈ ಮೂಲಕ ಧೃಢೀಕರಿಸುವುದೇನೆಂದರೆ,

1. ನಮ್ಮ ತಿಳುವಳಿಕೆ ಅಭಿಪ್ರಾಯ ಹಾಗು ಲೆಕ್ಕಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕಪತ್ರಗಳು, ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959 ಅಧಿ ನಿಯಮದಲ್ಲಿ ಅಗತ್ಯ ಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತೇವೆ.
2. ದಿನಾಂಕ 31.03.2025 ರ ಅಂತ್ಯಕ್ಕೆ ಇದ್ದ ಅಡಾವೆ ಪತ್ರಿಕೆ ಹಾಗು ಸನ್ 2024–25 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗು ನ್ಯಾಯ ಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿಯನ್ನು ಪ್ರತಿಬಿಂಭಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇವೆ.
3. ನಮ್ಮ ಜ್ಞಾನ ಹಾಗು ನಂಬಿಕೆ ಪ್ರಕಾರ ಲೆಕ್ಕಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗು ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇವೆ.
4. ಸಂಘದ ಲೆಕ್ಕಪರಿಶೋಧನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇವೆ.
5. ವರದಿಗೆ ಲಗತ್ತಿಸಿದ ಅಡಾವೆ ಪತ್ರಿಕೆ ಹಾಗು ಇತರೆ ಆರ್ಥಿಕ ತ:ಖ್ತೆಗಳು ಸಂಘದಲ್ಲಿ ನಿರ್ವಹಿಸಿದ ಲೆಕ್ಕಪತ್ರಗಳಿಗೆ ತಾಳೆ ಇರುತ್ತವೆ.

**ಕಡ್ಡಾಯ ಲಗತ್ತುಗಳು:**

| | |
|---|---|
| 1. ಜಮಾ ಖರ್ಚು ತಃಖ್ತೆ | ಲಗತ್ತಿಸಲಾಗಿದೆ. |
| 2. ವ್ಯಾಪಾರ ತಃಖ್ತೆ | ಲಗತ್ತಿಸಲಾಗಿದೆ. |
| 3. ಲಾಭ–ಹಾನಿ ತಃಖ್ತೆ | ಲಗತ್ತಿಸಲಾಗಿದೆ. |
| 4. ಆಸ್ತಿ–ಜವಾಬ್ದಾರಿ ತಃಖ್ತೆ | ಲಗತ್ತಿಸಲಾಗಿದೆ. |
| 5. ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿರುವ ಎಲ್ಲಾ ಅಂಶಗಳಿಗೆ ಕುಳುವಾರು/ದೃಢೀಕರಣ ತಃಖ್ತೆಯನ್ನು ಮತ್ತು ಬ್ಯಾಂಕ್ ಸಮನ್ವಯ ತಃಖ್ತೆಯನ್ನು ಲಗತ್ತಿಸುವುದು. | ಲಗತ್ತಿಸಲಾಗಿದೆ. |
| 6. ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಛಾಯಾ ಪ್ರತಿಯನ್ನು ಲೆಕ್ಕಪರಿಶೋಧಕರು ದೃಢೀಕರಿಸಿ ಕಡ್ಡಾಯವಾಗಿ ವರದಿಗೆ ಲಗತ್ತಿಸತಕ್ಕದ್ದು. | ಲಗತ್ತಿಸಲಾಗಿದೆ. |

ಸಹಿ/–
ಮಧುಕರ ಹೆಗಡೆ & ಕಂ
ಸನ್ನದು ಲೆಕ್ಕಪರಿಶೋಧಕರು
ಎಫ್.ಆರ್ ನಂ: 007954ಎಸ್

ಸಹಿ/–
ಮಧುಕರ ಜಿ ಹೆಗಡೆ
ಮಾಲೀಕರು ಎಂ.ಸಂ.206777
UDIN NO: 25206777BMUJOQ2250

ದಿನಾಂಕ: 30/06/2025
ಸ್ಥಳ: ಬೆಂಗಳೂರು

ನೋಂದಣಿ: ಆರ್‌ಸಿಎಸ್:1540, ದಿನಾಂಕ 08.11.1939 PAN:AAAJM0788P GSTIN:29AAAJM0788P1ZD

**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ**

ಎ.ಪಿ.ಎಂ.ಸಿ.ಆವರಣ, ಸಾಗರ ರಸ್ತೆ, ಶಿವಮೊಗ್ಗ –577 204

ದೂರವಾಣಿ: 08182–250513/250514, ಇಮೇಲ್: ho@mamcos.info

## ದಿನಾಂಕ 23 ಸೆಪ್ಟಂಬರ್ 2024ರಂದು ನಡೆದ 2023–24ನೇ ಸಾಲಿನ ಸಂಘದ 84ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯ

**ಹಾಜರಿದ್ದ ಸದಸ್ಯರು: 5890**

ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರೂ ಆದ ಶ್ರೀ ಗುರುದತ್ತ ಹೆಗಡೆ, ಐ.ಎ.ಎಸ್ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಂಘದ 84ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ನಿರ್ಣಯಗಳು ಈ ಕೆಳಗಿನಂತಿದೆ.

**ಪ್ರಾರ್ಥನೆ, ಸಹಕಾರ ಗೀತೆ ಮತ್ತು ರೈತಗೀತೆ.**

84 ನೇ ವಾರ್ಷಿಕ ಸಾಮಾನ್ಯ ಸಭೆಯ ವಿದ್ಯುಕ್ತ ಪ್ರಾರಂಭಕ್ಕೂ ಪೂರ್ವದಲ್ಲಿ ಶ್ರೀಮತಿ ಪಲ್ಲವಿ ಆರ್ ಮತ್ತು ಶ್ರೀಮತಿ ರಂಜಿತಾ ಸಿ ಎ ಇವರು ದೇವತಾ ಪ್ರಾರ್ಥನೆಯನ್ನು ಮಾಡಿದರು ಮತ್ತು ಸಹಕಾರ ಗೀತೆಯನ್ನು ಹಾಡಿದರು. ನಂತರದಲ್ಲಿ ಮಾಮ್‌ಕೋಸ್ ಸಿಬ್ಬಂದಿಗಳು ರೈತಗೀತೆಯನ್ನು ಹಾಡಿದರು. ತದನಂತರ ಸಭೆಯ ವಿದ್ಯುಕ್ತ ಕಲಾಪಗಳು ಪ್ರಾರಂಭವಾಯಿತು.

**ಸ್ವಾಗತ.**

ಸಂಘದ ಮಾನ್ಯ ಉಪಾಧ್ಯಕ್ಷರಾದ ಶ್ರೀ ಮಹೇಶ್ ಹೆಚ್.ಎಸ್. ಇವರು ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸಂಘದ ಮಾನ್ಯ ಅಧ್ಯಕ್ಷರಾದ ಶ್ರೀ ಗುರುದತ್ತ ಹೆಗಡೆ, ಐ.ಎ.ಎಸ್. ಇವರನ್ನು ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸಿಕೊಡುವಂತೆ ಕೋರುತ್ತಾ, ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನೂ ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ನಿರ್ದೇಶಕರುಗಳನ್ನು ಮತ್ತು ಸಂಘದ ವ್ಯವಸ್ಥಾಪಕ ನಿರ್ದೇಶಕರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಹಾಗೆಯೇ, ಸಭೆಯಲ್ಲಿ ಹಾಜರಿದ್ದ ಮಾಜಿ ಉಪಾಧ್ಯಕ್ಷರನ್ನು, ಮಾಜಿ ನಿರ್ದೇಶಕರನ್ನು ಮತ್ತು ಇತರ ಸಹಕಾರ ಸಂಸ್ಥೆಗಳ ಉಪಾಧ್ಯಕ್ಷರು, ಅಧ್ಯಕ್ಷರು ಮತ್ತು ನಿರ್ದೇಶಕರನ್ನು ಸಭೆಗೆ ಸ್ವಾಗತಿಸಿದರು. ಹಾಗೆಯೇ ಮಧುಕರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು ಇವರನ್ನು ಸಹ ಸ್ವಾಗತಿಸಿದರು. ಸಂಘದ ಯಶಸ್ಸಿಗಾಗಿ ದುಡಿಯುತ್ತಿರುವ ಸಿಬ್ಬಂದಿ ವರ್ಗದವರನ್ನು ಮತ್ತು ಉಪಸ್ಥಿತರಿರುವ ಮಾಧ್ಯಮ ಪ್ರತಿನಿಧಿಗಳನ್ನು ಹಾಗೂ ಮಾಮ್‌ಕೋಸ್ ಕುರಿತಾದ ಸಾಕ್ಷ್ಯ ಚಿತ್ರ ವನ್ನು ಸುಂದರವಾಗಿ ಚಿತ್ರಿಸಿಕೊಟ್ಟ ಶ್ರೀ ಪ್ರದೀಪ್ ಪೈ,–ಸುಧೀ ನೆಟ್‌ವರ್ಕ್ ಬೆಂಗಳೂರು ಇವರನ್ನು ಸಹ ಈ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಈ 84ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕಾರ್ಯಸೂಚಿಯನ್ವಯ ಯಶಸ್ವಿಗೊಳಿಸಲು ಸಭೆಗೆ ಅಗ್ರಹ ಪೂರ್ವಕವಾಗಿ ವಿನಂತಿಸಿದರು.

**ಅಗಲಿದ ಸಂಘದ ಸದಸ್ಯರು ಮತ್ತು ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದು.**

ಸಂಘದ ನಿರ್ದೇಶಕರಾದ ಶ್ರೀ ಭೀಮರಾವ್ ಟಿ ಆರ್ ಇವರು ಅಗಲಿದ ಸಂಘದ ಸದಸ್ಯರು ಮತ್ತು ನಾಡಿನ ಗಣ್ಯರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿಕೊಟ್ಟರು. ಸಂಘದ ಮಾಜಿ ನಿರ್ದೇಶಕರುಗಳಾದ ಶ್ರೀನಿವಾಸ ಯು ಎಸ್ ಕಡ್ತೂರು, ಗುರುಬಸಪ್ಪ ಗೌಡ ನಿಸರಾಣಿ, ಸದಾನಂದ ಎಸ್ ಸುರುಳಿಕೊಪ್ಪ ಇವರಿಗೆ ಹಾಗೂ ಶ್ರೀನಿವಾಸ ಕೆ ಹೆಚ್, ಕಾನುಗೋಡು, ಸಾಗರ, – ಮಾಜಿ ಮಂತ್ರಿಗಳು, ಡಿ ಬಿ ಚಂದ್ರೇಗೌಡ ಮಾಜಿ ಲೋಕಸಭಾ ಸದಸ್ಯರು ಮತ್ತು ಮಾಜಿ ಮಂತ್ರಿಗಳು, ಶಾಂತರಾಮ ವಿ ಹೆಗಡೆ, ಶೀಗೆಹಳ್ಳಿ, – ಮಾಜಿ ಅಧ್ಯಕ್ಷರು, ಟಿ ಎಸ್ ಎಸ್ ಹಾಗೂ ಸಹಕಾರ ರತ್ನ ಪುರಸ್ಕೃತರು, ಬಿ ಎಸ್ ವಿಶ್ವನಾಥ್, ತೀರ್ಥಹಳ್ಳಿ ಹಿರಿಯ ಸಹಕಾರಿ ಹಾಗೂ ಸಹಕಾರ ರತ್ನ ಪುರಸ್ಕೃತರು, ಅನಂತಕೃಷ್ಣಮೂರ್ತಿ ಎ.ಟಿ – ಸಂಘದ ತಾಂತ್ರಿಕ ಸಲಹೆಗಾರರು ಹಾಗೂ ಸದಸ್ಯರು, ದ್ವಾರಕೀಶ್ – ನಟ ಹಾಗೂ ನಿರ್ದೇಶಕ ಕನ್ನಡ ಚಿತ್ರರಂಗ, ಡಾ.ಲೀಲಾವತಿ– ಖ್ಯಾತ ನಟಿ, ಕನ್ನಡ ಚಿತ್ರರಂಗ, ಸುಬ್ಬಲಕ್ಷ್ಮೀ ಆರ್ – ಖ್ಯಾತ ಸಂಗೀತಗಾರ್ತಿ, ವಾಣಿ ಜಯರಾಂ– ಹಿನ್ನೆಲೆ ಗಾಯಕಿ, ಅಪರ್ಣ– ಖ್ಯಾತ ನಿರೂಪಕಿ, ಗೋವಿಂದರಾವ್ ಹೆಚ್ ನಾಯಕ್– ಖ್ಯಾತ ಬರಹಗಾರರು & ಸಾಹಿತ್ಯ

ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ತಿರುಮಲೇಶ್ ಕೆ ವಿ– ಬರಹಗಾರರು, ಶ್ರೀನಿವಾಸ ಹೆಗಡೆ – ಚಂದ್ರಯಾನ –1ರ ನಿರ್ದೇಶಕರು, ಸ್ವಾಮಿನಾಥನ್ ಎಂ ಎಸ್ – ಕೃಷಿ ವಿಜ್ಞಾನಿ, ಫಾತೀಮಾ ಬೀಬಿ – ಮೊದಲ ಮಹಿಳಾ ಜಸ್ಟೀಸ್, ಬಿಕೆಎಸ್ ವರ್ಮಾ – ಪ್ರಸಿದ್ಧ ಕಲಾವಿದ ಇವರಿಗೆ ಮತ್ತು ಸಂಘಕ್ಕೆ ತಿಳಿದು ಬಂದ ಮಾಹಿತಿಗಳ ಪ್ರಕಾರ ಕಳೆದ ವಾರ್ಷಿಕ ಸಾಮಾನ್ಯ ಸಭೆಯ ನಂತರದಿಂದ ಈ ಸಭೆಯ ದಿನಾಂಕದವರೆಗೆ ನಿಧನರಾದ ಸದಸ್ಯರ ಗೌರವಾರ್ಥ ಸಭೆಯಲ್ಲಿ ಮೌನವನ್ನು ಆಚರಿಸಿ, ಸಂತಾಪ ಸೂಚಿಸಲಾಯಿತು ಹಾಗೂ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಯಿತು.

ನಂತರ ಮಾನ್ಯ ಅಧ್ಯಕ್ಷರು ದೀಪ ಬೆಳಗುವುದರ ಮೂಲಕ ಸಭೆಗೆ ಚಾಲನೆಯನ್ನು ನೀಡಿದರು. ನಂತರದಲ್ಲಿ ಮಾನ್ಯ ಅಧ್ಯಕ್ಷರು ಮಾಮ್‌ಕೋಸ್ ಸಾಕ್ಷ್ಯ ಚಿತ್ರವನ್ನು ಬಿಡುಗಡೆಗೊಳಿಸಿದರು.

**ವಿಷಯ 01 :** **84ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವ ಕುರಿತು.**

**ತೀರ್ಮಾನ :** ಸಂಘದ ವ್ಯವಸ್ಥಾಪಕ ನಿರ್ದೇಶಕರು ಸಭಾ ಸೂಚನಾ ಪತ್ರವನ್ನು (ಮೀಟಿಂಗ್ ನೋಟಿಸ್) ಓದಿದರು. ಈ ಸರ್ವ ಸದಸ್ಯರ ಸಭೆಗೆ ಅವಶ್ಯಕ ಕೋರಂ 1000 ಅಥವಾ ಅರ್ಹ ಸದಸ್ಯರ ಶೇ.10 ಪ್ರತಿಶತ ಆಗಿದ್ದು, ಪ್ರಸ್ತುತ 1000ಕ್ಕೂ ಹೆಚ್ಚು ಅರ್ಹ ಸದಸ್ಯರು ಹಾಜರಿರುವುದರಿಂದ ಸಭೆಯನ್ನು ಪ್ರಾರಂಭಿಸಬಹುದು ಎಂದು ವ್ಯವಸ್ಥಾಪಕ ನಿರ್ದೇಶಕರು ಸಭೆಗೆ ತಿಳಿಸಿದರು. ನಂತರ ಸಭೆಗೆ ಅವಶ್ಯಕ ಕೋರಂ ಇರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡು 84ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸನ್ನು ದಾಖಲಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 02 :** **ದಿನಾಂಕ: 20/09/2023ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಪರಿಶೀಲಿಸಿ, ಓದಿ ದಾಖಲು ಮಾಡುವುದು ಹಾಗೂ ಆ ನಡವಳಿಯ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸುವ ಕುರಿತು.**

**ತೀರ್ಮಾನ :** ದಿನಾಂಕ: 20/09/2023ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಯನ್ನು ಪರಿಶೀಲಿಸಿ, ದಾಖಲಿಸುವ ಮುನ್ನ, ಶ್ರೀ ಹೆಚ್ ಎಸ್ ಮಂಜಪ್ಪ ಇವರು ಈ ಹಿಂದೆ ಲೆಕ್ಕಪರಿಶೋಧನಾ ವರದಿಯನ್ನು ಪ್ರತ್ಯೇಕವಾಗಿ ಮುದ್ರಿಸಿ, ಶಾಖೆಗಳಲ್ಲಿ ಇರಿಸಿ ಅಂಚೆ ಮೂಲಕ ಕಳುಹಿಸುವುದು ಬೇಡ ಎಂದು ಸಲಹೆ ನೀಡಿದ್ದೆ. ಅದರಂತೆ ಮಾಡಲಾಗಿದೆ. ಅದೇ ರೀತಿ ಹಿಂದಿನ ಸಾಮಾನ್ಯ ಸಭೆಯ ನಡವಳಿಯನ್ನು ಸಹ ವಾರ್ಷಿಕ ವರದಿಯಲ್ಲಿ ಮುದ್ರಿಸದೇ ಲೆಕ್ಕಪರಿಶೋಧನಾ ವರದಿಯಲ್ಲಿ ಮುದ್ರಿಸಿ ಎಂದು ಸಲಹೆ ನೀಡಿದರು. ಈ ಬಗ್ಗೆ ಮಾನ್ಯ ಉಪಾದ್ಯಕ್ಷರು ಪರಿಶೀಲಿಸುವುದಾಗಿ ತಿಳಿಸಿದರು. ಶ್ರೀ ಸುಬ್ಬರಾವ್ ಲಿಂಗದಹಳ್ಳಿ ಇವರು ಅಡಿಕೆ ಬೆಳೆಗಾರರಿಗೆ ಉತ್ತಮ ಧಾರಣೆಯನ್ನು ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅಡಿಕೆಯ ಆಮದು ದರವನ್ನು ಕೆ ಜಿ ಒಂದಕ್ಕೆ ರೂ.251 ರಿಂದ 351 ಕ್ಕೆ ಹೆಚ್ಚಿಸಿರುವುದಾಗಿ ತಿಳಿಸಿರುತ್ತೀರಿ. ಆದರೆ ರಾಜ್ಯ ಹಾಗೂ ದೇಶಕ್ಕೆ ಹೊರಗಡೆಯಿಂದ ಬರುವ ಅಡಿಕೆಯ ಪ್ರಮಾಣ ಎಷ್ಟು ಹಾಗೂ ಇದರಿಂದ ತೆರಿಗೆ ಎಷ್ಟು ಸಂಗ್ರಹವಾಗಿದೆ ಎಂಬ ಮಾಹಿತಿಯನ್ನು ಪಡೆದು ಮುಂದಿನ ಸಭೆಯಲ್ಲಿ ತಿಳಿಸುವಂತೆ ಕೋರಿದರು.

ಶ್ರೀ ವೆಂಕಟಾಚಲ ಜಿ ಹಸೂಡಿ ಇವರು 65 ಕೆ ಜಿ ಗಿಂತ ಕಡಿಮೆ ಇಲ್ಲದಂತೆ ಅಡಿಕೆ ಅಥವಾ 50 ಕೆಜಿ ಗೆ ಕಡಿಮೆ ಇಲ್ಲದಂತೆ ಕಾಳುಮೆಣಸನ್ನು ಅಥವಾ ಸಿಪ್ಪೆಗೋಟು ಆದಲ್ಲಿ 200ಕೆಜಿ ಗಿಂತ ಕಡಿಮೆ ಇಲ್ಲದಂತೆ ಹಾಕತಕ್ಕದು ಎಂದಿರುತ್ತದೆ. ಮಾಮ್‌ಕೋಸ್ ಅಡಿಕೆ ಸಂಸ್ಥೆ. ಕಾಳು ಮೆಣಸು ಸಂಸ್ಥೆಯಲ್ಲ. ಆದ್ದರಿಂದ ಅಡಿಕೆ ಅಥವಾ ಕಾಳುಮೆಣಸು ಎನ್ನುವ ಬದಲು ಅಡಿಕೆ ಮತ್ತು ಕಾಳು ಮೆಣಸು ಎಂದು ಬೈಲಾ ತಿದ್ದುಪಡಿ ಆಗಬೇಕು ಎಂದು ಅಭಿಪ್ರಾಯಪಟ್ಟರು. ಈ ಕುರಿತು ಮಾತನಾಡಿದ ಮಾನ್ಯ ಉಪಾಧ್ಯಕ್ಷರು ಕಾಳುಮೆಣಸನ್ನು ಅಡಿಕೆಯ ಜೊತೆಗೆ ಉಪಬೆಳೆಯಾಗಿ ಬೆಳೆಯುತ್ತಿರುವುದರಿಂದ ಕನಿಷ್ಠ ವ್ಯವಹಾರಕ್ಕೆ ಸೇರಿಸಲಾಗಿದೆ ಎಂದು ತಿಳಿಸಿದರು.

ಕಳೆದ ವಾರ್ಷಿಕ ಮಹಾಸಭೆಯಲ್ಲಿ ಪೆಟ್ರೋಲ್ ಬಂಕ್ ತೆರೆಯುವ ಬಗ್ಗೆ ಪ್ರಸ್ತಾಪವನ್ನು ಮಾಡಲಾಗಿತ್ತು. ಅದಕ್ಕೆ ಆಡಳಿತ ಮಂಡಲಿಯು ಪರಿಶೀಲಿಸುವುದಾಗಿ ಉತ್ತರವನ್ನು ನೀಡಿದ್ದೀರಾ? ಆದ್ದರಿಂದ ಈ ಬಗ್ಗೆ ತೆಗೆದುಕೊಂಡ

ಕ್ರಮದ ಬಗ್ಗೆ ತಿಳಿಸಿ ಎಂದು ಶ್ರೀ ನಾರಾಯಣ ರಾವ್ ಜಿ ಎಸ್ ಇವರು ಪ್ರಶ್ನಿಸಿದಾಗ ಮಾನ್ಯ ಉಪಾಧ್ಯಕ್ಷರು ಇದಕ್ಕೆ ಜಾಗದ ವ್ಯವಸ್ಥೆಯಾಗಬೇಕು. ಸಾಧಕ–ಬಾದಕಗಳನ್ನು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಈ ಬಗ್ಗೆ ಯೋಚಿಸುವುದಾಗಿ ತಿಳಿಸಿದರು.

ಶ್ರೀ ತಿಮ್ಮಪ್ಪ ಎಲ್ ಟಿ ಇವರು ಸಂಘದಿಂದ ಶೀಥಲೀಕರಣ ಘಟಕವನ್ನು ಮಾಡುವ ಕುರಿತು ಪರಿಶೀಲಿಸುವುದಾಗಿ ತಿಳಿಸಿರುತ್ತೀರಾ? ಅದರ ಬಗೆಗಿನ ಪ್ರಗತಿಯ ವಿವರವನ್ನು ತಿಳಿಸುವಂತೆ ಕೇಳಿದಾಗ ಮಾನ್ಯ ಉಪಾಧ್ಯಕ್ಷರು ಈ ಬಗ್ಗೆ ಕಾರ್ಯ ಪ್ರಗತಿಯಲ್ಲಿರುತ್ತದೆ, ಎನ್ ಸಿ ಡಿ ಸಿಯವರ ಜೊತೆ ಮಾತನಾಡಿದ್ದು, ಸಾಗರ ಭಾಗದಲ್ಲಿ ಶೀಥಲೀಕರಣ ಘಟಕವನ್ನು ಪ್ರಾರಂಭಿಸುವ ಯೋಚನೆ ಇದೆ ಎಂದು ಉತ್ತರಿಸಿದರು.

ಶ್ರೀ ವಾಸುದೇವ ಕೆ ಟಿ ಇವರು ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಕನಿಷ್ಠ ಯಾವುದಾದರೂ 2 ಸಾಮಾನ್ಯ ಸಭೆಗಳಿಗೆ ಹಾಜರಾಗುವ ಸದಸ್ಯರಿಗೆ ಮಾತ್ರ ಮತ ನೀಡುವ ಹಕ್ಕು ಇರುತ್ತದೆ ಎಂದು ಮಾಹಿತಿಯನ್ನು ನೀಡಲಾಗಿದೆ. ಆದರೆ ತುಂಬಾ ದೂರದ ಊರಿನಿಂದ ಇಲ್ಲಿಯವರೆಗೆ ಬರಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಆಪ್ಕೋಸ್ ಸಂಸ್ಥೆಯಲ್ಲಿ ಷೇರುದಾರರ ಸಭೆಯ ದಿನದಂದು ಎರಡು ಹಾಜರಾತಿಯ ಪುಸ್ತಕಗಳನ್ನು ಇರಿಸಲಾಗಿರುತ್ತದೆ. ಒಂದು ಷೇರುದಾರರ ಸಭೆಯ ಹಾಜರಾತಿ ಮತ್ತೊಂದು ಮಹಾಸಭೆಯ ಹಾಜರಾತಿ ಪುಸ್ತಕ. ನೀವು ಅದೇ ರೀತಿ ಮಾಡಿ. ಯಾವುದೇ ರೀತಿಯ ಕಾನೂನು ತೊಂದರೆ ಇಲ್ಲ ಎಂದು ಸಲಹೆ ನೀಡಿದರು. ಈ ಬಗ್ಗೆ ಮಾನ್ಯ ಉಪಾಧ್ಯಕ್ಷರು ಮಾತನಾಡಿ ಕಾಯಿದೆಯಲ್ಲಿ ಇದಕ್ಕೆ ಅವಕಾಶವಿಲ್ಲ ಎಂದು ಉತ್ತರಿಸಿದರು.

ಈ ಸಂದರ್ಭದಲ್ಲಿ ಶ್ರೀ ಪ್ರಸನ್ನಕುಮಾರ್ ಎ ಆರ್ ಇವರು ಮಾತನಾಡಿ ಷೇರುದಾರರ ಸಭೆಯೇ ಬೇರೆ ಮಹಾಸಭೆಯ ಹಾಜರಾತಿಯೇ ಬೇರೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು, ಆದರೆ ಸಭೆಗೆ ಹಾಜರಾಗಲು ಸಾಧ್ಯವಿಲ್ಲದವರಿಗೆ Leave of absense ನೀಡಲು ಅವಕಾಶವಿದ್ದರೆ ನೀಡಿ ಎಂದು ಕೇಳಿದಾಗ ಮಾನ್ಯ ಉಪಾಧ್ಯಕ್ಷರು ಕಾಯಿದೆಯನ್ವಯ ಕ್ರಮವಿಡಲಾಗುವುದು ಎಂದು ತಿಳಿಸಿದರು.

ಶ್ರೀ ರಾಘವೇಂದ್ರ ಗರ್ತಿಕೆರೆ ಇವರು ಕಳೆದ ಬಾರಿಯ ಸಾಮಾನ್ಯ ಸಭೆಯಲ್ಲಿ ಷೇರುದಾರರ ಸಭೆ ಕಾನೂನು ಬಾಹಿರವಲ್ಲ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದು, ಆದರೆ ಷೇರುದಾರರ ಸಭೆಯನ್ನು ಈ ಬಾರಿ ಎಲ್ಲಿಯೂ ನಡೆಸಿರುವುದಿಲ್ಲ. ಇದಕ್ಕೆ ಸ್ಪಷ್ಟೀಕರಣ ನೀಡುವಂತೆ ಕೋರಿದರು.

ಷೇರುದಾರರ ಸಭೆಯ ಬಗ್ಗೆ ಉಪವಿಧಿ ತಿದ್ದುಪಡಿ ಮಾಡಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಹಕಾರ ಸಂಘಗಳ ಅಪರ ನಿಬಂಧಕರಿಗೆ ಸಲ್ಲಿಸಿದ್ದು, ಅಲ್ಲಿ ತಿರಸ್ಕೃತಗೊಂಡಿರುತ್ತದೆ ಎಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

ಶ್ರೀ ಲೋಕನಾಥ ಬಿಳಿಸಿರಿ ಇವರು ಕಳೆದ ಸಾಲಿಗಿಂತ ಈ ಬಾರಿ ಸಂಘವು ಜಾಸ್ತಿ ಲಾಭವನ್ನು ಗಳಿಸಿದೆ. ಷೇರುದಾರರ ಸಭೆಗೆ ಖರ್ಚು ಆಗುವುದರಿಂದ ಮುಂದಿನ ಸಲ ಲಾಭಾಂಶವನ್ನು ಸರಿದೂಗಿಸಲು ಈ ಬಾರಿ ಷೇರುದಾರರ ಸಭೆಯನ್ನು ಕರೆದಿರುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಮುಂದುವರೆದು, ಮಾಮ್‌ಕೋಸ್‌ನಲ್ಲಿ ಅವ್ಯವಹಾರ ನಡೆದಿದೆ ಆದ್ದರಿಂದ ಷೇರುದಾರರ ಸಭೆ ನಡೆದಿರುವುದಿಲ್ಲ ಎಂದು ಜನರು ಮಾತನಾಡುತ್ತಿದ್ದಾರೆ ಇದಕ್ಕೆ ಸ್ಪಷ್ಟೀಕರಣ ನೀಡಿ. ಕಳೆದ ಸೆಪ್ಟಂಬರ್ ನಿಂದ ಇಲ್ಲಿಯವರೆಗೆ ಅಂದರೆ ಒಂದು ವರ್ಷದಲ್ಲಿ 8 ತಿಂಗಳು ಬರದಿಂದ ಹಾಗೂ 4 ತಿಂಗಳು ಅತಿವೃಷ್ಠಿಯಿಂದ ರೈತರು ಬೆಳೆಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಷೇರುದಾರರ ಸಭೆಯನ್ನು ನಡೆಸಿ ಸದಸ್ಯರಿಗೆ ಧೈರ್ಯ ತುಂಬುವ ಕೆಲಸವನ್ನು ಮಾಡಬೇಕಿತ್ತು. ಆದರೆ ಮಾಡಲಿಲ್ಲ. 2006–07 ರಿಂದ ಷೇರುದಾರರ ಸಭೆ ನಡೆಯುತ್ತಿದೆ. ಆದರೆ ಈ ಬಾರಿ ನಡೆಸದೇ ಇರುವುದಕ್ಕೆ ಷೇರುದಾರರಿಗೆ ನೋವಾಗಿದೆ. ಷೇರುದಾರರಿಂದ ಷೇರುದಾರರಿಗಾಗಿ ಷೇರುದಾರರಿಗೋಸ್ಕರ ಇರುವ ಸಹಕಾರ ಸಂಸ್ಥೆ ಇದು. ಷೇರುದಾರರ ಪರವಾಗಿ ಸಂಸ್ಥೆ ನಿಲ್ಲಬೇಕು.

ಸರ್ಕಾರ ಆದೇಶ ಮಾಡಿದೆ ಎಂದರೆ, ಷೇರುದಾರರ ಅಭಿಪ್ರಾಯ, ಸಂಬಂಧಕ್ಕೆ ಏನು ಬೆಲೆ. ಮಹಾಸಭೆ ಇರುವುದು ಸಹಕಾರಿ ಕಾಯಿದೆಯಲ್ಲಿ. ಸರ್ಕಾರದ ಆದೇಶದ ಮೇರೆಗೆ ಷೇರುದಾರರ ಸಭೆಯನ್ನು ನಡೆಸಿಲ್ಲ ಎಂದರೆ ಏನು ಅರ್ಥ. ದಯಮಾಡಿ ಸರ್ಕಾರಕ್ಕೆ ಷೇರುದಾರರ ಪರವಾಗಿ ಖಂಡನ ನಿರ್ಣಯವನ್ನು ಮಾಡಿ ಸರ್ವಸದಸ್ಯರ ಸಭೆಯ ಒಮ್ಮತದ ಮೇರೆಗೆ ಮುಂದಿನ ದಿನಗಳಲ್ಲಿ ಷೇರುದಾರರ ಸಭೆ ಆಗಲೇಬೇಕು ಎಂದು ತಿಳಿಸಿದರು.

ಶ್ರೀ ಪ್ರಸನ್ನ ಕುಮಾರ್ ಇವರು ಬೈಲಾ ತಿದ್ದುಪಡಿ ಪ್ರಸ್ತಾವನೆ ಅನುಮೋದನೆಗೊಂಡಿಲ್ಲ ಎಂದು ತಿಳಿಸಿದ್ದೀರಾ. 2005 ರಿಂದ ಯಾವ ಪ್ರಾವದಾನದಲ್ಲಿ ಷೇರುದಾರರ ಸಭೆ ಮಾಡಿದ್ದೀರಾ ಅದೇ ಪ್ರಾವದಾನದಲ್ಲಿ ಬೈಲಾ ತಿದ್ದುಪಡಿ ಅನುಮೋದನೆಯಾಗುವವರೆಗೆ ಷೇರುದಾರರ ಸಭೆಯನ್ನು ನಡೆಸಿ. ಅಧ್ಯಕ್ಷರ ಅಧಿಕಾರದ ವ್ಯಾಪ್ತಿಯಲ್ಲಿ ಸಭೆ ನಡೆಸಲು ಉಪವಿಧಿಯಲ್ಲಿ ಅವಕಾಶವಿದೆ. ಯಾವ ಕಾನೂನು ಅಡಿಯಲ್ಲಿ ಆಡಳಿತ ಮಂಡಲಿ ಮತ್ತು ಸದಸ್ಯರು ಸೇರಿ ಸಭೆಯನ್ನು ನಡೆಸಬಾರದು ಎಂದು ತಿಳಿಸುತ್ತದೆ. ಆಡಳಿತ ಮಂಡಲಿ ಮತ್ತು ಸದಸ್ಯರ ನಡುವೆ ಸಮನ್ವಯ ಸಾಧಿಸುವಂತ ಕೆಲಸ ಆಗಬೇಕು. ಷೇರುದಾರರ ಸಭೆ, ಸಲಹಾ ಸಮಿತಿಯ ಸಭೆ, ಯಾವುದೇ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಮಾಡಲು ಕಾಯಿದೆಯಲ್ಲಿ, ನಿಯಮದಲ್ಲಿ, ಸಂವಿಧಾನದಲ್ಲಿ ಅವಕಾಶವಿದೆ. ಬೈಲಾ ತಿದ್ದುಪಡಿ ಆಗಿಲ್ಲ ಎಂದು ಸಭೆಯನ್ನು ನಡೆಸದಿರುವುದು ಸರಿಯಲ್ಲ. ಏಕೆಂದರೆ 2006ರಿಂದ 2023ರವರೆಗೆ ಸಭೆಯನ್ನು ನಡೆಸಿ ಈಗ ಸಭೆಯನ್ನು ನಡೆಸಿಲ್ಲ ಎಂದರೆ ತಪ್ಪಾಗುತ್ತದೆ. ಉಪವಿಧಿ ಅನುಮೋದನೆ ಆಗಲಿ ಅಥವಾ ಆಗದೇ ಇರಲಿ ಷೇರುದಾರರ ಸಭೆಯನ್ನು ನಡೆಸಬೇಕು. ಒಂದು ವೇಳೆ ಅನುಮೋದನೆ ಆಗಲಿಲ್ಲ ಎಂದರೆ ಗೌ.ಉಚ್ಚನ್ಯಾಯಾಲಯ, ಗೌ.ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬಹುದು. ಉಪವಿಧಿ ಅನುಮೋದನೆಗೊಳ್ಳುವವರೆಗೂ ಈ ಹಿಂದೆ ನಡೆಸಿದ ಹಾಗೆ ಷೇರುದಾರರ ಸಭೆಯನ್ನು ನಡೆಸಬೇಕು ಎಂದು ಮನವಿ ಮಾಡಿದರು.

ಷೇರುದಾರರ ಸಭೆ ನಡೆಸಬೇಕೆಂದು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರು ಅಭಿಪ್ರಾಯಪಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಮಾನ್ಯ ಉಪಾಧ್ಯಕ್ಷರು ತಿಳಿಸಿದರು.

ಶ್ರೀ ರಾಘವೇಂದ್ರ ಗರ್ತಿಕೆರೆ ಇವರು ಬೈಲಾ ತಿದ್ದುಪಡಿ ಪ್ರಸ್ತಾವನೆ ತಿರಸ್ಕೃತಗೊಂಡಿರುವುದಕ್ಕೆ ಮನವಿಯನ್ನು ಸಲ್ಲಿಸಿದ್ದೀರಾ? ಈ ವಿಷಯದ ಬಗ್ಗೆ ನಿಮ್ಮ ನಿರ್ಣಯವೇನು ಎಂದು ಪ್ರಶ್ನಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ಬಗ್ಗೆ ಮೇಲ್ಮನವಿ ಸಲ್ಲಿಸಲಾಗಿದೆ ಹಾಗೂ ಕಾನೂನಾತ್ಮಕವಾಗಿ ಇತ್ಯರ್ಥಗೊಳಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ ಎಂದು ಉತ್ತರಿಸಿದರು. ಪುನಃ ಸದರಿಯವರು ಸಹಕಾರಿ ಕಾನೂನಿನ ಯಾವ ಕಲಂ ಅಡಿಯಲ್ಲಿ ತಿರಸ್ಕೃತಗೊಳಿಸಿದ್ದಾರೆ. ತಿರಸ್ಕೃತಗೊಳಿಸುವುದಕ್ಕೆ ಕಾಯಿದೆ ಕಾನೂನು ಇರಬೇಕು. ತಿರಸ್ಕೃತಗೊಳಿಸಿರುವುದಕ್ಕೆ ಕಾರಣ ಎನು ಎಂದು ಕೇಳಿದಾಗ ವ್ಯವಸ್ಥಾಪಕ ನಿರ್ದೇಶಕರು ಮಾನ್ಯ ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಇವರು 02 ಕಾರಣದಿಂದ ಬೈಲಾ ತಿದ್ದುಪಡಿಯನ್ನು ತಿರಸ್ಕರಿಸಿದ್ದಾರೆ. 1) ಷೇರುದಾರರ ಸಭೆ ನಡೆಸುವುದರಿಂದ ಸಂಘಕ್ಕೆ ಆರ್ಥಿಕ ಹೊರೆಯಾಗುತ್ತದೆ. 2) ವರ್ಷಕ್ಕೆ ಒಮ್ಮೆ ವಾರ್ಷಿಕ ಸಾಮಾನ್ಯ ಸಭೆಯನ್ನು ಮಾಡಲು ಅವಕಾಶವಿದ್ದು, ಬೇರೆ ಸಭೆಯನ್ನು ನಡೆಸಲು ಅವಕಾಶವಿರುವುದಿಲ್ಲ ಎಂಬ ಕಾರಣವನ್ನು ನೀಡಿರುವುದಾಗಿ ತಿಳಿಸಿದರು.

ಶ್ರೀ ಪ್ರಸನ್ನ ಕುಮಾರ್ ಇವರು ಷೇರುದಾರರ ಸಭೆಯನ್ನು ನಡೆಸಲು ಸದಸ್ಯರು ನಿರ್ಣಯ ಮಾಡಿರುವುದು. ಸದಸ್ಯರ ಹಣ ಹೊರತು ಸರ್ಕಾರದ ಹಣವಲ್ಲ. ಸರ್ಕಾರ ಹಣವನ್ನು ನೀಡಿರುವುದಿಲ್ಲ. ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಆದ್ದರಿಂದ ನಾವು ಖರ್ಚು ಮಾಡುವ ಹಣದ ಬಗೆ ಸರ್ಕಾರಕ್ಕೆ ಕೇಳುವ ಹಕ್ಕು ಇರುವುದಿಲ್ಲ. ನಿಬಂಧಕರ ನ್ಯಾಯಾಲಯ ಕ್ಕೆ ಮನವಿಯನ್ನು ಸಲ್ಲಿಸಿ ಅಲ್ಲಿ ತಿರಸ್ಕೃತಗೊಂಡಲ್ಲಿ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ. ಮಹಾಸಭೆಯ ಬೆಂಬಲವಿದೆ. 1200 ಕೋಟಿ ವ್ಯವಹಾರ ನಡೆಸುವ ಸಂಸ್ಥೆಗೆ ಷೇರುದಾರರ ಸಭೆ ಅಂದಾಜು 13.0 ಲಕ್ಷ ಖರ್ಚು ಆಗಬಹುದು. ಇದು ಸದಸ್ಯರಿಗಾಗಿ ಖರ್ಚು ಮಾಡುವುದು ಆಡಳಿತ ಮಂಡಲಿಗಾಗಿ ಖರ್ಚು ಮಾಡುವುದು ಅಲ್ಲ. ಹಾಗೆಯೇ ಮುಂದಿನ ಬಾರಿಯಿಂದ ಷೇರುದಾರರ ಸಭೆಯನ್ನು ನಡೆಸಬೇಕು ಎಂದು ಆಗ್ರಹಿಸಿದರು.

ಶ್ರೀ ಮಂಜಪ್ಪ ಹೆಚ್ ಎಸ್ ಇವರು ಕಾನೂನು ತಜ್ಞರ ಜೊತೆ ಚರ್ಚೆ ಮಾಡಿದ್ದೇನೆ. ಅಪರ ನಿಬಂಧಕರ ಆದೇಶಕ್ಕೆ ನಿಬಂಧಕರ ನ್ಯಾಯಾಲಯದಲ್ಲಿ ಮನವಿಯನ್ನು ಸಲ್ಲಿಸಲಾಗಿದೆ. ಒಂದು ವಿಷಯ ನ್ಯಾಯಾಲಯದಲ್ಲಿ ಇದ್ದಾಗ ಅದರ ಬಗ್ಗೆ ಚರ್ಚೆ ನಡೆಸುವುದು subjudice ಆಗುತ್ತದೆ. ಆದ್ದರಿಂದ ಚರ್ಚೆ ಮಾಡುವುದು ಬೇಡ ಎಂದು ಅಭಿಪ್ರಾಯಪಟ್ಟರು. ಈ ಕುರಿತು ಶ್ರೀ ವೆಂಕಟಾಚಲ ಜಿ ಇವರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆಸುವುದು subjudice ಆಗುವುದಿಲ್ಲ. ತೀರ್ಮಾನಗಳನ್ನು ತೆಗೆದುಕೊಳ್ಳಲು ತೊಂದರೆಯಿಲ್ಲ. ಸಭೆ ನಡೆಸಲು ಹಣ ಖರ್ಚು ಆಗುತ್ತದೆ ಎಂದು ತಿರಸ್ಕರಿಸಿದ್ದಾರೆ. ನಮ್ಮ ಹಣವನ್ನು ನಮಗೆ ಖರ್ಚು ಮಾಡುತ್ತೀದ್ದಾರೆ ಅಷ್ಟೇ. ನಮಗೆ ಮಾಹಿತಿಗಳು ಬೇಕು. ಷೇರುದಾರರ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ನಮ್ಮ ಸಮಸ್ಯೆ/ತೊಂದರೆಗಳಿಗೆ ಪರಿಹಾರ ಸಿಗುತ್ತದೆ. ವಾರ್ಷಿಕ ಮಹಾಸಭೆಯಲ್ಲಿ ಎಲ್ಲವನ್ನು ಚರ್ಚೆಮಾಡಲು ಆಗುವುದಿಲ್ಲ. ಆದ್ದರಿಂದ ಷೇರುದಾರರ ಸಭೆ ಅವಶ್ಯಕ ಎಂದು ಅಭಿಪ್ರಾಯಪಟ್ಟರು.

ಶ್ರೀ ಜಿ ಎಸ್ ನಾರಾಯಣರಾವ್ ಇವರು ಯಾವುದೇ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಮಹಾಸಭೆಯ ಅಭಿಪ್ರಾಯ ಎಂದು ತಿಳಿಸಬಾರದು. ವೈಯಕ್ತಿಕ ಅಭಿಪ್ರಾಯಗಳನ್ನು ಮಹಾಸಭೆಯ ಅಭಿಪ್ರಾಯ ಎನ್ನುವುದು ತಪ್ಪಾಗುತ್ತದೆ. ಏಕೆಂದರೆ ಸದಸ್ಯರ ಅಭಿಪ್ರಾಯಗಳು ಬೇರೆ ಬೇರೆ ಇರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಮಿತ್ರ ಇವರು ಸದಸ್ಯರು ಬೇಸಿಗೆ ಕಾಲದಲ್ಲಿ ಸಂಘಕ್ಕೆ ಅಡಿಕೆಯನ್ನು ಹಾಕಿ, ನಂತರ ಮಳೆಗಾಲದ ಸಮಯದಲ್ಲಿ ಅಡಿಕೆಯನ್ನು ವ್ಯಾಪಾರ ಮಾಡಿದ ಸಂದರ್ಭದಲ್ಲಿ ತೇವಾಂಶದಿಂದ (ಮಾಯಿಶ್ಚರ್) ತೂಕ ಹೆಚ್ಚಿಗೆ ಬರುತ್ತದೆ. ಹೀಗೆ ತೂಕ ಹೆಚ್ಚಿಗೆ ಬಂದ ಅಡಿಕೆ ಏನಾಗುತ್ತದೆ ಎಂದು ಪ್ರಶ್ನಿಸಿದರು.

ಈ ಕುರಿತು ಉತ್ತರಿಸಿದ ವ್ಯವಸ್ಥಾಪಕ ನಿರ್ದೇಶಕರು ತೇವಾಂಶದಿಂದ ಹೆಚ್ಚಿಗೆ ಬಂದಿರುವ ತೂಕದ ಮೊತ್ತವನ್ನು ಮಾಮ್‌ಕೋಸ್ ಖಾತೆಗೆ ಹಾಕಿ, ಟ್ರೇಡ್ ರೀಸಿಟ್ ಖಾತೆಯಲ್ಲಿ ರೂ.1,10,04,192.36ಗಳನ್ನು ತೋರಿಸಲಾಗಿದೆ ಹಾಗೂ ತೀರ್ಥಹಳ್ಳಿ ಶಾಖೆಯಲ್ಲಿ 55.17 ಕ್ವಿಂಟಾಲ್ ರೂ.25,39,367/–ಗಳನ್ನು ಹೆಚ್ಚಿಗೆ ಬಂದಿದ್ದು, ಮಾಮ್‌ಕೋಸ್ ಖಾತೆಯಲ್ಲಿ ಜಮಾ ಆಗಿದೆ ಎಂದು ಉತ್ತರಿಸಿದರು. ಇದಕ್ಕೆ ಶ್ರೀ ಪದ್ಮನಾಭ ಹಾರೋಗೊಳಿಗೆ ಇವರು ಸಂಬಂಧಿಸಿದ ರೈತರಿಗೆ ವಾಪಾಸು ನೀಡಿ ಎಂದು ಹೇಳಿದಾಗ ಶ್ರೀ ರಾಘವೇಂದ್ರ ಗರ್ತಿಕೆರೆ ಇವರು ರೈತರಿಗೆ ವಾಪಾಸು ನೀಡಲು ಆಗುವುದಿಲ್ಲ. ಬೇಸಿಗೆಯಲ್ಲಿ ತೂಕ ಕಡಿಮೆ ಬಂದಾಗ ಯಾರು ಕೊಡುತ್ತಾರೆ. ಆದ್ದರಿಂದ ಸಂಘದಲ್ಲಿಯೇ ಇರಬೇಕು ಎಂದು ಅಭಿಪ್ರಾಯಪಟ್ಟರು.

ಮಾನ್ಯ ಉಪಾಧ್ಯಕ್ಷರು ಈ ಕುರಿತು ಮಾತನಾಡಿ 'ಎ' ಬಿಲ್ ತೂಕವನ್ನೇ 'ಬಿ' ಬಿಲ್ ತೂಕವೆಂದು ನೀಡಬೇಕೆಂದು ಹಿಂದೆ ಮಹಾಸಭೆಯಲ್ಲಿಯೇ ನಿರ್ಣಯವಾಗಿದೆ. ಅದೇ ರೀತಿ ಬೇಸಿಗೆಯಲ್ಲಿ ಕಡಿಮೆ ಬಂದಾಗ ಕಡಿಮೆ ತೂಕವನ್ನು ನೀಡಲಾಗುತ್ತಿಲ್ಲ. ಹೆಚ್ಚುವರಿ ತೂಕದ ಲೆಕ್ಕವನ್ನು ವ್ಯವಸ್ಥಾಪಕ ನಿರ್ದೇಶಕರು ನೀಡಿದ್ದಾರೆ. ಅದನ್ನೇ ಮುಂದುವರೆಸಲಾಗುವುದು ಎಂದು ತಿಳಿಸಿದರು. ಹಾಗೆಯೇ, ಸಂಸ್ಥೆ ರೈತರಿಗೆ ನಿಖರವಾದ ತೂಕವನ್ನೆ ನೀಡುತ್ತಿದೆ ಎಂದು ತಿಳಿಸಿದರು.

ಶ್ರೀ ಪ್ರಸನ್ನಕುಮಾರ್ ಮತ್ತು ಶ್ರೀ ರಾಘವೇಂದ್ರ ಗರ್ತಿಕೆರೆ ಇವರು ಎ.ಪಿ.ಎಂ.ಸಿ ಕಾಯಿದೆಯನ್ವಯ ಮಾಡಿ ಎಂದು ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು ದಿನಾಂಕ 20 ಸೆಪ್ಟಂಬರ್ 2023ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯ ನಡವಳಿ ಮತ್ತು ಅದರ ಮೇಲೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 03 : ಅಧ್ಯಕ್ಷರಿಂದ ಸಂಘದ ಮುಂದಿನ ವರ್ಷದ ಧ್ಯೇಯ ಧೋರಣೆಗಳ ಬಗೆಗೆ ವಿವರಣಾತ್ಮಕ ನುಡಿ.**

ಸಂಘದ ಮಾನ್ಯ ಅಧ್ಯಕ್ಷರು ಈ ದಿನದ ವಾರ್ಷಿಕ ಮಹಾಸಭೆಗೆ ಆಗಮಿಸಿದ ಎಲ್ಲರಿಗೂ ಮತ್ತೊಮ್ಮೆ ಹೃತ್ಪೂರ್ವಕ ಸ್ವಾಗತಿಸುತ್ತಾ, ಅಂದಿನ ಶಿವಮೊಗ್ಗ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಶ್ರೀ ಎಂ.ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಹಿತವನ್ನು ಕಾಯುವ ಉದ್ದೇಶದಿಂದ 1939ರ ನವೆಂಬರ್ 8ನೇ ತಾರೀಖಿನಂದು ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪನೆಗೊಂಡ **'ಮಾಮ್‌ಕೋಸ್'** ಸಂಸ್ಥೆಯು ಇದೀಗ 84 ವರ್ಷಗಳನ್ನು ಪೂರೈಸಿ ಯಶಸ್ವಿಯಾಗಿ ಮುನ್ನಡೆಯುತ್ತಿರುವುದಕ್ಕೆ ತಾವೆಲ್ಲರೂ ನೀಡಿರುವ ಸಹಕಾರ ಮತ್ತು ಬೆಂಬಲವೇ ಕಾರಣವಾಗಿದ್ದು, ಇದಕ್ಕಾಗಿ ವೈಯಕ್ತಿಕವಾಗಿ ಮತ್ತು ಆಡಳಿತ ಮಂಡಳಿ ಪರವಾಗಿ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಈಗಾಗಲೇ ಸದಸ್ಯರಿಗೆ ಕಳುಹಿಸಿರುವ ಸಂಘದ 2023–24ನೇ ಸಾಲಿನ ಆರ್ಥಿಕ ತಃಖ್ತೆಗಳು ಮತ್ತು ವಾರ್ಷಿಕ ವರದಿಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಪೂರ್ಣ ವಿವರಗಳನ್ನು ನೀಡಿದ್ದು, ಸಂಸ್ಥೆಯು 2023–24ರ ಆರ್ಥಿಕ ಸಾಲಿನಲ್ಲಿ **ರೂ. 5.25 ಕೋಟಿ** ಲಾಭವನ್ನು ಗಳಿಸಿ ಆಡಿಟ್ ವರ್ಗೀಕರಣದಲ್ಲಿ **'ಎ'** ಶ್ರೇಣಿಯಲ್ಲಿಯೇ ಮುಂದುವರೆದಿರುವುದಕ್ಕೆ ಹಾಗೂ ಕಳೆದ ಬಾರಿಗಿಂತ **ರೂ.83.78 ಲಕ್ಷ** ಅಧಿಕ ಲಾಭ ಗಳಿಸಿರುವುದಕ್ಕೆ ಸದಸ್ಯರೆಲ್ಲರೂ ನೀಡಿರುವ ಬೆಂಬಲ ಹಾಗೂ ಅವರ ಸಹಕಾರವೇ ಕಾರಣವಾಗಿದ್ದು, ಇದಕ್ಕಾಗಿ ಅವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸಿದರು.

**ಕಳೆದ ವಾರ್ಷಿಕ ಮಹಾಸಭೆಯಲ್ಲಿ ಚರ್ಚೆಯಾದಂತೆ ಕೈಗೊಂಡ ಕ್ರಮದ ವಿವರಗಳನ್ನು ಕೆಳಕಂಡಂತೆ ಸಭೆಯ ಗಮನಕ್ಕೆ ತಂದರು.**

1. ಸಂಘದ ಸದಸ್ಯರು ಮತ್ತು ಅವರ ಕುಟುಂಬ ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ **'ಗುಂಪು ವಿಮೆ'** ಯೋಜನೆಯಡಿಯಲ್ಲಿ 2023–24ನೇ ಸಾಲಿನಲ್ಲಿ 27,348 ನೋಂದಣಿಯಾಗಿರುತ್ತದೆ. ಅಲ್ಲದೆ, ಈ ಬಾರಿ ಸದಸ್ಯರು ಅನಿಯಮಿತ ಸಂಖ್ಯೆಯಲ್ಲಿ ಅಂದರೆ, ಒಂದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿಯೂ ಸಹ ತಮ್ಮ ಹೆಸರಿಸದ ಕೂಲಿ ಕಾರ್ಮಿಕರನ್ನು ಈ **'ಗುಂಪು ವಿಮಾ'** ಯೋಜನೆ ಅಡಿಯಲ್ಲಿ ನೋಂದಾಯಿಸಲು ಅವಕಾಶ ಇರುವ ಕುರಿತು.

2. ರೈತರ ಎಲ್ಲಾ ಬೆಳೆಗಳಿಗೆ ಶಕ್ತಿ ಮತ್ತು ಚೈತನ್ಯವನ್ನು ನೀಡುವ **'ಮಾಮ್‌ಕೋಸ್ ಸಸ್ಯ ಚೈತನ್ಯ'** ಮತ್ತು **'ವಸುಧಾ ಸಿರಿ'** ಸಾವಯವ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆ ಇದ್ದು, ಗರಿಷ್ಠ ಪ್ರಮಾಣದಲ್ಲಿ ಇದನ್ನು ಮಾರಾಟ ಮಾಡಲಾಗುತ್ತಿದೆ. ಸಂಘದಿಂದ ಅಗ್ರಿ ಲೈಮ್ ಮತ್ತು ಡೋಲೋಮೈಟ್ ಸುಣ್ಣವನ್ನು ಮಾರಾಟ ಮಾಡಲಾಗುತ್ತಿದೆ. ಸದಸ್ಯರಿಗೆ ಮಾರಾಟ ಮಾಡಲಾಗುವ ಮೈಲುತುತ್ತವನ್ನು **'ಮಾಮ್‌ಕೋಸ್ ಬ್ರ್ಯಾಂಡ್'**ನಲ್ಲಿ ನ್ಯಾಯ ಸಮ್ಮತ ದರದಲ್ಲಿ ಮಾರಾಟ ಮಾಡುತ್ತಿರುವ ಕುರಿತು.

3. ಸಂಘದ ಸದಸ್ಯರ ಬಹುದಿನಗಳ ಬೇಡಿಕೆ ಮೇರೆಗೆ ಸದಸ್ಯರಿಗೆ ರೂ.10.00 ಲಕ್ಷವರೆಗೆ ಕೃಷಿ ಬಳಕೆ ಸಾಲವನ್ನು ನೀಡಲು ಕ್ರಮ ಕೈಗೊಂಡಿದೆ.

4. ಇತ್ತೀಚೆಗೆ ಮಾಮ್‌ಕೋಸ್ ಸಂಸ್ಥೆಯಿಂದ **ಕಾಳುಮೆಣಸು** ಖರೀದಿಯನ್ನು ಪ್ರಾರಂಭಿಸಿದ್ದು, 2024–25ನೇ ಸಾಲಿನಲ್ಲಿ ಆಗಸ್ಟ್ ಅಂತ್ಯದವರೆಗೆ ಅಂದಾಜು **36 ಕ್ವಿಂಟಾಲ್** ಕಾಳುಮೆಣಸನ್ನು ಖರೀದಿಸಲಾಗಿದೆ. ಪ್ರಸ್ತುತ ಎಲ್ಲಾ ಶಾಖೆಗಳಲ್ಲಿಯೂ ಕಾಳುಮೆಣಸು ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

5. ಇ–ಟೆಂಡರ್ ಮೂಲಕ ದಿನಾಂಕ 31ರ ಮಾರ್ಚ್ 2024ರ ವರೆಗೆ ಸಂಘದಿಂದ **42,764** ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರ ಖರೀದಿ ಮೂಲಕ 21,036 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಲಾಗಿದೆ.

6. ಬೇರೆ ಸಹಕಾರ ಸಂಘಗಳಲ್ಲಿಯೂ ಸಹ **22,265** ಕ್ವಿಂಟಾಲ್ ಅಡಿಕೆಯನ್ನು ಖರೀದಿಸಲಾಗಿದೆ.

7. ದಿನಾಂಕ 31ರ ಮಾರ್ಚ್ 2024ರ ವರೆಗೆ 82,007 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡಲಾಗಿದೆ.

8. 2023–24ನೇ ಸಾಲಿನಲ್ಲಿ ಸುಮಾರು **ರೂ.400 ಕೋಟಿ** ಮೌಲ್ಯದಷ್ಟು ಅಡಿಕೆ ಖರೀದಿ ಮಾಡಿದ್ದು, ಇದರಿಂದ ಮಾರುಕಟ್ಟೆಯಲ್ಲಿ ಅಡಿಕೆ ಧಾರಣೆಯ ಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಮಾಮ್‌ಕೋಸ್ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿರುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

9. ಸದಸ್ಯರ ಬಹುದಿನದ ಅಪೇಕ್ಷೆಯಂತೆ ಸಂಘದಿಂದ ಇಂದೀಕೃತಗೊಂಡ ಅಭಿವೃದ್ಧಿ ಪಡಿಸಿದ **"ಮಾಮ್‌ಕೋಸ್ ಆ್ಯಪ್"** ಚಾಲ್ತಿಯಲ್ಲಿದ್ದು, ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಲಾಗುತ್ತಿದೆ. ಸದಸ್ಯರು ಈ ಆ್ಯಪ್ ಅನ್ನು ತಮ್ಮ ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಸದುಪಯೋಗ ಪಡಿಸಿಕೊಳ್ಳಲು ವಿನಂತಿಸಿದೆ.
**ಮುಂದುವರೆದು,**

❖ ಸಂಘದ ಸ್ವಂತ ಬಂಡವಾಳವನ್ನು ಹೆಚ್ಚಿಸಿ, ತನ್ಮೂಲಕ ಬ್ಯಾಂಕುಗಳಿಂದ ಪಡೆಯುವ ನಗದು ಸಾಲದ ಮಿತಿಯನ್ನು ಕಡಿಮೆಗೊಳಿಸಿ ಸದಸ್ಯರಿಗೆ ಮತ್ತಷ್ಟು ಆರ್ಥಿಕ ಭದ್ರತೆಯನ್ನು ಒದಗಿಸಲು ತೀರ್ಮಾನಿಸಿ ಸದಸ್ಯರ ಠೇವಣಿಯ ಮೇಲಿನ ಬಡ್ಡಿ ದರವನ್ನು ಹೆಚ್ಚಳ ಮಾಡಲಾಗಿದೆ. ಸಂಘದ ಸದಸ್ಯರು ಹೆಚ್ಚಿನ ಪ್ರಮಾಣದಲ್ಲಿ ಠೇವಣಿಯನ್ನು ತೊಡಗಿಸಲು ಹಾಗೂ ತಮ್ಮ ಕುಟುಂಬದ ಸದಸ್ಯರನ್ನೂ ಸಂಘದ ಸಹ ಸದಸ್ಯರನ್ನಾಗಿ ನೋಂದಣಿ ಮಾಡಿ ಠೇವಣಿಯನ್ನು ಇರಿಸಿ, ಸೌಲಭ್ಯವನ್ನು ಪಡೆಯುವಂತೆ ತಿಳಿಸಿದರು.

| ನಿಗದಿತ ಠೇವಣಿ | ಸಾಮಾನ್ಯ ಸದಸ್ಯರಿಗೆ (ಶೇಕಡಾ) | ಹಿರಿಯ ನಾಗರಿಕ ಸದಸ್ಯರಿಗೆ (ಶೇಕಡಾ) |
|---|---|---|
| ಒಂದು ವರ್ಷ | 7.00 | 7.25 |
| ಎರಡು ವರ್ಷ | 7.25 | 7.50 |
| ಮೂರು ವರ್ಷ | 7.50 | 8.00 |

❖ ಸದಸ್ಯರು ಮತ್ತು ಅವರ ಕುಟುಂಬದವರಿಗೆ 2021–22ನೇ ಸಾಲಿನಿಂದ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, 2021–22 ಮತ್ತು 2022–23ನೇ ಸಾಲುಗಳಲ್ಲಿ 8490 ಜನರಿಂದ ರೂ.3,72,98,136.00 ವಿಮಾ ಕಂತು ಸಂಗ್ರಹಣೆಯಾಗಿ ರೂ.10,13,84,524.00 ಕ್ಲೈಮ್ ಪಾವತಿಯಾಗಿದ್ದು, ಇದರಿಂದ ಶೇ.272 ರಷ್ಟು ಪ್ರಮಾಣದಲ್ಲಿ ಕ್ಲೈಮ್ ಪಾವತಿಯಾದಂತಾಗಿರುತ್ತದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ **ICICI Lomborda** ಇವರ ಸಹಯೋಗದೊಂದಿಗೆ **'ಆರೋಗ್ಯ ವಿಮಾ ಯೋಜನೆ'**ಯನ್ನು ಮರುಜಾರಿಗೊಳಿಸಿದ್ದು, ಸದಸ್ಯರು ಇದನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು.

❖ ಈ ಹಿಂದೆ ಜಾರಿಗೊಳಿಸಿದ್ದ **'ಆರೋಗ್ಯ ವಿಮಾ ಯೋಜನೆ'** ಅಡಿ ಸದಸ್ಯರು ಮತ್ತು ಅವರ ಕುಟುಂಬದವರು ಸೇರಿ ಒಟ್ಟು 14 ಪ್ರಕರಣಗಳಲ್ಲಿ ಕ್ಲೈಮ್ ಬಾರದಿರುವುದರಿಂದ ಈ ಬಗ್ಗೆ ನಮ್ಮ ಸಂಘದಿಂದಲೇ **'ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ'ದಲ್ಲಿ ರೂ.12.07 ಲಕ್ಷ** ಮೊತ್ತಕ್ಕೆ ದಾವೆಯನ್ನು ದಾಖಲಿಸಿದ್ದು, ಪ್ರಕರಣವು ತೀರ್ಪು ಹಂತದಲ್ಲಿರುತ್ತದೆ.

❖ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ದಿನಾಂಕ 27 ಜೂನ್ 2024ರ ಆದೇಶದ ಮೇರೆಗೆ ಸಂಘದಲ್ಲಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿದ್ದು, ಅದರ ಅನ್ವಯ ದಿನಾಂಕ 31 ಮಾರ್ಚ್ 2020 ಅಥವಾ ಅದಕ್ಕಿಂತ ಹಿಂದೆ ಸಾಲ ಪಡೆದು ಸುಸ್ತಿಯಾದ **359 ಸದಸ್ಯರಿಗೆ ಶೇ.7ರ ಬಡ್ಡಿ** ದರದಲ್ಲಿ ಅಸಲು ಸಹಿತ ಪೂರ್ಣ ಸಾಲವನ್ನು ನಿಗದಿತ ಅವಧಿಯಲ್ಲಿ ಜಮಾ ಮಾಡಿ ಸಾಲ ತೀರುವಳಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದರ ಅವಧಿಯು **ದಿನಾಂಕ 26 ಡಿಸೆಂಬರ್ 2024**ರವರೆಗೆ ಚಾಲ್ತಿಯಲ್ಲಿರುವುದರಿಂದ ಸಂಘದ ಸುಸ್ತಿದಾರ ಸದಸ್ಯರು ಇದನ್ನು ಸದುಪಯೋಗಪಡಿಸಿಕೊಳ್ಳಲು ಕೋರಿದರು.

❖ ಸಂಘದ ಅಡಿಕೆ ಬೆಳೆಗಾರ ಸದಸ್ಯರ ಉತ್ತಮ ಗುಣಮಟ್ಟದ ಅಡಿಕೆಗೆ ಉತ್ತಮ ಧಾರಣೆ ದೊರಕಬೇಕೆಂಬ ಉದ್ದೇಶದಿಂದ ಸಂಘದ ಶಿವಮೊಗ್ಗ, ಕೊಪ್ಪ, ತರಿಕೆರೆ, ಚನ್ನಗಿರಿ, ಭದ್ರಾವತಿ ಶಾಖೆಗಳಲ್ಲಿ ಅಡಿಕೆ ಸ್ವಚ್ಛಗೊಳಿಸುವ ಯಂತ್ರವನ್ನು

ಅಳವಡಿಸಿದ್ದು, ಸಾಗರ, ತೀರ್ಥಹಳ್ಳಿ ಮತ್ತು ಹೊಸನಗರ ಶಾಖೆಗಳಲ್ಲಿ ಈ ಯಂತ್ರದ ಅಳವಡಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಂಘದ ಇನ್ನುಳಿದ ಶಾಖೆಗಳಲ್ಲಿಯೂ ಅಡಿಕೆ ಸ್ವಚ್ಛಗೊಳಿಸುವ ಯಂತ್ರವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

❖ ಅಡಿಕೆ ಬೆಳೆಗಾರ ಸದಸ್ಯರಿಗೆ ಉತ್ತಮ ಧಾರಣೆಯನ್ನು ನೀಡುವ ಉದ್ದೇಶದಿಂದ ಅಡಿಕೆಯ ಅಮದು ದರ ಹೆಚ್ಚಳ ಮಾಡುವ ಕುರಿತು ಹಾಗೂ ಅಡಿಕೆ ಕೈ ವ್ಯಾಪಾರವನ್ನು ತಡೆಗಟ್ಟಿ ತೆರಿಗೆ ವಂಚನೆಯನ್ನು ನಿಲ್ಲಿಸುವ ಕುರಿತು ಮಾಮ್‌ಕೋಸ್ ಮತ್ತು ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾಮಂಡಳ ಹಾಗೂ ಇನ್ನಿತರ ಅಡಿಕೆ ಮಾರಾಟ ಸಹಕಾರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿಯನ್ನು ಸಲಿಸಿದ್ದು, ಸಕಾರಾತ್ಮಕ ಪ್ರತಿಕ್ರಿಯೆ ಬಂದಿರುವುದನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಂದರು.

❖ ಮಾಮ್‌ಕೋಸ್ ಸಂಸ್ಥೆಯು 85ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಸಂಸ್ಥೆಯ ಐತಿಹ್ಯವನ್ನು ಮತ್ತು ಯಶೋಗಾಥೆಯನ್ನು ದಾಖಲಿಸುವ ಉದ್ದೇಶದಿಂದ **'ಸಾಕ್ಷ್ಯಚಿತ್ರ'**ವನ್ನು ನಿರ್ಮಿಸಿದ್ದು, ಈ ದಿನ ಪ್ರಾಯೋಗಿಕವಾಗಿ ಇದನ್ನು ತೋರಿಸಲಾಗಿದೆ.

❖ ಸಂಸ್ಥೆಯ ವ್ಯವಹಾರವನ್ನು ಇನ್ನಷ್ಟು ಪಾರದರ್ಶಕಗೊಳಿಸುವ ದೃಷ್ಟಿಯಿಂದ ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಸಾಫ್ಟ್‌ವೇರ್ ಆಡಿಟ್ **(Information System Audit)** ಮಾಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

❖ ಸಾಫ್ಟ್‌ವೇರ್ ಅನ್ನು ಇನ್ನಷ್ಟು ಅಪ್‌ಗ್ರೇಡ್ ಮಾಡಿಸಲಾಗಿದ್ದು, ಷೇರು ಅರ್ಜಿಯಿಂದ ಹಿಡಿದು ಪ್ರತಿಯೊಂದು ಅರ್ಜಿ ಫಾರಂಗಳು, ಬಿಲ್‌ಗಳು ಸೇರಿದಂತೆ ಎಲ್ಲಾ ವ್ಯವಹಾರವೂ ಪೂರ್ಣವಾಗಿ ಸಾಫ್ಟ್‌ವೇರ್‌ನಲ್ಲಿಯೇ ಬರುವಂತೆ ಮಾಡಿರುವುದನ್ನು ಸಭೆಗೆ ತಿಳಿಸಿದರು.

❖ **ಮಾಮ್‌ಕೋಸ್ ಆ್ಯಪ್**ನ್ನು ಇನ್ನಷ್ಟು ಅಭಿವೃದ್ಧಿಪಡಿಸಿದ್ದು, ಇದೀಗ ಸದಸ್ಯರು ತಮ್ಮ ಅಡಿಕೆಯನ್ನು ಈ ಆ್ಯಪ್ ಮೂಲಕವೇ ಮಾರಾಟಕ್ಕೆ ಬಿಡಬಹುದಾಗಿದೆ ಮತ್ತು ಮಾರಾಟದ ಹಣವನ್ನು ತಮ್ಮ ಬ್ಯಾಂಕ್ ಅಕೌಂಟ್‌ಗೆ ಹಾಕಿಸಲು ಇದರ ಮೂಲಕವೇ ಬೇಡಿಕೆಯನ್ನು ಕಳಿಸಬಹುದಾಗಿದೆ. ಸಂಘದ **'ವೆಬ್‌ಸೈಟ್'** ಮತ್ತು **'ಮೊಬೈಲ್ ಆ್ಯಪ್'**ನ್ನು ಮತ್ತಷ್ಟು ಸದಸ್ಯ ಸ್ನೇಹಿಯಾಗಿಸಲು ಅಗತ್ಯ ಕ್ರಮಕೈಗೊಳ್ಳಲು ಯೋಜಿಸಲಾಗಿದೆ ಎಂದು ತಿಳಿಸಿದರು.

❖ 2023–24 ನೇ ಸಾಲಿನಲ್ಲಿ ಭಾರತ ಸರ್ಕಾರದ ಹಣಕಾಸು ಸಚಿವಾಲಯದ The Central Board of Indirect Taxes and customs ನಿಂದ **Prompt Filing of Returns & Payment of Goods & Service Tax** ಪ್ರಶಸ್ತಿ ದೊರೆತಿರುವುದನ್ನು ಸಭೆಗೆ ತಿಳಿಸಿದರು.

**ಸಂಘವು ಕೆಳಕಂಡ ಉದ್ದೇಶಗಳನ್ನು ಹೊಂದಿರುವುದನ್ನು ಈ ಸಂದರ್ಭದಲ್ಲಿ ಸಭೆಗೆ ಮಂಡಿಸಿದರು.**

1. ಸಂಘದ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರು ಹಾಗೂ ಅವರ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಕೃಷಿ ಕೂಲಿ ಕಾರ್ಮಿಕರಿಗೆ ಪ್ರಸ್ತುತ ಜಾರಿಯಲ್ಲಿರುವ **'ಗುಂಪು ವಿಮೆ'** ಯೋಜನೆಗೆ ಇನ್ನೂ ಹೆಚ್ಚಿನ ಸದಸ್ಯರನ್ನು ತರಲು ಉದ್ದೇಶಿಸಿದೆ.

2. ಸಂಘದ ಸದಸ್ಯರಿಗೆ ಸ್ಪರ್ಧಾತ್ಮಕ ದರದಲ್ಲಿ **'ಮಾಮ್‌ಕೋಸ್ ಸಸ್ಯ ಚೈತನ್ಯ'** ಮತ್ತು **'ಮಾಮ್‌ಕೋಸ್ ವಸುಧಾ ಸಿರಿ'** ಸಾವಯವ ಗೊಬ್ಬರ ಹಾಗೂ ಅಗ್ರಿ ಲೈಮ್ ಮತ್ತು ಡೋಲೊಮೈಟ್ ಸುಣ್ಣವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ.

3. ಸದಸ್ಯರಿಗೆ ಅನುಕೂಲವಾಗುವಂತೆ ಇಫ್ಕೋ ಕಂಪನಿಯ ಡೀಲರ್‌ಶಿಪ್ ಪಡೆದು ಕರಗುವ ರಸಗೊಬ್ಬರವನ್ನು ಹಾಗೂ ಕೃಷಿಗೆ ಅವಶ್ಯವಿರುವ ಇನ್ನಿತರ ಉತ್ಪನ್ನಗಳನ್ನು ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ. ಹಾಗೆಯೇ, ಇನ್ನಿತರ ಕಂಪನಿಗಳ ಸಾವಯವ ಗೊಬ್ಬರವನ್ನೂ ಸಹ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಮಾರಾಟ ಮಾಡಲು ಉದ್ದೇಶಿಸಿದೆ.

4. ಸಂಘದಿಂದ ಉತ್ತಮ ಗುಣಮಟ್ಟದ ಬೇವಿನ ಹಿಂಡಿಯನ್ನು, ವ್ಯವಸಾಯೋಪಕರಣಗಳನ್ನು ಮತ್ತು ಫೈಬರ್ ದೋಟಿ ಇತ್ಯಾದಿಗಳನ್ನು ಸದಸ್ಯರಿಗೆ ಅನುಕೂಲವಾಗುವಂತೆ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ.

5. ಸದಸ್ಯ ಬೆಳೆಗಾರರ ಅಡಿಕೆ ದಾಸ್ತಾನಿನ ಸೌಲಭ್ಯಕ್ಕಾಗಿ ಅಗತ್ಯವಾದ ಗೋದಾಮು ನಿರ್ಮಿಸಲು ಶಿವಮೊಗ್ಗ ಮತ್ತು ತೀರ್ಥಹಳ್ಳಿಯಲ್ಲಿ ಖಾಸಗಿ ನಿವೇಶನವನ್ನು ಸಂಘದಿಂದ ಖರೀದಿಸಲು ಉದ್ದೇಶಿಸಲಾಗಿದೆ.

6. ಈ ಸಾಲಿನಲ್ಲಿ ಇ–ಟೆಂಡರ್ ಮೂಲಕ 66,000 ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರ ಖರೀದಿ ಮೂಲಕ 24,000 ಕ್ವಿಂಟಾಲ್ ಅಡಿಕೆಯನ್ನು ಖರೀದಿಸುವ ಮತ್ತು ತಿಂಗಳಿಗೆ ಸರಾಸರಿ 8,000 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡುವ ಗುರಿಯನ್ನು ಹೊಂದಿದೆ. ಹಾಗೆಯೇ, ಸಂಘದಿಂದ ವಾರ್ಷಿಕವಾಗಿ 500 ಕ್ವಿಂಟಾಲ್ ಕಾಳುಮೆಣಸನ್ನು ಖರೀದಿಸುವ ಗುರಿಯನ್ನು ಹೊಂದಲಾಗಿದೆ.

7. ಸಂಘದ ದೈನಂದಿನ ವ್ಯವಹಾರವನ್ನು ಸುಗಮವಾಗಿ ಮತ್ತು ಕ್ರಮಬದ್ಧವಾಗಿ ನಡೆಸುವ ಉದ್ದೇಶದಿಂದ ಹಾಗೂ ಸಂಘದಲ್ಲಿ ನಿರ್ಮಿಸುವ ಕಟ್ಟಡ ಕಾಮಗಾರಿಗಳು, ದುರಸ್ತಿ ಇತ್ಯಾದಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಕಾಲಕಾಲಕ್ಕೆ ತಜ್ಞರ ಸಲಹೆಯನ್ನು ಪಡೆಯುವ ಸಲುವಾಗಿ ನಾಲ್ವರು ಸಿವಿಲ್ ಇಂಜಿನಿಯರ್ ಹಾಗೂ 12 ಶಾಖೆಗಳ ವ್ಯಾಪ್ತಿಯಲ್ಲಿ 14 ಕಾನೂನು ಸಲಹೆಗಾರರ ಎಂಪ್ಯಾನಲ್ ಅನ್ನು ರಚಿಸಲಾಗಿದೆ.

8. ಸಂಘದಲ್ಲಿ ಖಾಲಿ ಇರುವ ವಿವಿಧ ದರ್ಜೆಯ ಒಟ್ಟು 21 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ.

9. ಆನವಟ್ಟಿಯಲ್ಲಿ ಈಗಿರುವ ಅಡಿಕೆ ನೇರ ಖರೀದಿ ಕೇಂದ್ರದ ಬದಲು ಶಾಖೆಯನ್ನು ಮತ್ತು ಜಯಪುರದಲ್ಲಿ ಈಗಿರುವ ಅಡಿಕೆ ಸಂಗ್ರಹಣಾ ಏಜೆನ್ಸಿಯ ಬದಲು ಶಾಖೆ ಅಥವಾ ಅಡಿಕೆ ನೇರ ಖರೀದಿ ಕೇಂದ್ರವನ್ನು ತೆರೆಯಲು ಉದ್ದೇಶಿಸಲಾಗಿದೆ.

10. ವರ್ಷದಿಂದ ವರ್ಷಕ್ಕೆ ಸಂಘದ ವ್ಯವಹಾರವು ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಸಂಘದ ಆಂತರಿಕ ವ್ಯವಸ್ಥೆಯಲ್ಲಿ ಇನ್ನಷ್ಟು ಸುಧಾರಣೆ ತರುವ ಉದ್ದೇಶದಿಂದ ಸಂಘಕ್ಕೆ ISO Certificate ಪಡೆಯಲು ಉದ್ದೇಶಿಸಲಾಗಿದೆ.

ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳು ಕಾಲಕಾಲಕ್ಕೆ ತಿದ್ದುಪಡಿ ಆಗುತ್ತಿದ್ದು, ಮಾನ್ಯ ಸದಸ್ಯರು ಕಾಯಿದೆ ಮತ್ತು ಸಂಘದ ಉಪವಿಧಿ ಅನ್ವಯ ಸಂಘದಲ್ಲಿ ವ್ಯವಹರಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಲು ವಿನಂತಿಸಿದರು.

ಈ ಸಂದರ್ಭದಲ್ಲಿ ಸಂಘದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ರೀತಿಯಿಂದಲೂ ಸಹಕರಿಸುತ್ತಿರುವ ಸಂಘದ ಆಡಳಿತ ಮಂಡಳಿಯ ಉಪಾಧ್ಯಕ್ಷರಿಗೆ, ನಿರ್ದೇಶಕರುಗಳಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಸಂಘದ ಅಭಿವೃದ್ಧಿಗಾಗಿ ಸಲಹೆ, ಸಹಕಾರಗಳನ್ನು ನೀಡುತ್ತಿರುವ ಸಮಸ್ತರಿಗೂ ವಂದನೆಗಳನ್ನು ಸಲ್ಲಿಸುತ್ತಾ, ಬಹುಮುಖ್ಯವಾಗಿ ಸಂಘಕ್ಕೆ ಅಡಿಕೆ ಕಳುಹಿಸಿ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುವ ಮೂಲಕ ಸಂಘದ ಬೆನ್ನೆಲುಬಾಗಿರುವ ಸದಸ್ಯರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತಾ, ಸದಸ್ಯರೆಲ್ಲರೂ ಇದೇ ಅಭಿಮಾನದಿಂದ ಸಂಘದಲ್ಲಿ ವ್ಯವಹರಿಸಿ ಸಂಘವನ್ನು ಬೆಂಬಲಿಸಬೇಕೆಂದು ವಿನಂತಿಸಿದರು.

ಶ್ರೀ ದಿನೇಶ ಕೆ ಸಿ ಇವರು ಅಧ್ಯಕ್ಷರ ಭಾಷಣದಲ್ಲಿ ರೂ.400 ಕೋಟಿ ಮೌಲ್ಯದಷ್ಟು ಅಡಿಕೆಯನ್ನು ಖರೀದಿ ಮಾಡಿರುವುದಾಗಿ ತಿಳಿಸಿದರು. ಇದು ಸಂತೋಷದ ವಿಷಯವಾಗಿದೆ. ಆದರೆ ವರದಿಯಲ್ಲಿ ರೂ.5 ಕೋಟಿ ಲಾಭಗಳಿಸಿರುವುದಾಗಿ ತಿಳಿಸಲಾಗಿದೆ. ಸಣ್ಣ ಅಡಿಕೆ ಮಂಡಿಯವರು ಎಷ್ಟು ಲಾಭವನ್ನು ಗಳಿಸುತ್ತಿದ್ದಾರೆ ಎಂದು ಸದಸ್ಯರು ಗಮನಿಸಬೇಕು ಎಂದು ಹೇಳಿದರು. ಹಾಗೆಯೇ, ಸಂಘದಲ್ಲಿ ಆರೋಗ್ಯ ವಿಮೆ ಮಾಡಿಸಿದ್ದೆ. ಆಸ್ಪತ್ರೆಗೆ ದಾಖಲಾದಾಗ ಇನ್ಶೂರೆನ್ಸ್ ಕಪನಿಯವರನ್ನು ವಿಚಾರಿಸಿದಾಗ ಬಿ.ಪಿ., ಶುಗರ್ ಇದೆ ಆದ್ದರಿಂದ ವಿಮಾ ಸೌಲಭ್ಯ ದೊರಕುವುದಿಲ್ಲ ಎಂದು ಹೇಳಿದರು. ವಿಮೆಯನ್ನು ಮಾಡಿಸುವಾಗ ಇದನ್ನೆಲ್ಲಾ ಪರೀಶೀಲಿಸಬೇಕು. ಆರ್ಥಿಕವಾಗಿ

ಸದೃಢವಾಗಿ ಇದ್ದರೆ ಸಮಸ್ಯೆ ಇಲ್ಲ. ಸಾಮಾನ್ಯ ರೈತರ ವಿಮೆ ತಿರಸ್ಕೃತವಾದರೆ ಪರಿಸ್ಥಿತಿ ಏನು. ಇದಕ್ಕೆ ಹೊಣೆ ಯಾರು? ಇನ್ಸೂರೆನ್ಸ್ ಕಂಪನಿಯ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದರು.

ಮಾನ್ಯ ಉಪಾಧ್ಯಕ್ಷರು ಈ ಬಗ್ಗೆ ನೀವು ಪತ್ರವನ್ನು ಕಳುಹಿಸಿದ್ದೀರಾ, ಪತ್ರಗಳಿಗೆ ಉತ್ತರವನ್ನು ನೀಡುವ ಸಂದರ್ಭದಲ್ಲಿ ತಮಗೆ ಉತ್ತರಿಸಲಾಗುವುದು ಎಂದು ತಿಳಿಸಿದರು.

ಶ್ರೀ ಸುದರ್ಶನ್ ಕುಮಾರ್ ಅಧ್ಯಕ್ಷರ ಭಾಷಣದಲ್ಲಿ ಉತ್ತಮವಾದ ಯೋಜನೆಯನ್ನು ಪ್ರಕಟಿಸಿದ್ದೀರಾ. ಸಂತೋಷದ ವಿಷಯ. ಮುಂದಿನ ದಿನಗಳಲ್ಲಿಯೂ ಸಹ ಉತ್ತಮವಾದ ಯೋಜನೆಯನ್ನು ಜಾರಿಗೊಳಿಸಿ ಎಂದು ತಿಳಿಸಿದರು.

ಶ್ರೀ ಅಶೋಕ್ ನಾಯಕ್ ಹೆಚ್ ಆರ್ ಇವರು ಕಳೆದ ಬಾರಿ ಸಂಘದ ವತಿಯಿಂದ ಪೆಟ್ರೋಲ್ ಬಂಕ್ ತೆರೆಯುವ ಕುರಿತು ಸಲಹೆಯನ್ನು ನೀಡಿದ್ದೆ, ಅದರ ಬಗ್ಗೆ ಅಧ್ಯಕ್ಷರ ನುಡಿಯಲ್ಲಿ ಘೋಷಣೆ ಮಾಡಬೇಕಿತ್ತು. ಮಾನ್ಯ ಅಮಿತ್ ಶಾ ಅವರು ಕೇಂದ್ರ ಸಹಕಾರ ಸಚಿವರಾದ ನಂತರ ಎಲ್ಲಾ ಸಹಕಾರ ಸಂಘಗಳು ಪೆಟ್ರೋಲ್ ಬಂಕ್ ತೆರೆಯಲು ಅನುಮತಿಯನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ. ತುಮಕೋಸ್ ಚನ್ನಗಿರಿಯಲ್ಲಿ ಸದಸ್ಯರಿಗೆ ಇದರಿಂದ ನೇರವಾಗಿ ರೂ.1 (ಲೀಟರ್ ಒಂದಕ್ಕೆ) ಸಿಗುತ್ತಿದೆ. ಸದಸ್ಯರಿಗೆ ಇಂಥ ಸೌಲಭ್ಯವನ್ನು ಕಲ್ಪಿಸಿ ಎಂದರು.

ಮಾನ್ಯ ಉಪಾಧ್ಯಕ್ಷರು ಮುಂದಿನ ಬಾರಿ ಇದರ ಬಗ್ಗೆ ಯೋಚಿಸಲಾಗುವುದು. ಮಾಮ್‌ಕೋಸ್ ಒಂದೇ ಶಾಖೆಯನ್ನು ಹೊಂದಿಲ್ಲ. ಎಲ್ಲಾ ಭಾಗದಲ್ಲೂ ಜಾಗದ ವ್ಯವಸ್ಥೆಯಾಗಬೇಕು. ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು ಎಂದು ಉತ್ತರಿಸಿದರು. ಹಾಗೂ ಅಧ್ಯಕ್ಷರ ನುಡಿಯಲ್ಲಿ ಸೇರಿಸಲಾಗುವುದು ಎಂದು ತಿಳಿಸಿದರು.

ಮುಂದುವರೆದು, ಶ್ರೀ ಅಶೋಕ್ ನಾಯ್ಕ್ ಇವರು ಆನವಟ್ಟಿಯಲ್ಲಿ ಶಾಖೆಯನ್ನು ತೆರೆಯುವ ಕುರಿತು ಆಶ್ವಾಸನೆಯನ್ನು ನೀಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ಮಿತ್ರ ಇವರು ಎಲ್ಲಾ ಶಾಖೆಗಳಲ್ಲಿ ನೇರ ಖರೀದಿ ಕೇಂದ್ರವನ್ನು ಪ್ರಾರಂಭಿಸಿ ಎಂದು ಸಲಹೆ ನೀಡಿದಾಗ ಮಾನ್ಯ ಉಪಾಧ್ಯಕ್ಷರು ಸಲಹೆ ಉತ್ತಮವಾಗಿದ್ದು, ಸಾಧಕ ಬಾಧಕಗಳನ್ನು ಗಮನಿಸಿ ಮುಂದಿನ ದಿನಗಳಲ್ಲಿ ಯೋಚಿಸಲಾಗುವುದು ಎಂದು ಉತ್ತರಿಸಿದರು.

ಶ್ರೀ ಪ್ರಸನ್ನಕುಮಾರ್ ಇವರು ಮುಂದಿನ ಕಾರ್ಯಯೋಜನೆ ಬಗ್ಗೆ ಸ್ಪಷ್ಟವಾದ ಚಿತ್ರಣಗಳು, ಉಲ್ಲೇಖಗಳು ಇರಬೇಕು ಮಾರ್ಗದರ್ಶನಗಳ ಮೇಲೆ ಆಡಳಿತಾತ್ಮಕವಾಗಿ ಚಿಂತನೆ ನಡೆಸಿ ಕೆಲಸ ಮಾಡಬೇಕು. ಅಧ್ಯಕ್ಷರ ಭಾಷಣವನ್ನು ಸಿದ್ಧಪಡಿಸುವಾಗ ಮುಂದಿನ ದಿಕ್ಸೂಚಿಗಳ ಬಗ್ಗೆ ತಿಳಿಸಿ ಎಂದು ಅಭಿಪ್ರಾಯಪಟ್ಟಾಗ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಭಾಷಣದಲ್ಲಿ ಸಂಘವು ಹೊಂದಿರುವ ಉದ್ದೇಶಗಳನ್ನು ತಿಳಿಸಿದೆ. ಸಂಘದ ವಿಷನ್(Vission) ಬಗ್ಗೆ ತಿಳಿಸಲಾಗಿದೆ ಎಂದರು.
ಶ್ರೀ ನಿರಂಜನ ಮೂರ್ತಿ ಇವರು ಸಂಘದ ಚನ್ನಗಿರಿ ಶಾಖೆಯಲ್ಲಿ ಅಡಿಕೆಗೆ ಕಡಿಮೆ ಧಾರಣೆ ಬರುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ ಇದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಎಂದು ಹೇಳಿದಾಗ ಮಾನ್ಯ ಅಧ್ಯಕ್ಷರು ಗಮನಿಸುವುದಾಗಿ ತಿಳಿಸಿದರು.

ಸದಸ್ಯರೊಬ್ಬರು ಕಾಯಿದೆ ಪ್ರಕಾರ ಒಂದೇ ಬಗೆಯ ವ್ಯವಹಾರ ನಡೆಸುತ್ತಿರುವ ಸಹಕಾರ ಸಂಘಕ್ಕೆ ಸದಸ್ಯರಾಗಿದ್ದರೇ ಬೇರೊಂದು ಸಂಘದಲ್ಲಿ ಸದಸ್ಯನಾಗಲು ಅವಕಾಶವಿರುವುದಿಲ್ಲ ಎಂದು ತಿಳಿಸಿರುತ್ತೀರಾ. ಆದರೆ ಮಾಮ್‌ಕೋಸ್ ಅಡಿಕೆ ಖರೀದಿ ಮಾರಾಟ ಮತ್ತು ದಲ್ಲಾಲಿ ವ್ಯವಹಾರವನ್ನು ನಡೆಸುತ್ತದೆ. ಅಪ್‌ಕೋಸ್ ದಲ್ಲಾಲಿ ವ್ಯವಹಾರವನ್ನು ನಡೆಸುತ್ತದೆ. ಆದ್ದರಿಂದ ಸದಸ್ಯತ್ವ ಪಡೆಯಬಹುದು ಅಲ್ಲವೇ ಎಂದು ಪ್ರಶ್ನಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ಬಗ್ಗೆ

ಕರ್ನಾಟಕ ಗೌ.ಉಚ್ಚನ್ಯಾಯಲಯದ ತೀರ್ಪು ಇದೆ. ಅದರನ್ವಯ ಕ್ರಮವಿಡಲಾಗುತ್ತಿದೆ ಎಂದು ಉತ್ತರಿಸಿದರು. ಶ್ರೀ ನವೀನ್ ಹೆಗ್ಡೆ ಇವರು ಎಲ್ಲರಿಗೂ ಮುಂಚಿತವಾಗಿ ವರದಿ ಪುಸ್ತಕಗಳನ್ನು ಕಳುಹಿಸಿ ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ತಿಳಿಸುವಂತೆ ಸೂಚಿಸಲಾಗಿದೆ. ಆದ್ದರಿಂದ ಪ್ರಶ್ನೆಗಳನ್ನು ಲಿಖಿತ ರೂಪದಲ್ಲಿ ಕಳುಹಿಸಲಿ ಹಾಗೆ ಕಳುಹಿಸಿದ ವಿಷಯಗಳ ಕುರಿತು ಚರ್ಚಿಸುವುದು ಸೂಕ್ತವೆಂದು ಸಭೆಗೆ ಎಂದು ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು ಮಾನ್ಯ ಅಧ್ಯಕ್ಷರ ಭಾಷಣವನ್ನು ಅನುಮೋದಿಸಿತು.

**ವಿಷಯ 04 : 2023–24ನೇ ಸಾಲಿನ ವಾರ್ಷಿಕ ವರದಿಯ ಪರಿಗಣನೆ ಕುರಿತು.**

2023–24ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸುವ ಮುನ್ನ ಶ್ರೀ ನಾರಾಯಣ ರಾವ್ ಜಿ ಎಸ್ ಇವರು ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ ಸಂಘಕ್ಕೆ ಅಡಿಕೆಯನ್ನೇ ಹಾಕದವರು 14015 ಸದಸ್ಯರು ಇರುತ್ತಾರೆ ಎಂದು ತಿಳಿಸಿರುತ್ತೀರಿ. ಅಂಕಿಅಂಶಗಳನ್ನು ಗಮನಿಸಿದಾಗ ಅಂದಾಜು ಶೇ.50ರಷ್ಟು ಸದಸ್ಯರು ಸಂಘದಲ್ಲಿ ವ್ಯವಹಾರವನ್ನು ನಡೆಸುತ್ತಿಲ್ಲ. ಇದು ಗಂಭೀರವಾದ ಸಂಗತಿ. ಕನಿಷ್ಠ ವ್ಯವಹಾರ ನಡೆಸದ ಸಕ್ರಿಯರಲ್ಲದ ಸದಸ್ಯರಿಗೂ ಷೇರುಲಾಭಾಂಶವನ್ನು ನೀಡುತ್ತೇವೆ, ಅದು ಸದಸ್ಯರ ಹಕ್ಕು. ಆದರೆ ವ್ಯವಹಾರವನ್ನು ನಡೆಸುತ್ತಿಲ್ಲ. ಇದರ ಬಗ್ಗೆ ಯೋಚಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಅಂತಹವರಿಗೆ ಸೌಲಭ್ಯಗಳನ್ನು ಕಡಿತಗೊಳಿಸಬಹುದು. ಪತ್ರವ್ಯವಹಾರವನ್ನು ಮಾಡಿದ್ದು, ಕೆಲ ಸದಸ್ಯರು ಷೇರು ವಾಪಾಸು ಪಡೆದಿದ್ದು, ಕೆಲ ಸದಸ್ಯರು ಅಡಿಕೆ ಹಾಕಿ ವ್ಯವಹಾರ ನಡೆಸುತ್ತಿದ್ದಾರೆ ಎಂದು ಉತ್ತರವನ್ನು ನೀಡಿದ್ದೀರಾ. ಆದರೆ 14015 ಜನ ಅಂದರೆ ಇದು ಬಹಳ ಗಂಭೀರವಾದ ವಿಷಯವಾಗಿದೆ ಎಂದು ಅಭಿಪ್ರಾಯಪಟ್ಟರು. ಮಾನ್ಯ ಉಪಾಧ್ಯಕ್ಷರು ಸಂಘದಲ್ಲಿ ವ್ಯವಹಾರ ನಡೆಸದ ಸದಸ್ಯರಿಗೆ ಪತ್ರವನ್ನು ಕಳುಹಿಸಲಾಗಿದ್ದು, ಅಂತಹ ಸದಸ್ಯರನ್ನು ಸಂಘದ ವ್ಯವಹಾರದಲ್ಲಿ ಸಕ್ರಿಯಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಶ್ರೀ ಪ್ರಸನ್ನಕುಮಾರ್ ಇವರು ಶ್ರೀ ನಾರಾಯಣರಾವ್ ಜಿ ಎಸ್ ಇವರ ಪ್ರಶ್ನೆ, ಆಲೋಚನೆ ಸರಿಯಾಗಿದೆ. ಆದರೆ ಡಿವಿಡೆಂಡ್‌ನ್ನು ಕಾಯಿದೆಯನ್ವಯ ನೀಡಬೇಕಾಗುತ್ತದೆ. ಆಡಳಿತ ಮಂಡಲಿಯವರು, ಹೋಬಳಿವಾರು ಪಹಣಿ ಇರುವ ಮತ್ತು ಇಲ್ಲದಿರುವ ಬಗ್ಗೆ ನಿಶ್ಚಿತವಾದ ಸರ್ವೆಯನ್ನು ಕೈಗೊಂಡು ಅನಿವಾರ್ಯವಾದಲ್ಲಿ ಸದಸ್ಯರ ಮನವೊಲಿಸಿ ಷೇರು ವಾಪಾಸು ಪಡೆಯುವ ಬಗ್ಗೆ ಕ್ರಮಕೈಗೊಳ್ಳುವಂತೆ ಸಲಹೆ ನೀಡಿದರು.

ಮಾನ್ಯ ಉಪಾಧ್ಯಕ್ಷರು ದಿನಾಂಕ 31.03.2022ಕ್ಕೆ ಇದ್ದಂತೆ ಹಿಂದಿನ 5 ವರ್ಷಕ್ಕೂ ಹಿಂದೆ ವ್ಯವಹಾರ ಮಾಡದ 5537 ಸದಸ್ಯರಿಗೆ ನೋಂದಣಿ ಅಂಚೆ ಮೂಲಕ ಪತ್ರವನ್ನು ಬರೆದಿದ್ದು, ತತ್ಪರಿಣಾವಾಗಿ 339 ಸದಸ್ಯರು ವ್ಯವಹಾರವನ್ನು ಮಾಡಿರುತ್ತಾರೆ. ಹಾಗೂ 3611 ಜನ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ ಮತ್ತು 1347 ಮೃತ ಪ್ರಕರಣಗಳಾಗಿದ್ದು, ಇದರಲ್ಲಿ ಸುಸ್ತಿಯಾಗಿರುವ 58 ಪ್ರಕರಣಗಳನ್ನು ಹೊರತುಪಡಿಸಿ ಉಳಿದ 1289 ಖಾತೆಗಳನ್ನು ದಿನಾಂಕ 30 ಮೇ 2024 ರ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಅಮಾನತ್ತು ಖಾತೆಗೆ ವರ್ಗಾಯಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಎಲ್ ಟಿ ತಿಮ್ಮಪ್ಪ ಇವರು ಬಹಳಷ್ಟು ಸದಸ್ಯರು ಅಡಿಕೆ ತೋಟಗಳನ್ನು ಮಾರಾಟ ಮಾಡಿದ್ದಾರೆ. ತೋಟ ಮಾರಾಟ ಮಾಡಿದವರ ಸದಸ್ಯತ್ವ ಇದೆ ಹಾಗೂ ಪೌತಿಯಾದವರ ಮನೆಗೆ ನೋಟಿಸ್ ಹೋಗುತ್ತಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಸ್ಥಳೀಯ ನಿರ್ದೇಶಕರು ಇದರ ಬಗ್ಗೆ ಆಯಾ ಶಾಖೆಗಳಲ್ಲಿ ನೋಡಬೇಕು. ನಿರ್ದೇಶಕರುಗಳು ಹಳ್ಳಿಗಳಿಗೆ ಭೇಟಿ ನೀಡಬೇಕು. ಪೌತಿ ಯಾರು ಎಂದು ಗೊತ್ತಾಗುತ್ತದೆ. ಜನರಿಗೆ ನಿರ್ದೇಶಕರ ಜೊತೆ ಸಂಬಂಧ ಬೆಳೆಯುತ್ತದೆ. ಅಡಿಕೆಯ ಆವಕ ಜಾಸ್ತಿ ಆಗುತ್ತದೆ ಎಂದು ಸಲಹೆ ನೀಡಿದರು.

ಈ ಬಗ್ಗೆ ಮಾನ್ಯ ಉಪಾಧ್ಯಕ್ಷರು ತಿಮ್ಮಪ್ಪ ಎಲ್ ಟಿ ಇವರ ಸಲಹೆ ಉತ್ತಮವಾಗಿದೆ ಎಂದು ತಿಳಿಸಿದರು. ನಾರಾಯಣರಾವ್

ಜಿ ಎಸ್ ಇವರು ಕಳೆದ ಚುನಾವಣೆಯಲ್ಲಿ ಅರ್ಹ ಮತದಾರರು ಮತ್ತು ಕೋರ್ಟ್ ನಿಂದ ಆದೇಶ ತಂದು ಅನರ್ಹ ಮತದಾರಾರಿಂದ ಚುನಾವಣೆ ನಡೆಯಿತು. ಮುಂದೆ ಹೀಗೆ ಆಗಲ್ಲ ಎಂದು ಹೇಗೆ ಆಲೋಚನೆ ಮಾಡುತ್ತೀರಿ? ಅಡಿಕೆ ಹಾಕಿದವನು ಒಂದೆ ಹಾಗೂ ಅಡಿಕೆ ಹಾಕದವನೂ ಒಂದೆ ಆಗುತ್ತದೆಯಾ? ಎಂದು ಪ್ರಶ್ನಿಸಿದರು.

ಶ್ರೀ ನವೀನ್ ಹೆಗ್ಡೆ ಇವರು ಪ್ರಸ್ತುತ ಸಾಲಿನ ಪಹಣಿಯನ್ನು ಪಡೆದರೆ ಆಗ ಮಾಹಿತಿ ತಿಳಿಯುತ್ತದೆ ಎಂದು ಅಭಿಪ್ರಾಯಪಟ್ಟರು.

ಶ್ರೀ ಅಶೋಕ್ ನಾಯಕ್ ಹೆಚ್ ಆರ್ ಇವರು ಈ ಹಿಂದೆ ಸಂಘದಲ್ಲಿ ವ್ಯವಹಾರ ನಡೆಸದ ಅಪೂರ್ಣ ಷೇರುದಾರರ ಸರ್ವೆ ಮಾಡಿ ಸುಮಾರು 2000 ಖಾತೆಗಳನ್ನು ಖೈದುಗೊಳಿಸಲಾಗಿದೆ ಎಂದು ತಿಳಿಸುತ್ತಾ, ಅದೇ ತರ ಸರ್ವೆ ಮಾಡಿ ಎಂದಾಗ ಮಾನ್ಯ ಉಪಾಧ್ಯಕ್ಷರು ಪ್ರತಿ ಸಭೆಯಲ್ಲಿಯೂ ಸಹ ಅಂತಹ ಕೆಲವು ಷೇರು ಖಾತೆ ಮುಕ್ತಾಯವಾಗುತ್ತಿದೆ ಎಂದು ಉತ್ತರಿಸಿದರು.

ಶ್ರೀ ವೆಂಕಟಾಚಲ ಜಿ ಇವರು ಸಂಘದ ಉಪವಿಧಿ ಸಂಖ್ಯೆ 19ರಲ್ಲಿ ಸಂಘದಲ್ಲಿನ ತನ್ನ ಕರ್ತವ್ಯ ನಿರ್ವಹಣೆಗಳಲ್ಲಿ ಒಂದಾದ ಕನಿಷ್ಠ ವ್ಯವಹಾರ ನಡೆಸಲು ಸತತ ಮೂರು ವರ್ಷಗಳು ವಿಫಲನಾದರೆ ಸಂಘದ ಸದಸ್ಯತ್ವ ಕೊನೆಗೊಳ್ಳುತ್ತದೆ ಅಥವಾ ನಿಂತುಹೋಗುತ್ತದೆ ಎಂದಿರುತ್ತದೆ. ವ್ಯವಹಾರ ಮಾಡದ ಸದಸ್ಯರಿಗೆ ಸಂಘದ ಸಂಬಂಧ ಬೇಡವಾಗಿದೆ. ಉಪವಿಧಿಯಲ್ಲಿ ಪ್ರಾವದಾನವಿರುವುದರಿಂದ ಖಾತೆಗಳನ್ನು ಖೈದುಗೊಳಿಸಗೊಳಿಸಬಹುದು ಎಂದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಿತು.

**ವಿಷಯ 05 : 2023–24ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಆಡಳಿತ ಮಂಡಳಿಯ ಸಮಜಾಯಿಷಿಯೊಂದಿಗೆ ಪರಿಶೀಲಿಸಿ, ಅಂಗೀಕರಿಸುವ ಕುರಿತು.**

2023–24ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಆಡಿಟ್ ವರದಿಯನ್ನು ಅನುಮೋದಿಸುವ ಮುನ್ನ ಸದಸ್ಯರೊಬ್ಬರು ಜಮಾ–ಖರ್ಚು ತಃಖ್ತೆಯಲ್ಲಿ ವ್ಯಾಪಾರದ ಜಮಾ ಎಂದು ಇದೆ ಇದು ಯಾವುದು ತಿಳಿಸಿ ಎಂದು ಪ್ರಶ್ನಿಸಿದರು. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಈಗಾಗಲೇ ತಿಳಿಸಿದಂತೆ ತೇವಾಂಶದಿಂದ ಬಂದ ಅಡಿಕೆಯ ಮೊಬಲಗನ್ನು ರೂ.1,10,04,192.36ಗಳನ್ನು ಟ್ರೇಡ್ ರಿಸೀಟ್ ಹೆಸರಿನ ಲೆಕ್ಕ ಶಿರೋನಾಮೆಯಡಿ ಜಮಾಪಡಿಸಲಾಗಿದೆ. ಈ ಕುರಿತು ಮಾತನಾಡಿದ ಪುನಃ ಸದರಿ ಸದಸ್ಯರು ಅದು ಅಡಿಕೆ ಹಾಕಿ ವ್ಯವಹರಿಸಿದ ಸದಸ್ಯರಿಂದ ಬಂದ ಲಾಭದ ಹಣವಾಗಿರುತ್ತದೆ. ಆದ್ದರಿಂದ ಅಡಿಕೆ ಹಾಕಿದ ರೈತರಿಗೆ ಸಲ್ಲತಕ್ಕದ್ದು. ಲಾಭದ ಹಣವನ್ನು ಜಮಾ ಪಡೆದು ಲಾಭ ಗಳಿಸಿದೆ ಎಂದು ಹೇಳುವುದು ಸರಿಯಲ್ಲ. ಗುಂಪು ವಿಮೆಗೆ ಹಣವನ್ನು ಭರಿಸಿ ಅಥವಾ ಬೆಳೆಗಾರರ ಹಿರತಕ್ಷಣಾ ನಿಧಿಯನ್ನು ಸ್ಥಾಪಿಸಿ ಎಂದು ತಿಳಿಸಿದಾಗ ಮಾನ್ಯ ಉಪಾಧ್ಯಕ್ಷರು ಈ ಹಣವನ್ನು ಸಂಘದ ದುಡಿಯುವ ಬಂಡವಾಳದಲ್ಲಿ ಉಪಯೋಗಿಸಿಕೊಂಡು ಶೇ.0.13ರಷ್ಟು ಬೋನಸ್ ನ್ನು 'ಬಿ' ಬಿಲ್‌ನಲ್ಲಿ ನೀಡಲಾಗುತ್ತಿದೆ. ಎಂದರು.

ಶ್ರೀ ದಿನೇಶ್ ಕೆ ಸಿ ಇವರು ವ್ಯಾಪಾರದ ಮಾಹಿತಿ ದಿನದ ಅಂತ್ಯಕ್ಕೆ ಸಿಗುತ್ತದೆ. ಜನವರಿಯಲ್ಲಿ ಅಡಿಕೆಯನ್ನು ಸಂಘಕ್ಕೆ ಕಳುಹಿಸಿ ಮೇ ಮಾಹೆಯಲ್ಲಿ ಮಾರಾಟ ಮಾಡಿದ್ದಲ್ಲಿ ತೂಕ ಕಡಿಮೆ ಬರುತ್ತದೆ. ಜೂನ್ ನಂತರ ಮಾರಿದ್ದಲ್ಲಿ ಲಾಭವಾಗುತ್ತದೆ. ಆದ್ದರಿಂದ ಜೂನ್ ನಂತರ ಅಡಿಕೆ ಮಾರಾಟ ಮಾಡಿದವರಿಗೆ ಹೆಚ್ಚಿಗೆ ಬಂದ ತೂಕದ ಲಾಭ ಮೊಬಲಗನ್ನು ನೀಡಿ.ಅದರ ಬದಲು ಬೋನಸ್ ನೀಡುತ್ತೇವೆ, ದುಡಿಯುವ ಬಂಡವಾಳದಲ್ಲಿ ಬಳಸಲಾಗಿದೆ ಎಂದು ಹೇಳುವುದು ಸರಿಯಲ್ಲ ಎಂದು ತಿಳಿಸಿದರು.

ಶ್ರೀ ಪ್ರಸನ್ನ ಕುಮಾರ್ ಇವರು ಮಾಮ್‌ಕೋಸ್ ಸಂಸ್ಥೆ ಇರುವುದು ಸದಸ್ಯರಿಗೆ ಅನುಕೂಲವನ್ನು ಮಾಡಿಕೊಡಲು. ಅನುಕೂಲಗಳನ್ನೇ ಮಾಡಿಕೊಡುತ್ತಿದೆ. ಹೆಚ್ಚಿಗೆ ತೂಕ ಬಂದ ಅಡಿಕೆಯನ್ನು ನೀಡಿದರೆ ಕಡಿಮೆ ತೂಕ ಬಂದಾಗ 'ಎ' ಬಿಲ್‌ನಲ್ಲಿ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ವೈಯಕ್ತಿಕವಾಗಿ ಯಾರು ಇದನ್ನು ಉಪಯೋಗಿಸುವುದಿಲ್ಲ. 'ಎ' ಬಿಲ್ ಪ್ರಕಾರ 'ಬಿ' ಬಿಲ್ ತೂಕವನ್ನು ಮಾಡಿ. ಬಂದ ಲಾಭವನ್ನು ಶೇ.0.13ರಂತೆ ವ್ಯವಹಾರ ಮಾಡುವವರಿಗೆ ನೀಡಲಾಗುತ್ತದೆ. ವ್ಯವಹಾರ ಮಾಡುವ ಸದಸ್ಯರಿಗೆ ಮಾತ್ರ ಸಿಗುತ್ತದೆ. ಈ ಕ್ರಮವನ್ನೇ ಮುಂದುವರೆಸಿ ಎಂದು ಅಭಿಪ್ರಾಯಪಟ್ಟರು.

ಶ್ರೀ ರಘು ಇವರು ಸಾವಯವ ಗೊಬ್ಬರಕ್ಕೆ ಸಂಬಂಧಿಸಿದಂತೆ ಅದು ಯಾವ ರೀತಿ ಪ್ರೊಸೆಸ್ ಆಗುತ್ತದೆ ಎನ್ನುವುದು ಮುಖ್ಯವಾಗುತ್ತದೆ. ಯಾವ ಅಂಶಗಳನ್ನು ಒಳಗೊಂಡಿರುತ್ತದೆ ಎನ್ನುವುದು ಒಂದು ಭಾಗವಾದರೆ ಯಾವ ರೀತಿ ಸಂಸ್ಕರಿಸಲಾಗುತ್ತದೆ (ಪ್ರೊಸೆಸ್) ಎನ್ನುವುದು ಮುಖ್ಯವಾಗುತ್ತದೆ. ಆದ್ದರಿಂದ ಪ್ರೊಸೆಸ್‌ನ್ನು ಪರಿಗಣನೆಗೆ ತೆಗೆದುಕೊಂಡು ಅದಕ್ಕೆ ಅನುಮತಿಯನ್ನು ನೀಡಿ. ಸಾವಯವ ಗೊಬ್ಬರಗಳಲ್ಲಿ ತುಂಬಾ ಸಮಸ್ಯೆ ಇದೆ. ಅದು ಡಿ–ಕಂಪೋಸ್ಟ್ ಆಗಿರಲೇ ಬೇಕು. ಡಿ–ಕಂಪೋಸ್ಟ್‌ಗೆ ಪ್ರೊಸೆಸ್ ಇದೆ. ಭೇಟಿ ನೀಡಿ ವೀಕ್ಷಿಸಿ ಅವಕಾಶ ನೀಡಿ. ನೂರಾರು ಪ್ರಗತಿಪರ ರೈತರು ಇದ್ದಾರೆ. ಆದ್ದರಿಂದ ಪ್ರಗತಿಪರ ರೈತರು ಮತ್ತು ವಿಜ್ಞಾನಿಗೊಳಗೊಂಡಂತೆ ಸಮಿತಿಯನ್ನು ರಚಿಸಿ ಎಂದು ಸಲಹೆ ನೀಡಿದಾಗ ಮಾನ್ಯ ಉಪಾಧ್ಯಕ್ಷರು ಮಾಮ್‌ಕೋಸ್ ಸಂಸ್ಥೆಯಿಂದ ಮಾರಾಟ ಮಾಡಲಾಗುತ್ತಿರುವ ಗೊಬ್ಬರಗಳಿಗೆ ವಿಶ್ವವಿದ್ಯಾನಿಲಯ ನೀಡಿರುವ ಪತ್ರ ಮತ್ತು ಪ್ರಯೋಗಾಲಯದಿಂದ ವರದಿಯನ್ನು ಪಡೆಯಲಾಗಿದೆ. ಡಿ–ಕಂಪೋಸ್ಟ್ ಸಹ ಆಗುತ್ತದೆ. ಹಾಗೂ ಉತ್ಪದನಾ ಘಟಕಕ್ಕೆ ಭೇಟಿ ನೀಡಿ ಗುಣಮಟ್ಟ ಉತ್ತಮವಾಗಿರುವುದು ಖಚಿತವಾಗಿರುವ ನಂತರವೇ ಮಾಮ್‌ಕೋಸ್‌ನಿಂದ ಗೊಬ್ಬರ ಮಾರಾಟ ಮಾಡಲಾಗುತ್ತಿದೆ ಎಂದು ಉತ್ತರಿಸಿದರು.

ಶ್ರೀ ನಾರಾಯಣ ರಾವ್ ಜಿ ಎಸ್ ಇವರು ನಿರ್ದೇಶಕರ ಪ್ರಯಾಣ ಭತ್ಯೆಗೆ ರೂ.39,73,916/–ಗಳನ್ನು ಖರ್ಚು ಬರೆಯಲಾಗಿದೆ. ಆದರೆ ಲೆಕ್ಕಪರಿಶೋಧನಾ ವರದಿಯಲ್ಲಿ ಮಂಡಲಿಯ ಸಭೆಗಳಿಗೆ ಆದ ವೆಚ್ಚ 3,25,288/– ಇದೆ. ಪ್ರಯಾಣ ಭತ್ಯೆ ಮತ್ತು ಸಭಾ ಭತ್ಯೆಯನ್ನು ಒಂದೇ ಖಾತೆಗೆ ಖರ್ಚು ಬರೆಯಲಾಗಿದೆಯಾ? ಎಂದು ಕೇಳಿದಾಗ ವ್ಯವಸ್ಥಾಪಕ ನಿರ್ದೇಶಕರು ಸಭೆಗಳ ದಿನದಂದು ಕಾಫೀ–ಟೀ ಊಟದ ವ್ಯವಸ್ಥೆಯ ಮೊಬಲಗನ್ನು ಬೇರೆ ತೋರಿಸಲಾಗಿದೆ. ಸಭಾ ಭತ್ಯೆ ಮತ್ತು ಪ್ರಯಾಣ ಭತ್ಯೆ ಮೊಬಲಗು ಸೇರಿ ಒಟ್ಟು ರೂ.39,73,916/–ಗಳಾಗಿದೆ. ಎಂದು ಉತ್ತರಿಸಿದರು. ಪುನಃ ಸದರಿಯವರು ಪ್ರಯಾಣ ಭತ್ಯೆ ಮತ್ತು ಸಭಾ ಭತ್ಯೆ ಎರಡು ಬೇರೆ ಬೇರೆ. ಎರಡನ್ನು ಒಂದೇ ಖಾತೆಯಲ್ಲಿ ಖರ್ಚು ಬರೆಯುವುದು ಸರಿಯಲ್ಲ ಎಂದಾಗ ವ್ಯವಸ್ಥಾಪಕ ನಿರ್ದೇಶಕರು ಪ್ರಯಾಣ ಭತ್ಯೆಯು ಸಹ ನಿರ್ದೇಶಕರಿಗೆ ಪಾವತಿಯಾಗಿದ್ದು, ಎರಡು ಬೇರೆ ಬೇರೆ ಭತ್ಯೆ ಆದರೂ ಎರಡು ಸಹ ನಿರ್ದೇಶಕರಿಗೆ ಪಾವತಿಯಾಗಿರುವುದರಿಂದ ನಿರ್ದೇಶಕರ ಪ್ರಯಾಣ ಭತ್ಯೆ ಖಾತೆಗೆ ಖರ್ಚು ಬರೆಯಲಾಗಿದೆ ಎಂದಾಗ ಸದರಿಯವರು ಅದನ್ನು ವಿಂಗಡಣೆ ಮಾಡಿ ಎಂದು ಸಲಹೆ ನೀಡಿದರು.

ಶ್ರೀ ಮಂಜಪ್ಪ ಹೆಚ್ ಎಸ್ ಇವರು ಜಮಾ ಖರ್ಚು ತಃಖ್ತೆಯಲ್ಲಿ ಆಡಳಿತಾತ್ಮಕ ವೆಚ್ಚದ ಬಾಬುಗಳಲ್ಲಿ ಮಹಾಸಭೆ ಖರ್ಚು, ವಿದ್ಯುತ್ ಖರ್ಚು, ಸಭಾ ಖರ್ಚು , ಆಡಳಿತ ವೆಚ್ಚದ ಕಾಲಂನಲ್ಲಿ ಜಮಾ ತೋರಿಸಿರುವ ಬಗ್ಗೆ ವಿವರಣೆ ಕೇಳಿದಾಗ ವ್ಯವಸ್ಥಾಪಕ ನಿರ್ದೇಶಕರು ಸ್ಪಷ್ಟೀಕರಣ ನೀಡಿದರು.

ಪುನಃ ಸದರಿಯವರು ಸಂಸ್ಥೆಯ ಪಾರದರ್ಶಕತೆ ಬಗ್ಗೆ ಅನುಮಾನವಿಲ್ಲ. ಮಾಮ್‌ಕೋಸ್ ಇದುವರೆಗೂ ಪಾರದರ್ಶಕತೆಯಿಂದ ಕೆಲಸ ಮಾಡಿದೆ. ಲೆಕ್ಕಪರಿಶೋಧಕರು ಸಭೆಯಲ್ಲಿ ಉಪಸ್ಥಿತರಿದ್ದಾರೆ. ಈಗಿನ ಕಾಯಿದೆ ಪ್ರಕಾರ ಪರಿಹಾರ ಏನಾದರೂ ಇದ್ದರೆ ಸ್ಪಷ್ಟೀಕರಣ ಕೊಡಬಹುದು. ಆದ್ದರಿಂದ ಒಂದು ಪಾವತಿಯಾದ ನಂತರ ವಾಪಸು ಬಂದರೆ ಅದನ್ನು ಡಿಡಕ್ಟ್ ಮಾಡಿ ಖರ್ಚು ಬರೆಯಬೇಕು ಹೊರತು ಅದನ್ನು ಖರ್ಚು ಮಾಡಿದೀವಿ ಜಮಾ ಬಂದಿದೆ ಎಂದು ಹೇಳುವುದು ಅಕೌಂಟಿಗೆ ಪದ್ದತಿ ಅಲ್ಲ ಎಂದು ತಿಳಿಸಿದರು. ಈ ಬಗ್ಗೆ ಸಂಘದ ಲೆಕ್ಕಪರಿಶೋಧಕರಾದ ಶ್ರೀ

ಮಧುಕರಹೆಗಡೆ ಇವರು ರೂ.1,50,150/– ತಪ್ಪಾದ ಖಾತೆಗೆ ಖರ್ಚು ಬರೆಯಲಾಗಿತ್ತು. ಅದನ್ನು ಸರಿಪಡಿಸಲಾಗಿದೆ. ಆರ್ & ಪಿಯಲ್ಲಿ ನೆಟ್ ಬ್ಯಾಲೆನ್ಸ್ ತೋರಿಸಿಲ್ಲ. ಮುಂದಿನ ದಿನಗಳಲ್ಲಿ ರೆಕ್ಟಿಫೀಕೇಷನ್ ಎಂಟ್ರಿಯನ್ನು ಕಳೆದು ತೋರಿಸುತ್ತೀವಿ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ನೋಡಿ ಎಂದು ಸಲಹೆ ನೀಡಿದರು.

ಶ್ರೀ ರಾಘವೇಂದ್ರ ಇವರು ಕಳೆದ ಬಾರಿಗೆ ಹೋಲಿಕೆ ಮಾಡಿದಾಗ ಆಪದ್ಧನ ನಿಧಿಗೆ ಕಳೆದ ಸಾಲಿನಲ್ಲಿ ರೂ.5.50 ಕೋಟಿ ಮತ್ತು ಈ ಬಾರಿ ರೂ.20 ಲಕ್ಷಗಳನ್ನು ವರ್ಗಾಯಿಸಲಾಗಿದೆ. ಯೋಜನೆಗಳನ್ನು ಹಮ್ಮಿಕೊಳ್ಳಬೇಕಾದರೆ ಇದನ್ನು ಗಮನಿಸಬೇಕು. ಈ ಬಾರಿ ವ್ಯಾಪಾರ ಲಾಭ ಸುಮಾರು ರೂ.7.50 ಕೋಟಿ ರಷ್ಟು ಕಡಿಮೆ ಇದೆ. ಇದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು. ಈ ಕುರಿತು ಮಾನ್ಯ ಉಪಾಧ್ಯಕ್ಷರು ಆಡಿಟ್ ವರದಿಯಲ್ಲಿ ಈ ಬಗ್ಗೆ ವಿವರಗಳನ್ನು ನೀಡಲಾಗಿದ್ದು, ಆ ಸಮಯದಲ್ಲಿ ಉತ್ತರ ನೀಡುವುದಾಗಿ ತಿಳಿಸಿದರು.

ಶ್ರೀ ನಾರಾಯಣರಾವ್ ಜಿ ಎಸ್ ಇವರು ಅಡಿಕೆ ಖರೀದಿ ಮತ್ತು ಮಾರಾಟ ಸರಿಸುಮಾರು ಒಂದೇ ತರಹ ಇದೆ. ಆದರೆ ವ್ಯಾಪಾರ ಲಾಭ ಸುಮಾರು ರೂ.9.0 ಕೋಟಿಯಷ್ಟು ಕಡಿಮೆ ಇದೆ. ಸಿಬ್ಬಂದಿ ವೆಚ್ಚ, ಬಡ್ಡಿ ಖಾತೆ ಹಾಗೂ ಆಡಳಿತಾತ್ಮಕ ವೆಚ್ಚ ಅಂದಾಜು ರೂ.1.5ಕೋಟಿಯಷ್ಟು ಜಾಸ್ತಿಯಾಗಿದೆ. ಒಟ್ಟಾರೆಯಾಗಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿಗೆ ಲಾಭವನ್ನು ಹಂಚಿದ್ದೀರಿ. ಆದರೆ ರೂ.9.0 ಕೋಟಿಯಷ್ಟು ವ್ಯಾಪಾರ ಲಾಭ ಕಡಿಮೆಯಾಗಿದೆ. ಇದಕ್ಕೆ ಸ್ಪಷ್ಟೀಕರಣ ನೀಡಿ ಎಂದು ಕೇಳಿದರು.

ಈ ಸಮಯಲ್ಲಿ ಪ್ರಸನ್ನಕುಮಾರ್ ಇವರು ಇದು ಗಮನಕೊಡಬೇಕಾದ ವಿಷಯವಾಗಿದೆ. ಎಲ್ಲಿ ನಷ್ಟವಾಗುತ್ತದೆ. ಎಲ್ಲಿ ನಷ್ಟವನ್ನು ತುಂಬಬಹುದು ಎಂದು ಗಮನಿಸಬೇಕು. ಮುಂದಿನ ದಿನಗಳಲ್ಲಿ ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ನಡೆಸಿ. ರೂ.9.0ಕೋಟಿ ವ್ಯಾಪಾರ ಲಾಭ ಕಡಿಮೆ ಆಗಿದೆ ಅಂದರೆ ಮಾಮ್‌ಕೋಸ್‌ಗೆ ರೈತರ ಪರವಾಗಿ ಅಭಿನಂದನೆ ಮಾಡಲು ಇಚ್ಚಿಸುತ್ತೇನೆ. ಏಕೆಂದರೆ ರೈತರಿಗೆ ಲಾಭವಾಗಿದೆ. ಅನೇಕ ಸಹಕಾರಿ ಸಂಸ್ಥೆಯಲ್ಲಿ ಅಡಿಕೆ ವ್ಯಾಪಾರವಿದೆ. ಮಾಮ್‌ಕೋಸ್ ಮತ್ತು ಕ್ಯಾಂಪ್ಕೋ ಇಲ್ಲದೇ ಇದ್ದಿದ್ದರೆ ರೂ.54000/– ಧಾರಣೆ ರೈತರಿಗೆ ಸಿಗುತ್ತಿರಲಿಲ್ಲ. ಬೆಳೆಗಾರರ ಬೆಳೆಯನ್ನು ಎತ್ತಿಹಿಡಿರುವುದು ಮಾಮ್‌ಕೋಸ್ ಮತ್ತು ಕ್ಯಾಂಪ್ಕೋ. ಇದರಿಂದಾಗಿ ಸ್ವಲ್ಪ ನಷ್ಟವಾಗಿದೆ. ಆದರೆ ರೈತರು ಸಂತೋಷವಾಗಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಎನು ಮಾಡಬೇಕು ಎಂದು ಯೋಚನೆ ಮಾಡಿ ಎಂದು ಸಲಹೆ ನೀಡಿದರು.

ವ್ಯವಸ್ಥಾಪಕ ನಿರ್ದೇಶಕರು ವ್ಯಾಪಾರ ಲಾಭ ಕಡಿಮೆಯಾಗಲು ಮುಖ್ಯ ಕಾರಣ ಅಡಿಕೆಯನ್ನು ಜಾಸ್ತಿ ಧಾರಣೆಗೆ ಖರೀದಿಸಿ, ನಂತರದಲ್ಲಿ ಅಡಿಕೆ ಧಾರಣೆ ಕುಸಿದ ಕಾರಣದಿಂದ, ಖರೀದಿ ಧಾರಣೆಗಿಂತ ವ್ಯಾಪಾರ ಧಾರಣೆ ಕಡಿಮೆ ಆಗಿದ್ದರಿಂದ ವ್ಯಾಪಾರ ಲಾಭದಲ್ಲಿ ಕಡಿಮೆ ಆಗಿದೆ. ಮಾರ್ಚ್ 2024ರ ಅಂತ್ಯಕ್ಕೆ ಸರಾಸರಿ ಮಾರುಕಟ್ಟೆ ಧಾರಣೆ 48000 ಇದ್ದು, ನಾವು ಖರೀದಿಸಿದ್ದು 54000 ಅಂದರೆ ಅಂದಾಜು 5000 ದರ ಕಡಿಮೆ ಇತ್ತು. ಸುಮಾರು 150 ಕೋಟಿಯಷ್ಟು ದಾಸ್ತಾನು ಇದ್ದ ಕಾರಣ ಮಾರಾಟ ಮಾಡಬೇಕಾದ ಅನಿವಾರ್ಯತೆ ಸೃಷ್ಠಿಯಾಯಿತು. ಹಾಗೆಯೇ ಉತ್ತರಭಾಗದವರಿಂದ ಬರಬೇಕಾದ ಹಣವು ಸಹ ಜಾಸ್ತಿ ಇತ್ತು. ಮುಂದಿನ ದಿನಗಳಲ್ಲಿ ಖರೀದಿ ಮಾಡಲು ದಾಸ್ತಾನು ಇದ್ದ ಮೂಟೆಗಳನ್ನು ಮಾರಾಟ ಮಾಡಬೇಕಾದ ಪರಿಸ್ಥಿತಿ ಉದ್ಭವಿಸಿದ್ದರಿಂದ ಮಾರಾಟ ಮಾಡಲಾಯಿತು. ಆದರೆ ಸುಮಾರು ರೂ.96.00 ಲಕ್ಷಗಳಷ್ಟು ಹ್ಯಾಂಡ್ಲಿಂಗ್ ಚಾರ್ಜಸ್ ಜಮಾ ಬಂದಿರುತ್ತದೆ. ಲಾಭದ ಪ್ರಮಾಣ ಕಡಿಮೆ ಆಗಿರುತ್ತದೆ ಆದರೆ ನಷ್ಟವಾಗಿರುವುದಿಲ್ಲ ಎಂದು ಉತ್ತರಿಸಿದರು.

ಶ್ರೀ ಮಹೇಶ್ ಇವರು ಪೂರ್ಣ ಪ್ರಮಾಣದ ಅಡಿಕೆಯನ್ನು ಮಾಮ್‌ಕೋಸ್‌ಗೆ ಹಾಕಲಾಗಿರುತ್ತದೆ. ಆದರೆ ಧಾರಣೆ ಸಿಗಲಿಲ್ಲ. ಮಾರುಕಟ್ಟೆ ಧಾರಣೆ ರೂ.53,000/– ಇದ್ದಾಗ ಧಾರಣೆ ರೂ.43000 ನೀಡಿರುತ್ತಾರೆ. ಏಕೆಂದರೆ ಕೇವಲ ಒಬ್ಬ ವ್ಯಾಪಾರಸ್ಥ ಮಾತ್ರ ಅಡಿಕೆಗೆ ಧಾರಣೆ ನೀಡಿರುತ್ತಾರೆ. ಅದು ಟೆಂಡರ್ ಆಗುವುದಿಲ್ಲ. ಹೊರಗಡೆ ರೂ.53000 ಧಾರಣೆ ಇದ್ದಾಗ ನಿಮ್ಮ ಸಂಸ್ಥೆಯಲ್ಲಿ ಕಡಿಮೆ ಧಾರಣೆ ಸಿಗುತ್ತದೆ. ಮಾಮ್‌ಕೋಸ್ ರೈತರ ಪರವಾಗಿ ನಿಲ್ಲಬೇಕು.

ಎಂದು ಹೇಳಿದಾಗ ಮಾನ್ಯ ಉಪಾಧ್ಯಕ್ಷರು ಅಡಿಕೆಯ ಧಾರಣೆ ಬೇಡಿಕೆ ಮತ್ತು ಸರಬರಾಜು ಮೇಲೆ ನಿಂತಿರುತ್ತದೆ. ಅಡಿಕೆ ಧಾರಣೆ ಇದ್ದಾಗ ಮಾಮ್‌ಕೋಸ್ ಮತ್ತು ಕ್ಯಾಂಪ್ಕೋ ಧಾರಣೆಯನ್ನು ನೋಡಿ ಅದಕ್ಕಿಂತ ಹೆಚ್ಚಿಗೆ ನೀಡುತ್ತಿದ್ದಾರೆ. ಉತ್ತಮ ಗುಣಮಟ್ಟದ ಅಡಿಕೆಗೆ ಧಾರಣೆ ಸಿಗುತ್ತಿದೆ ಎಂದು ಉತ್ತರಿಸಿದರು.

ಶ್ರೀ ದಿನೇಶ್ ಕೆ ಸಿ ಕಡ್ತೂರು ಇವರು 400 ಕೋಟಿ ಅಡಿಕೆಯನ್ನು ವ್ಯಾಪಾರ ಮಾಡಲಾಗಿದೆ ಉತ್ತರ ಭಾರತದ ಏಜೆಂಟರಿಗೆ ಅಡಿಕೆ ಮಾರಾಟ ಮಾಡಲಾಗುತ್ತಿದೆಯೇ? ಅಥವಾ ನೇರ ವಾಗಿ ಗುಟ್ಕಾ ಕಂಪನಿಗಳ ಜೊತೆ ವ್ಯವಹಾರ ನಡೆಸಲಾಗುತ್ತಿದೆಯೇ ಎಂದು ಕಳೆದ ಬಾರಿಯು ಸಹ ಪ್ರಶ್ನಿಸಲಾಗಿತ್ತು. ಗುಣಮಟ್ಟದ ಕೊರತೆಯಿಂದ ಧಾರಣೆ ಕಡಿಮೆಯಾಗಿದೆ ಎಂದು ಹೇಳಲಾಗುತ್ತಿದೆ. ಟೆಂಡರ್ ದಿನ ಅಡಿಕೆಯ ಗುಣಮಟ್ಟದ ಬಗ್ಗೆ ತಿಳಿಸಿ, ಗುಣಮಟ್ಟಕ್ಕೆ ಅನುಗುಣವಾಗಿ ಧಾರಣೆ ನೀಡಲಾಗಿದೆ. ಇದಕ್ಕೆ ಮಾಮ್‌ಕೋಸ್ ಹೊಣೆಯಲ್ಲ ಎಂದು ರೈತರಿಗೆ ತಿಳಿಸಿ ಎಂದು ಸಲಹೆ ನೀಡಿದರು. ಉತ್ತರ ಭಾರತದ ಗುಟ್ಕಾ ಕಂಪನಿಗಳ ಜೊತೆ ಸಭೆಯನ್ನು ನಡೆಸಿದ್ದೇನೆ. ಅವರ ಅನಿಸಿಕೆ ಅಭಿಪ್ರಾಯಗಳನ್ನು ಗಮನಿಸಲಾಗಿದೆ. ಆದ್ದರಿಂದ ನೇರವಾಗಿ ಗುಟ್ಕಾ ಕಂಪನಿಗಳ ಜೊತೆ ವ್ಯವಹಾರವನ್ನು ನಡೆಸಿ. ಏಜೆಂಟರ ಜೊತೆ ವ್ಯವಹಾರ ನಡೆಸಿದಾಗ ಅಪಾಯ ಇರುತ್ತದೆ. ಕಾಲಕಾಲಕ್ಕೆ ಏಜೆನ್ಸಿಗಳ ಹೆಸರು ಬದಲಾವಣೆಯಾಗುತ್ತದೆ. ಗುಟ್ಕಾ ಕಂಪನಿಗಳ ಜೊತೆ ಕರಾರು ಮಾಡಿಕೊಂಡಾಗ ಆರ್ಥಿಕ ಹೊರೆಯಾಗುವುದಿಲ್ಲ ಎಂದು ಸಲಹೆ ನೀಡಿದಾಗ ಮಾನ್ಯ ಉಪಾಧ್ಯಕ್ಷರು ಈ ಸಲಹೆಯನ್ನು ಆಡಳಿತ ಮಂಡಲಿಯಲ್ಲಿ ಪರಿಶೀಲಿಸುವುದಾಗಿ ತಿಳಿಸಿದರು.

ಮೇಲ್ಕಂಡ ಅಂಶಗಳನ್ನು ಗಮನಿಸುವುದರೊಂದಿಗೆ ಸಭೆಯು 2023–24ನೇ ಸಾಲಿನ ಆಡಿಟ್ ಆದ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ದಾಖಲಿಸಿದ ನ್ಯೂನ್ಯತೆಗಳಿಗೆ ನೀಡಿರುವ ಅನುಪಾಲನ ವರದಿ/ಸಮಜಾಯಿಷಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 06 : 2023–24ನೇ ಸಾಲಿನಲ್ಲಿ ಸಂಘವು ಗಳಿಸಿದ ಲಾಭ ಹಂಚಿಕೆ ಕುರಿತು.**

**ನಿರ್ಣಯ :** ಆಡಳಿತ ಮಂಡಳಿಯ ಶಿಫಾರಸನ್ನು ಪರಿಶೀಲಿಸಿ, 2023–24ನೇ ಸಾಲಿನಲ್ಲಿ ಸಂಘವು ಗಳಿಸಿದ **ರೂ. 5,25,35,836/–** ನಿವ್ವಳ ಲಾಭವನ್ನು ಬೈಲಾ ಸಂಖ್ಯೆ: ಭಾಗ 14–(86)–(ಎ) ಪ್ರಕಾರ ಪರಿಶೀಲಿಸಿದ ನಂತರ, ಈ ಕೆಳಕಂಡಂತೆ ನಿವ್ವಳ ಲಾಭ ವಿಲೇವಾರಿ ಪ್ರಸ್ತಾಪವನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಿತು.

**ಸಂಘದ ಬೈಲಾ ಸಂಖ್ಯೆ ಭಾಗ 14–(86)–(ಎ) ರಂತೆ ನಿವ್ವಳ ಲಾಭ ರೂ.5,25,35,836/–**

| ಕ್ರ.. ಸಂ. | ವಿವರಗಳು | ತೆಗೆದಿರಿಸಿದ ಶೇಕಡಾವಾರು | ಮೊಬಲಗು | ಮೊಬಲಗು |
|---|---|---|---|---|
| | **2023–24ನೇ ಸಾಲಿನಲ್ಲಿ ಸಂಘವು ಗಳಿಸಿರುವ ನಿವ್ವಳ ಲಾಭ** | | | **5,25,35,835.64** |
| 1 | ಒಟ್ಟು ನಿವ್ವಳ ಲಾಭದಲ್ಲಿ ಆಪದ್ಧನ ನಿಧಿಗೆ ಶೇ.25ಕ್ಕೆ ಕಡಿಮೆ ಇಲ್ಲದಂತೆ | 25.0% | | 1,31,33,958.91 |
| | **ಉಳಿದ ಲಾಭಾಂಶ** | | | **3,94,01,876.73** |
| 2 | ಉಳಿದ ಲಾಭಾಂಶದಲ್ಲಿ ಸಹಕಾರಿ ಶಿಕ್ಷಣ ನಿಧಿಗೆ ಶೇ.2 ರಂತೆ | 2.0% | | 7,88,037.53 |
| | ಉಳಿದ ಲಾಭಾಂಶ | | | 3,86,13,839.20 |
| | ಉಳಿದ ಲಾಭಾಂಶದಲ್ಲಿ | | | |
| 3 | ಕಟ್ಟಡ ನಿಧಿಗೆ ಶೇ. 20ಕ್ಕೆ ಮೀರದಂತೆ | 20.0% | 77,22,767.84 | |
| 4 | ಹೋಕು ಬಾಕಿ ಸಾಲದ ನಿಧಿಗೆ ಶೇ.10ಕ್ಕೆ ಮೀರದಂತೆ | 5.0% | 19,30,691.96 | |
| 5 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿಗಾಗಿ ಹಾಗೂ ಮಾರಾಟದ ಮೇಲಿನ ಬೋನಸ್‌ಗಾಗಿ ಇರುವ ನಿಧಿಗೆ ಶೇ.40ಕ್ಕೆ ಮೀರದಂತೆ | 38.81% | 1,49,85,986.11 | |

| | | | | |
|---|---|---|---|---|
| 6 | ಲಾಭಾಂಶ ಸರಿದೂಗಿಸುವ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 1.0% | 3,86,138.39 | |
| 7 | ನೌಕರರ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.2ಕ್ಕೆ ಮೀರದಂತೆ | 2.0% | 7,72,276.78 | |
| 8 | ಸಾರ್ವಜನಿಕ ಕ್ಷೇಮಾಭಿವೃದ್ಧಿ ನಿಧಿಗಾಗಿ ಶೇ.10ಕ್ಕೆ ಮೀರದಂತೆ | 1.5% | 5,79,207.59 | |
| 9 | ಅಡಿಕೆ ಸಂಶೋಧನಾ ನಿಧಿಗಾಗಿ ಶೇ.3ಕ್ಕೆ ಮೀರದಂತೆ | 1.5% | 5,79,207.59 | |
| 10 | ಮಹೋತ್ಸವ ನಿಧಿಗೆ ಶೇ.2ಕ್ಕೆ ಮೀರದಂತೆ | 1.5% | 5,79,207.59 | |
| 11 | ಮರಣೋತ್ತರ ನಿಧಿ ಯೋಜನೆಗೆ ಶೇ.15ಕ್ಕೆ ಮೀರದಂತೆ<br>ಉಳಿದ ಲಾಭಾಂಶ | 6.0% | 23,16,830.35 | 2,98,52,314.20<br>87,61,525.00 |
| 12 | ಮತ್ತೆ ಉಳಿದ ಲಾಭಾಂಶದಲ್ಲಿ ಪಾವತಿಯಾದ ಷೇರು ಬಂಡವಾಳಕ್ಕೆ ಶೇ.10.00ರಂತೆ | 10.0% | | 87,61,525.00 |
| 13 | ಉಳಿದ ಮೊಬಲಗು ಸಹಕಾರ ಕಾಯಿದೆ ಹಾಗೂ ನಿಯಮ 21ರ ಪ್ರಕಾರ ಸಂಘದ ಆಪದ್ಧನ ನಿಧಿಗೆ | | – | – |
| | **ಒಟ್ಟು ರೂ.** | | | **5,25,35,835.64** |

ಈ ಸಂದರ್ಭದಲ್ಲಿ 2023–24ನೇ ಸಾಲಿನಲ್ಲಿ ಬೋನಸ್‌ಗೆ ಅರ್ಹರಾದ ಸಂಘದ ಸಿಬ್ಬಂದಿಗಳಿಗೆ ಬೋನಸ್ ಹಣವನ್ನು ಮತ್ತು ಇತರ ಸಿಬ್ಬಂದಿಗಳಿಗೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಪ್ರಕಾರ ಶೇ.20ಕ್ಕೆ ಮೀರದಂತೆ ಅನುಗ್ರಹ ಪೂರ್ವಕ ಕೊಡುಗೆಯನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 07 : 2023–24ನೇ ಸಾಲಿನಲ್ಲಿ ಅಂದಾಜು ಆಯ–ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚವನ್ನು ಪರಿಶೀಲಿಸಿ, ಅಂಗೀಕರಿಸುವ ಕುರಿತು.**

**ನಿರ್ಣಯ :** 2023–24ನೇ ಸಾಲಿನಲ್ಲಿ ಅಂದಾಜು ಆಯ–ವ್ಯಯ ಮಂಜೂರಾತಿಗಿಂತ ಹೆಚ್ಚುವರಿ ಆಗಿರುವ ವೆಚ್ಚದ ವಿವರಗಳನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡು, ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಸರ್ವಾನುಮತದಿಂದ ಅನುಮೋದನೆಯನ್ನು ನೀಡಿತು.

**ವಿಷಯ 08 : 2024–25ನೇ ಸಾಲಿನ ಪರಿಷ್ಕೃತ ಮತ್ತು 2025–26ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವ ಕುರಿತು.**

**ನಿರ್ಣಯ :** ಮಾನ್ಯ ಉಪಾಧ್ಯಕ್ಷರು ಸಂಘದ ಸಾಕ್ಷ್ಯ ಚಿತ್ರ ನಿರ್ಮಾಣಕ್ಕೆ ತಗುಲಿದ ಮೊಬಲಗನ್ನು ಸೇರಿಸಲು ಅವಕಾಶ ನೀಡಬೇಕಾಗಿ ಕೋರಿದಾಗ ಶ್ರೀ ದಿನೇಶ್ ಕೆ ಸಿ ಇವರು ಸಾಕ್ಷ್ಯಚಿತ್ರಕ್ಕೆ ಎಷ್ಟು ಖರ್ಚಾಗಿದೆ ಎಂದು ಸಭೆಗೆ ತಿಳಿಸಿ ಎಂದಾಗ ಮಾನ್ಯ ಉಪಾಧ್ಯಕ್ಷರು ರೂ.15.00 ಲಕ್ಷ ಖರ್ಚಾಗಿದೆ ಎಂದು ತಿಳಿಸಿದರು. ನಂತರ, ಸಾಕ್ಷ್ಯ ಚಿತ್ರ ನಿರ್ಮಾಣಕ್ಕೆ ತಗುಲಿದ ಮೊಬಲಗನ್ನು ಬಜೆಟ್‌ನಲ್ಲಿ ಸೇರಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

ಮುಂದುವರೆದು, ಶ್ರೀ ದಿನೇಶ್ ಕೆ ಸಿ ಇವರು 2024–25 ನೇ ಸಾಲಿನ ಬಜೆಟ್‌ನಲ್ಲಿ ಚುನಾವಣೆಗೆ ರೂ.50.00 ಲಕ್ಷಗಳನ್ನು ಮೀಸಲು ಇಡಲಾಗಿದೆ. ಆದರೆ 50 ಲಕ್ಷ ಸಾಕಾಗುವುದಿಲ್ಲ. ಏಕೆಂದರೆ 15 ಜನ ಶಾಸಕರ ನಿಯೋಗದೊಂದಿಗೆ ಮಾನ್ಯ ಮುಖ್ಯ ಮಂತ್ರಿಗಳನ್ನು, ಸಹಕಾರ ಸಚಿವರನ್ನು ಭೇಟಿ ಮಾಡಿದ್ದು, ಮಾಮ್‌ಕೋಸ್‌ನ ಎಲ್ಲಾ ತಾಲೂಕುಗಳನ್ನು ಒಂದೇ ಕ್ಷೇತ್ರವೆಂದು ಪರಿಗಣಿಸಿ ಚುನಾವಣೆಯನ್ನು ನಡೆಸಲಾಗುತ್ತಿದೆ. ಈ ಚುನಾವಣಾ ಪದ್ಧತಿಯನ್ನು ಬದಲಾಯಿಸಬೇಕು. ಕ್ಷೇತ್ರವಾರು ಚುನಾವಣೆಯನ್ನು ನಡೆಸಲು ಸರ್ಕಾರದಿಂದ ನಿರ್ದೇಶನವನ್ನು ನೀಡುವಂತೆ ಮನವಿಯನ್ನು ಸಲ್ಲಿಸಲಾಗಿದೆ. ಹಾಗೂ ಮಾನ್ಯ ಮುಖ್ಯಮಂತ್ರಿಯವರು ಮತ್ತು ಸಹಕಾರ ಸಚಿವರು ಸಹ ಮನವಿಗೆ ಸ್ಪಂದಿಸಿದ್ದು, ಸೂಕ್ತ ನಿರ್ದೇಶನ ನೀಡುವುದಾಗಿ ಭರವಸೆ ನೀಡಿರುತ್ತಾರೆ. ಒಂದುವೇಳೆ ನಿರ್ದೇಶನ ನೀಡಿದ್ದಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬೇಕಾಗುತ್ತದೆ. ವಿಶೇಷ ಸಾಮಾನ್ಯ ಸಭೆಗೆ ವೆಚ್ಚಗಳಾಗುವ ಹಿನ್ನೆಲೆಯಲ್ಲಿ ಆಯ–ವ್ಯಯದಲ್ಲಿ ಚುನಾವಣೆಗೆ ತೆಗೆದಿರಿಸಿರುವ ಮೊತ್ತವು ಕಡಿಮೆ ಆಗುತ್ತದೆ. ಆದ್ದರಿಂದ ಹೆಚ್ಚಿಗೆ ಮೊತ್ತವನ್ನು ಕಾಯ್ದಿರಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ನಂತರ, ಈ ಕುರಿತು ಮಾತನಾಡಿದ ಮಾನ್ಯ ಉಪಾಧ್ಯಕ್ಷರು ಚುನಾವಣೆಗೆ ಮೀಸಲು ಇರಿಸಿದ

ಹಣಕ್ಕಿಂತ ಹೆಚ್ಚಿಗೆ ಹಣ ಖರ್ಚಾದರೆ ಮುಂದಿನ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗುತ್ತದೆ ಎಂದು ಉತ್ತರಿಸಿದರು.

ಶ್ರೀ ನವೀನ್ ಹೆಗ್ಡೆ ಇವರು ಸಾಕ್ಷ್ಯ ಚಿತ್ರದಲ್ಲಿ ಎಲೆಚುಕ್ಕೆ ರೋಗದಿಂದ ಕೂಡಿರುವ ತೋಟವನ್ನು ತೋರಿಸಲಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಉಪಾಧ್ಯಕ್ಷರು 1939ರಲ್ಲಿ ಇದ್ದ ತೋಟದ ಪರಿಸ್ಥಿತಿಯ ಬಗ್ಗೆ ತಿಳಿದುಕೊಂಡು ಮಾಡಲಾಗಿದೆ. ಪೂರ್ಣ ಸಾಕ್ಷ್ಯಚಿತ್ರವನ್ನು ವೀಕ್ಷಿಸಿ ಅಭಿಪ್ರಾಯವನ್ನು ವ್ಯಕ್ತಪಡಿಸಿ ಎಂದರು.
ಶಶಿಧರ್ ಪಿ ಎನ್ ಇವರು ಕ್ಷೇತ್ರವಾರು ಚುನಾವಣೆ ಬಗ್ಗೆ ಚರ್ಚೆಯಾಗಬೇಕಾದರೆ ಸಾಮಾನ್ಯ ಸಭೆಯ ಅನುಮತಿಯನ್ನು ಪಡೆದು ಚರ್ಚೆ ನಡೆಸಬೇಕು ಎಂದು ತಿಳಿಸಿದರು.

ಶ್ರೀ ಮಂಜಪ್ಪ ಹೆಚ್ ಎಸ್ ಇವರು  ಇತ್ತೀಚಿನ ದಿನಗಳಲ್ಲಿ ವಾಹನಗಳ ಬೆಲೆ ಹೆಚ್ಚಿಗೆ ಇರುವುದರಿಂದ 2024–25ನೇ ಸಾಲಿಗೆ ಅಂದಾಜು ಮಾಡಿದ ಮೊಬಲಗು ರೂ.30.00 ಲಕ್ಷಗಳನ್ನು ಕ್ರಮವಾಗಿ ರೂ.35.00 ಲಕ್ಷಗಳಿಗೆ ಹೆಚ್ಚಿಸುವುದು ಸೂಕ್ತವೆಂದು ಸಲಹೆಯನ್ನು ನೀಡಿದರು.? ಇವರ ಸಲಹೆಯನ್ನು ಪರಿಗಣಿಸಿದ ಸಭೆಯು ಬಜೆಟ್‌ನಲ್ಲಿ 2024–25 ಸಾಲಿಗೆ ವಾಹನ ಖರೀದಿ ಅಂದಾಜು ಮಾಡಿದ ಮೊಬಲಗನ್ನು ರೂ.35.00 ಲಕ್ಷಗಳಿಗೆ ಹೆಚ್ಚಿಸಿ, ಈ ಕೆಳಕಂಡಂತೆ ತಿದ್ದುಪಡಿಯನ್ನು ಮಾಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ಬಜೆಟ್ (ಆಯ–ವ್ಯಯ)**

**ಜಮಾ** (ರೂಪಾಯಿಗಳಲ್ಲಿ)

| ಕ್ರ ಸಂ. | ವಿವರ | 2023–24ನೇ ಸಾಲಿಗೆ ಅಂದಾಜು ಮಾಡಿರುವುದು | 2023–24ನೇ ಸಾಲಿಗೆ ಬಂದ ಆದಾಯ | 2024–25ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2025–26ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|
| 1 | ವ್ಯಾಪಾರ ಲಾಭ | 20,00,00,000 | 13,82,18,123 | 17,25,00,000 | 18,50,00,000 |
| 2 | ಬಡ್ಡಿ | 22,00,00,000 | 23,65,60,830 | 23,00,00,000 | 23,50,00,000 |
| 3 | ಬಾಡಿಗೆ | 25,00,000 | 26,40,435 | 27,00,000 | 28,00,000 |
| 4 | ಇತರೆ | 10,00,000 | 14,21,664 | 16,00,000 | 18,00,000 |
| | **ಒಟ್ಟು ರೂ.** | **42,35,00,000** | **37,88,41,052** | **40,68,00,000** | **42,46,00,000** |

**ವ್ಯಾಪಾರ ಖರ್ಚು:**

| ಕ್ರ ಸಂ. | ವಿವರ | 2023–24ನೇ ಸಾಲಿಗೆ ಅಂದಾಜು ಮಾಡಿರುವುದು | 2023–24ನೇ ಸಾಲಿಗೆ ಖರ್ಚು ಮಾಡಿರುವುದು | 2023–24 ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2024–25ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2025–26 ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| 1 | ಬಾಡಿಗೆ | 50,00,000 | 43,74,014 | – | 50,00,000 | 55,00,000 |
| 2 | ಲಾರಿ ಮತ್ತು ಗಾಡಿ ಬಾಡಿಗೆ | 25,00,000 | 30,64,570 | 5,64,570 | 35,00,000 | 38,00,000 |
| 3 | ಹಮಾಲಿ | 1,40,00,000 | 1,46,96,693 | 6,96,693 | 1,50,00,000 | 1,60,00,000 |
| 4 | ವ್ಯಾಪಾರದ ಖರ್ಚು | 55,00,000 | 52,51,264 | – | 55,00,000 | 58,00,000 |
| 5 | ಕಮಿಷನ್/ ಏಜೆನ್ಸಿ ಕಮಿಷನ್ | 4,10,00,000 | 3,89,01,975 | – | 4,00,00,000 | 4,10,00,000 |
| 6 | ಸೋಡಿ | 80,00,000 | 55,66,524 | – | 65,00,000 | 70,00,000 |
| 7 | ಸಾರ್ಟಿಂಗ್ ವೆಚ್ಚ | 45,00,000 | 43,83,398 | – | 50,00,000 | 55,00,000 |
| | **ಒಟ್ಟು ರೂ.** | **8,05,00,000** | **7,62,38,438** | **12,61,263** | **8,05,00,000** | **8,46,00,000** |

ಇತರೆ ಖರ್ಚು :

| ಕ್ರ. ಸಂ. | ವಿವರ | 2023–24ನೇ ಸಾಲಿಗೆ ಅಂದಾಜು ಮಾಡಿರುವುದು | 2023–24ನೇ ಸಾಲಿಗೆ ಖರ್ಚು ಮಾಡಿರುವುದು | 2023–24 ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2024–25ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2025–26 ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| 1 | ಬಡ್ಡಿ | 15,00,00,000 | 15,97,02,078 | 97,02,078 | 17,00,00,000 | 17,50,00,000 |
| 2 | ಸಿಬ್ಬಂದಿ ವೆಚ್ಚ, ಭವಿಷ್ಯ ನಿಧಿ ಆಡಳಿತ ವೆಚ್ಚ ಮತ್ತು ಗ್ರೂಪ್ ಗ್ರಾಚ್ಯುಯಿಟಿ | 8,77,50,000 | 8,05,77,011 | 0 | 10,00,00,000 | 10,50,00,000 |
| 3 | ಕಾವಲು ಮತ್ತು ಭದ್ರತೆ | 1,35,00,000 | 1,34,44,302 | 0 | 1,35,00,000 | 1,40,00,000 |
| 4 | ಸಿಬ್ಬಂದಿ ಪ್ರಯಾಣ ಭತ್ಯೆ | 2,00,000 | 1,17,715 | 0 | 1,50,000 | 1,75,000 |
| 5 | ಸಿಬ್ಬಂದಿ ತರಬೇತಿಗಾಗಿ | 3,00,000 | – | 0 | 3,00,000 | 5,00,000 |
| 6 | ಸದಸ್ಯರ ತರಬೇತಿಗಾಗಿ | – | – | – | 15,00,000 | 15,00,000 |
| 7 | ಸಂಘದ ಸಿಬ್ಬಂದಿಗಳ ಅಧ್ಯಯನ ಪ್ರವಾಸಕ್ಕಾಗಿ | 5,00,000 | – | – | 3,00,000 | 5,00,000 |
| 8 | ಸಂಘದ ನಿರ್ದೇಶಕರ ಅಧ್ಯಯನ ಪ್ರವಾಸಕ್ಕಾಗಿ | 12,00,000 | 11,45,076 | – | 14,00,000 | 15,00,000 |
| 9 | ನಿರ್ದೇಶಕರ ಪ್ರಯಾಣ ಭತ್ಯೆ | 25,00,000 | 39,73,916 | 14,73,916 | 42,00,000 | 45,00,000 |
| 10 | ಮುದ್ರಣ ಸಾಮಾಗ್ರಿ & ಡೈರಿ | 30,00,000 | 36,17,814 | 6,17,814 | 40,00,000 | 42,00,000 |
| 11 | ಅಂಚೆ ಮತ್ತು ದೂರವಾಣಿ | 15,00,000 | 10,90,950 | – | 12,00,000 | 15,00,000 |
| 12 | ಜಾಹಿರಾತು ಮತ್ತು ಪ್ರಚಾರ ಹಾಗೂ ಸದಸ್ಯರ ಅಡಿಕೆ ಮಾರಾಟದ ಮೇಲಿನ ಬೋನಸ್ | 13,00,000 | 15,60,338 | 2,60,338 | 15,00,000 | 18,00,000 |
| 13 | ಕಟ್ಟಡ ದುರಸ್ತಿ | 25,00,000 | 25,63,394 | 63,394 | 40,00,000 | 60,00,000 |
| 14 | ವಿದ್ಯುಚ್ಛಕ್ತಿ | 15,00,000 | 16,90,967 | 1,90,967 | 18,00,000 | 20,00,000 |
| 15 | ವಿಮಾ ಖರ್ಚು | 25,00,000 | 55,60,564 | 30,60,564 | 60,00,000 | 65,00,000 |
| 16 | ಅತಿಥಿ ಗೃಹದ ನಿರ್ವಹಣೆ | 50,000 | 9,545 | – | 25,000 | 25,000 |
| 17 | ಸ್ಥಿರಾಸ್ತಿ ನಿರ್ವಹಣೆ | 5,00,000 | 1,17,435 | – | 2,50,000 | 3,00,000 |
| 18 | ಚರಾಸ್ತಿಗಳ ನಿರ್ವಹಣೆ | 6,00,000 | 7,06,993 | 1,06,993 | 8,50,000 | 10,00,000 |
| 19 | ಕಂಪ್ಯೂಟರ್ & ತಂತ್ರಾಂಶ ನಿರ್ವಹಣೆ | 15,00,000 | 18,12,452 | 3,12,452 | 22,00,000 | 25,00,000 |
| 20 | ಉದ್ಯಾನವನ | 50,000 | 52,830 | 2,830 | 55,000 | 55,000 |
| 21 | ಪ್ಲಾಂಟೇಶನ್ ಖರ್ಚು | 30,000 | – | – | 30,000 | 30,000 |
| 22 | ತೆರಿಗೆಗಳು (ಮನೆ ಕಂದಾಯ) | 28,00,000 | 25,08,203 | – | 27,00,000 | 28,00,000 |
| 23 | ಲೈಸೆನ್ಸ್ ಫೀ | 1,00,000 | 61,095 | – | 1,00,000 | 1,00,000 |
| 24 | ಪ್ರೊಫೆಷನಲ್ ಫೀ (ವೃತ್ತಿ ಶುಲ್ಕ) | 10,00,000 | 7,72,500 | – | 10,00,000 | 10,00,000 |
| 25 | ಕಾನೂನು ಸಲಹೆ | 2,00,000 | 6,70,025 | 4,70,025 | 30,00,000 | 20,00,000 |
| 26 | ವಾರ್ಷಿಕ ಮಹಾಸಭೆ | 30,00,000 | 35,25,646 | 5,25,646 | 38,00,000 | 40,00,000 |
| 27 | ಸಭೆಗಳು | 15,00,000 | 15,13,787 | 13,787 | 18,00,000 | 18,00,000 |
| 28 | ಲೆಕ್ಕಪರಿಶೋಧನಾ ವೆಚ್ಚ | 10,00,000 | 10,00,000 | – | 10,00,000 | 10,00,000 |

| | | | | | | |
|---|---|---|---|---|---|---|
| 29 | ಆಡಳಿತ ವೆಚ್ಚ | 50,50,000 | 69,58,852 | 19,08,852 | 75,00,000 | 78,00,000 |
| 30 | ಪತ್ರಿಕಾ ಚಂದಾ | 1,50,000 | 1,17,718 | – | 1,50,000 | 1,50,000 |
| 31 | ಬ್ಯಾಂಕ್ ಖರ್ಚು | 5,00,000 | 3,19,000 | – | 4,00,000 | 5,00,000 |
| 32 | ವಾಹನ ನಿರ್ವಹಣೆ + ಇಂಧನ | 20,00,000 | 19,47,516 | – | 25,00,000 | 25,00,000 |
| 33 | ಸಾಲ ವಸೂಲಾತಿ ಖರ್ಚು | 2,00,000 | 1,39,230 | – | 2,50,000 | 2,50,000 |
| 34 | ಧನಲಕ್ಷ್ಮೀ ಪೂಜೆ | 50,000 | 73,542 | 23,542 | 75,000 | 80,000 |
| 35 | ಇತರೆ ಖರ್ಚುಗಳು | 1,00,000 | – | – | 1,00,000 | 1,00,000 |
| 36 | ಸಿಬ್ಬಂದಿ ಮೆಡಿ ಕ್ಲೈಮ್ | 10,00,000 | 14,22,501 | 4,22,501 | 20,00,000 | 20,00,000 |
| 37 | ದೇಣಿಗೆ | 7,00,000 | 6,50,000 | – | 8,00,000 | 10,00,000 |
| 38 | ದಾವಾ ಫೀ | 50,000 | 1,62,025 | 1,12,025 | 2,00,000 | 2,25,000 |
| 39 | ಚುನಾವಣಾ ವೆಚ್ಚ | – | – | – | 50,00,000 | – |
| 40 | ಸಾಕ್ಷ್ಯ ಚಿತ್ರ ನಿರ್ಮಾಣ ವೆಚ್ಚ | – | – | – | 15,00,000 | – |
| | **ಒಟ್ಟು ರೂ.** | **29,03,80,000** | **29,95,85,020** | **1,92,67,724** | **34,71,35,000** | **35,58,90,000** |

| | 2024–25 | 2025–26 |
|---|---|---|
| ಅಂದಾಜು ಆದಾಯ | 40,68,00,000 | 42,46,00,000 |
| ಅಂದಾಜು ಇತರೆ ವೆಚ್ಚ | 34,71,35,000 | 35,58,90,000 |
| **ಅಂದಾಜು ಲಾಭ** | **5,96,65,000** | **6,87,10,000** |

**2023–24ನೇ ಸಾಲಿಗೆ ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ ಅಂದಾಜು ಮಾಡಿದ ಬಜೆಟ್ ಹಾಗೂ ವೆಚ್ಚದ ವಿವರ 2024–25 ಮತ್ತು 2025–26ನೇ ಸಾಲುಗಳಿಗೆ ಅಂದಾಜು ಮಾಡಲಾದ ಬಜೆಟ್ ವಿವರ**

| ಕ್ರ. ಸಂ. | ವಿವರ | 2023–24ನೇ ಸಾಲಿಗೆ ಅಂದಾಜು ಮಾಡಿರುವುದು | 2023–24ನೇ ಸಾಲಿಗೆ ಖರ್ಚು ಮಾಡಿರುವುದು | 2023–24 ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು | 2024–25ನೇ ಸಾಲಿಗೆ ಅಂದಾಜು ಮಾಡಿರುವುದು (ಪರಿಷ್ಕೃತ) | 2025–26 ನೇ ಸಾಲಿಗೆ ಅಂದಾಜು ಮಾಡಿರುವುದು |
|---|---|---|---|---|---|---|
| 1 | ಗಣಕಯಂತ್ರ ಖರೀದಿಗೆ+ ಯು.ಪಿ.ಎಸ್. | 30,00,000 | 32,48,356 | 2,48,356 | 35,00,000 | 35,00,000 |
| 2 | ಪೀಠೋಪಕರಣ ಖರೀದಿಗೆ | 10,00,000 | 38,33,320 | 28,33,320 | 50,00,000 | 50,00,000 |
| 3 | ಪುಸ್ತಕಗಳ ಖರೀದಿಗೆ (ಗ್ರಂಥಾಲಯ) | 20,000 | 0 | 0 | 20,000 | 20,000 |
| 4 | ಜನರೇಟರ್ ಖರೀದಿಗೆ | 10,00,000 | 0 | 0 | 10,00,000 | 15,00,000 |
| 5 | ತೂಕದ ಯಂತ್ರದ ಖರೀದಿಗೆ | 2,00,000 | 30,853 | 0 | 2,00,000 | 2,00,000 |
| 6 | ಜೆರಾಕ್ಸ್ ಮತ್ತು ಯಂತ್ರಗಳ ಖರೀದಿಗೆ | 30,00,000 | 57,119 | 0 | 15,00,000 | 15,00,000 |
| 7 | ಅಡಿಕೆ ಸಂಸ್ಕರಣಾ ಯಂತ್ರ | 30,00,000 | 0 | 0 | 50,00,000 | 60,00,000 |
| 8 | ನೋಟು ಎಣಿಕೆಯಂತ್ರ | 1,00,000 | 0 | 0 | 1,00,000 | 1,00,000 |
| 9 | ವಾಹನ | 40,00,000 | 38,51,611 | | 35,00,000 | 40,00,000 |
| 10 | ಸಿ.ಸಿ. ಟಿ.ವಿ./ ಬಯೋಮೆಟ್ರಿಕ್ | 5,00,000 | 6,46,203 | 1,46,203 | 10,00,000 | 15,00,000 |
| | **ಒಟ್ಟು** | **1,58,20,000** | **1,16,67,462** | **32,27,879** | **2,08,20,000** | **2,33,20,000** |

**ವಿಷಯ 09 : ಮುಂಬರುವ ಸಾಲಿಗಾಗಿ ಆಡಳಿತ ಮಂಡಲಿಯು ಸಿದ್ಧಪಡಿಸಿದ ಕರಡು ಕ್ರಿಯಾ ಯೋಜನೆಯನ್ನು ಅನುಮೋದಿಸುವ ಕುರಿತು.**

**ನಿರ್ಣಯ** : ಈಗಾಗಲೇ ಸಂಘದ ಮಾನ್ಯ ಅಧ್ಯಕ್ಷರ ಭಾಷಣದಲ್ಲಿ ಮುಂಬರುವ ಸಾಲಿನ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿರುವುದನ್ನು ಗಮನಿಸಿ, ಸದರಿ ಕಾರ್ಯಕ್ರಮಗಳ ಜಾರಿಗೆ ಸಭೆಯು ಅನುಮೋದನೆ ನೀಡಿತು.

**ವಿಷಯ 10 : ಕಾರ್ಯಾಚರಣೆ ಕೊರತೆ ಏನಾದರೂ ಇದ್ದರೆ, ಅದರ ಪುನರವಲೋಕನ ಮತ್ತು ಅಂತಹ ಕೊರತೆಯನ್ನು ನೀಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತು.**

**ನಿರ್ಣಯ** : ಯಾವುದು ಇಲ್ಲದಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 11 : 2024-25ನೇ ಸಾಲಿನ ಸಂಘದ ಲೆಕ್ಕಪರಿಶೋಧನೆಗಾಗಿ ಸನ್ನದು ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಕುರಿತು.**

**ನಿರ್ಣಯ** : ದಿನಾಂಕ 06 ಆಗಸ್ಟ್ 2024 ರಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ 2024-25ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಮಧುಕರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರಿಂದ ಮಾಡಿಸುವ ಕುರಿತು ಸರ್ವ ಸದಸ್ಯರ ಸಭೆಗೆ ಶಿಫಾರಸು ಮಾಡಿರುವ ಅಂಶವನ್ನು ಉಪಾಧ್ಯಕ್ಷರು ಸಭೆಯ ಗಮನಕ್ಕೆ ತಂದಾಗ, ಈ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ.ಮಧುಕರ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರಿಂದ ಮಾಡಿಸಲು ಸಭೆಯು ಒಪ್ಪಿಗೆಯನ್ನು ನೀಡಿತು. ಹಾಗೇಯೇ, ಇವರಿಗೆ ನಿಯಮಾನುಸಾರ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 12 : ಸಂಘದ 2024-25ನೇ ಸಾಲಿನ ಆಂತರಿಕ ಲೆಕ್ಕಪರಿಶೋಧನೆಗೆ ಬಿ.ವಿ.ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರನ್ನು ನೇಮಕ ಮಾಡಿರುವುದನ್ನು ಅನುಮೋದಿಸುವ ಕುರಿತು.**

**ನಿರ್ಣಯ** : ದಿನಾಂಕ 30 ಮೇ 2024ರ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ಶ್ರೀ ಬಿ.ವಿ ರವೀಂದ್ರನಾಥ್, ಸನ್ನದು ಲೆಕ್ಕ ಪರಿಶೋಧಕರು, ಸಾಗರ ಇವರನ್ನು 2024-25 ನೇ ಸಾಲಿನ ಸಂಘದ ಆಂತರಿಕ ಲೆಕ್ಕಪರಿಶೋಧನೆಗೆ ನೇಮಕ ಮಾಡಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 13 : ಹಿಂದಿನ ಸಹಕಾರ ವರ್ಷದಲ್ಲಿ ಸದಸ್ಯರನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗೆಗಿನ ಸಂಕ್ಷಿಪ್ತ ವರದಿ ಕುರಿತು.**

**ನಿರ್ಣಯ** : ಈ ಕೆಳಕಂಡಂತೆ 2023-24ನೇ ಸಾಲಿಗೆ ಸೇರ್ಪಡೆಗೊಂಡ ಮತ್ತು ಸದಸ್ಯತ್ವ ವಾಪಾಸು ಪಡೆದ ವಿವರಗಳನ್ನು ಪರಿಶೀಲಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

| ತರಗತಿ | ವರ್ಷದ ಪ್ರಾರಂಭದಲ್ಲಿ | | ವರದಿ ಸಾಲಿನಲ್ಲಿ ಸೇರ್ಪಡೆ | | ಸಾಲಿನಲ್ಲಿ ವಾಪಸಾತಿ | | ವರ್ಷಾಂತ್ಯಕ್ಕೆ | |
|---|---|---|---|---|---|---|---|---|
| | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು | ಸದಸ್ಯರು | ಷೇರು ಮೊಬಲಗು |
| 'ಎ' | 29710 | 8,11,40,330 | 1772 | 80,13,800 | 344 | 15,38,880 | 31138 | 8,76,15,250 |
| 'ಸಿ' | 27 | 2,700 | | | – | – | 27 | 2,700 |

**ವಿಷಯ 14 : ಸಹಕಾರ ಸಂಘದ ಸಮಿತಿ ಸದಸ್ಯರ, ಪದಾಧಿಕಾರಿಗಳ ಮತ್ತು ನೌಕರರುಗಳ ವರ್ತನಾ ನೀತಿ ಸಂಹಿತೆಗಳನ್ನು ರಚಿಸುವ ಕುರಿತು.**

**ನಿರ್ಣಯ** : ಈ ಬಗೆಗೆ ಅಂಗೀಕೃತವಾದ ನಿಯಮಾವಳಿ ಜಾರಿಯಲ್ಲಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 15 :** **ಸಂಘದ ಸದಸ್ಯರು ಮತ್ತು ನಿರ್ದೇಶಕರಿಂದ ಸಂಘದ ಸೇವೆಗಳ ಬಳಕೆಯ ಬಗೆಗೆ ಪರಿಶೀಲನೆ.**

**ನಿರ್ಣಯ :** ಸಂಘದ ಆಡಳಿತ ಮಂಡಲಿ ನಿರ್ದೇಶಕರು ಸಂಘದ ಸೇವೆಯನ್ನು ಸಮರ್ಪಕವಾಗಿ ಬಳಸಿಕೊಂಡಿರುತ್ತಾರೆ. ಹಾಗೂ ವರದಿ ಸಾಲಿನಲ್ಲಿ ಸಂಘದ ಬೈಲಾ ಅನ್ವಯ 65 ಕೆ.ಜಿ.ಗಿಂತ ಹೆಚ್ಚಿನ ಅಡಿಕೆ ಹಾಕಿದವರು 16820 ಸದಸ್ಯರು (ಶೇ.54.02) ಮತ್ತು 65 ಕೆ.ಜಿ.ಗಿಂತ ಕಡಿಮೆ ಅಡಿಕೆ ಹಾಕಿದವರು 303 ಸದಸ್ಯರು (ಶೇ.0.97)ಸಂಘದ ಸೇವೆಯನ್ನು ಬಳಸಿಕೊಂಡಿರುತ್ತಾರೆ. ಸಂಘಕ್ಕೆ ಅಡಿಕೆಯನ್ನೇ ಹಾಕದವರು 14015 ಸದಸ್ಯರು (ಶೇ.45.01) ಇರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 16 :** **ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ 17 :** **ಪದಾಧಿಕಾರಿಗಳೂ ಸೇರಿದಂತೆ ನಿರ್ದೇಶಕರಿಗೆ ಅವರ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಅಥವಾ ಸಂಬಂಧಪಟ್ಟ ಸಭೆಗಳಲ್ಲಿ ಅವರು ಹಾಜರಾದುದಕ್ಕೆ ಸಂಬಂಧಿಸಿ ಅವರಿಗೆ ಸಂದಾಯ ಮಾಡಿದ ಸಂಭಾವನೆ, ಪ್ರಯಾಣ ಭತ್ಯೆ, ದಿನ ಭತ್ಯೆ ಮತ್ತು ಇತರ ಭತ್ಯೆಗಳ ಪರಿಶೀಲನೆ ಕುರಿತು.**

**ನಿರ್ಣಯ :** 2023–24ನೇ ಸಾಲಿನಲ್ಲಿ, ಅಂದರೆ ದಿನಾಂಕ: 01 ಏಪ್ರಿಲ್ 2023 ರಿಂದ 31 ಮಾರ್ಚ್ 2024ರವರೆಗೆ ಒಟ್ಟು 13 ಆಡಳಿತ ಮಂಡಳಿ ಸಭೆ, 12 ಕಾರ್ಯನಿರ್ವಾಹಕ ಸಮಿತಿ ಸಭೆ, 10 ಲೆಕ್ಕಪರಿಶೋಧನೆ ಮತ್ತು ಹಣಕಾಸು ಸಮಿತಿ ಸಭೆ, 10 ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ ಹಾಗೂ ಅಡಿಕೆ ಖರೀದಿ ವ್ಯವಹಾರ ಸಮಿತಿಯ 11 ಸಭೆಗಳು ಸೇರಿ ಒಟ್ಟು 56 ಸಭೆಗಳು ನಡೆದಿರುವುದನ್ನು ಗಮನಿಸಿ, ಇದಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ ನಿರ್ದೇಶಕರಿಗೆ ನಿಯಮಾನುಸಾರ ಒಟ್ಟು ರೂ.39,73,916/– ರಷ್ಟು ಭತ್ಯೆ ಪಾವತಿಸಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 18 :** **ಉಪವಿಧಿಗೆ ಅಗತ್ಯವಾದ ತಿದ್ದುಪಡಿಗಳ ಕುರಿತು.**

**ನಿರ್ಣಯ :** ಉಪವಿಧಿಗೆ ಅಗತ್ಯವಾದ ತಿದ್ದುಪಡಿಗಳ ಕುರಿತಂತೆ ಯಾವುದೂ ಪ್ರಸ್ತಾವನೆ ಇಲ್ಲದಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು.

**ವಿಷಯ19 :** **ಯಾವುದೇ ಪೂರಕ ಸಂಸ್ಥೆಯೇನಾದರೂ ಇದ್ದರೆ, ಅವುಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳನ್ನು ಪುನರವಲೋಕಿಸುವ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 20 :** **ಯಾವುದೇ ಇತರ ಸಹಕಾರ ಸಂಘಗಳಲ್ಲಿ ಆ ಸಂಘದ ಸದಸ್ಯತ್ವವನ್ನು ಅನುಮೋದಿಸುವ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 21 :** **ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕನ ಸಂಬಂಧಿಗಳನ್ನು ನೇಮಕ ಮಾಡಿಕೊಂಡಿರುವಲ್ಲಿ ಆ ನೌಕರರ ಪಟ್ಟಿಯ ಪರಿಗಣನೆ ಕುರಿತು.**

**ನಿರ್ಣಯ :** ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 22 : ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ತೀರ್ಮಾನದ ಕುರಿತು.**

ನಿರ್ಣಯ : ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 23 : ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ನಿರ್ದಿಷ್ಟ ಮೀಸಲು ಮತ್ತು ಇತರ ನಿಧಿಗಳ ಸೃಜನೆ ಕುರಿತು.**

ನಿರ್ಣಯ : ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 24 : ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಸ್ವಇಚ್ಛಾ ಸಂಯೋಜನೆ, ವಿಭಜನೆ, ವರ್ಗಾವಣೆ ಕುರಿತು.**

ನಿರ್ಣಯ : ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 25 : ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ಪರಿಶೀಲನೆ ಕುರಿತು.**

ನಿರ್ಣಯ : ದಿನಾಂಕ:31–03–2015ಕ್ಕೆ ಮೀಸಲು ನಿಧಿಯಲ್ಲಿ ರೂ.14.55 ಕೋಟಿಗಳಿದ್ದು, ದಿನಾಂಕ:23–12–2015ರಂದು ಸಹಕಾರ ಸಂಘಗಳ ನಿಬಂಧಕರಿಂದ ರೂ.10.97 ಕೋಟಿಗಳನ್ನು ಕಟ್ಟಡ ಕಾಮಗಾರಿಗೆ ವಿನಿಯೋಗಿಸಲು ಅನುಮತಿ ಪಡೆದು, ಅದರಂತೆ ಖರ್ಚು ಬರೆದು ಕಟ್ಟಡ ನಿಧಿಗೆ ವರ್ಗಾಯಿಸಿರುವುದನ್ನು ಮತ್ತು ದಿನಾಂಕ 31 ಮಾರ್ಚ್ 2024ರ ಅಂತ್ಯಕ್ಕೆ ರೂ.20.00 ಲಕ್ಷಗಳನ್ನು ಪುನಃಭರಣ ಮಾಡಿರುವುದನ್ನು ಸಭೆಯು ಅವಗಾಹನೆಗೆ ತೆಗೆದುಕೊಂಡಿತು. ಹಾಗೂ ಉಳಿದ ಮೊಬಲಗು ರೂ.2.97 ಕೋಟಿಗಳನ್ನು ಮುಂದಿನ ಸಾಲುಗಳಲ್ಲಿ ಪುನಃಭರಣ ಮಾಡಲಾಗುವುದಾಗಿ ಮತ್ತು ಇತರೆ ನಿಧಿಗಳ ಸಾಂಪತ್ತಿಕ ವಿವರಗಳನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ 26 : ಸಂಘಕ್ಕೆ ಹೊರಗಿನಿಂದ ತರತಕ್ಕ ಸಾಲ ಹಾಗೂ ಠೇವಣಿ ಸಂಗ್ರಹದ ಬಗೆಗೆ ಮಿತಿ ನಿರ್ಧರಿಸುವ ಕುರಿತು.**

ನಿರ್ಣಯ : ಸಂಘದ ಬೈಲಾ ಸಂಖ್ಯೆ:9ರ ಅನ್ವಯ ಸಾಮಾನ್ಯ ನಿಕಾಯವು ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮೊತ್ತವನ್ನು ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತವನ್ನು ನಿಗದಿಪಡಿಸಬೇಕಿರುವುದನ್ನು ಹಾಗೂ ಈ ಬಗೆಗೆ ಆಡಳಿತ ಮಂಡಳಿಯವರು ನೀಡಿದ ಟಿಪ್ಪಣಿಯನ್ನು ಪರಿಶೀಲಿಸಿ, 2023–24ನೇ ಸಾಲಿಗೆ ಈ ಠೇವಣಿ ಮೊತ್ತವನ್ನು ರೂ.300.00 ಕೋಟಿಗಳಿಗೆ ಮತ್ತು ಸಾಲದ ಮೊತ್ತವನ್ನು ರೂ.250.00ಕೋಟಿಗಳಿಗೆ ನಿಗದಿಪಡಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 27 : ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ, ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ ಕುರಿತು.**

ನಿರ್ಣಯ : ಅಂತಹ ಪ್ರಕರಣಗಳು ಯಾವುದೂ ಇಲ್ಲದಿರುವುದನ್ನು ಗಮನಿಸಲಾಯಿತು.

**ವಿಷಯ 28 : ಸಂಘದಲ್ಲಿ ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಿರುವ ಕುರಿತು.**

ನಿರ್ಣಯ : ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರು ತಮ್ಮ ಆದೇಶ ಸಂಖ್ಯೆ: ಆರ್‌ಸಿಎಸ್/ಎಂಕೆಟಿ–1/50/2024–25 ದಿನಾಂಕ:27–06–2024ರಲ್ಲಿ ಮಾಮ್‌ಕೋಸ್ ಸಂಸ್ಥೆಯಲ್ಲಿ ದಿನಾಂಕ:31–03–2020 ಅಥವಾ ಅದಕ್ಕಿಂತ ಹಿಂದೆ ಸಾಲ ಪಡೆದು ಸುಸ್ತಿಯಾದ 359 ಸದಸ್ಯರಿಂದ ಮಾತ್ರ ಸಾಲ ಪಡೆದ ದಿನಾಂಕದಿಂದ ಸಾಲ ಮರು ಪಾವತಿ ದಿನಾಂಕದವರೆಗೆ ಶೇ.7ರ ಬಡ್ಡಿ ದರದಲ್ಲಿ ಅಸಲು ಸಹಿತ ಪೂರ್ಣ ಸಾಲವನ್ನು ನಿಗದಿತ ಅವಧಿಯಲ್ಲಿ ಏಕಗಂಟಿನಲ್ಲಿ ಜಮಾ ಮಾಡಿಕೊಳ್ಳಲು ಏಕಕಾಲಿಕ ಸಾಲ ತೀರುವಳಿ ಯೋಜನೆಯನ್ನು ಜಾರಿಗೊಳಿಸಲು ಷರತ್ತುಗಳಿಗೊಳಪಟ್ಟು ಅನುಮತಿ ನೀಡಿರುವುದನ್ನು ಸಭೆಯ ಗಮನಕ್ಕೆ ಮಾನ್ಯ ಉಪಾಧ್ಯಕ್ಷರು

ತಂದರು. ಹಾಗೆಯೇ, ಅದರಂತೆ ಸಂಬಂಧಿಸಿದ ಸದಸ್ಯರು ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಿದರು. ಮಾನ್ಯ ಉಪಾಧ್ಯಕ್ಷರು ಸಂಘದಲ್ಲಿ ಜಾರಿಯಲ್ಲಿದ್ದ ಏಕಕಾಲಿಕ ಸಾಲ ತೀರುವಳಿ ಯೋಜನೆಯು 2024ರ ಡಿಸೆಂಬರ್ ಅಂತ್ಯಕ್ಕೆ ಮುಕ್ತಾಯಗೊಳ್ಳುತ್ತಿದ್ದು, ಹಲವು ರೈತರ ಹಾಗೂ ವರ್ತಕರ ಪ್ರಕರಣಗಳು ಇತ್ಯರ್ಥವಾಗದೆ ಮುಂದುವರೆದಲ್ಲಿ ಎಂದು ಪ್ರಸ್ತಾಪಿಸಿದಾಗ, ಶ್ರೀ ಪ್ರಸನ್ನಕುಮಾರ್ ಎ. ಆರ್ ಇವರು ಇಂತಹ ಪ್ರಕರಣಗಳಲ್ಲಿ ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ಅಲ್ಲಿನ ಸಂದರ್ಭಕ್ಕನುಗುಣವಾಗಿ ಅವುಗಳನ್ನು ಇತ್ಯರ್ಥಪಡಿಸಿ, ಖೈದುಗೊಳಿಸುವುದು ಸೂಕ್ತವೆಂದು ಸಲಹೆ ಮಾಡಿದರು. ಕ್ಲಿಷ್ಟಕರವಾಗಿ ಮುಂದುವರೆಯುತ್ತಿರುವ ಇಂತಹ ಎಲ್ಲಾ ಪ್ರಕರಣಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ, ಇವುಗಳನ್ನು ಆದಷ್ಟು ಶೀಘ್ರವಾಗಿ ಖೈದುಗೊಳಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು.

ದೀರ್ಘ ಚರ್ಚೆಯ ನಂತರ ಸದಸ್ಯ ರೈತರ ಹಾಗೂ ವರ್ತಕರ ಪ್ರತಿಯೊಂದು ಪ್ರಕರಣಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಪ್ರತಿಯೊಂದು ಪ್ರಕರಣದಲ್ಲಿನ ಪರಿಸ್ಥಿತಿಯನ್ನು, ವಸ್ತುಸ್ಥಿತಿಯನ್ನು ಗಮನದಲ್ಲಿಟ್ಟು ಪೂರ್ಣ/ಭಾಗಶಃ ಬಡ್ಡಿಯನ್ನು ಕೈಬಿಡುವ, ಭಾಗಶಃ ಅಸಲು/ಪೂರ್ಣ ಅಸಲು ಹಾಗೂ ಬಡ್ಡಿ ಕೈಬಿಡುವ ಮೂಲಕ ಹಾಗೂ ಅಸಲನ್ನು ಕೈಬಿಡಬೇಕಾದ ಸಂದರ್ಭದಲ್ಲಿ ಸದರಿ ಮೊಬಲಗನ್ನು ಹೋಕುಬಾಕು ನಿಧಿಗೆ ಖರ್ಚುಹಾಕಿ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಅವಶ್ಯಕ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಆಡಳಿತ ಮಂಡಲಿಗೆ ಸಂಪೂರ್ಣ ಅಧಿಕಾರ ನೀಡಲು ಸರ್ವಾನುಮತದಿಂದ ನಿರ್ಣಯಿಸಿತು.

**ವಿಷಯ 29 :** **ಸಂಘದ ಸದಸ್ಯರಿಂದ ಬಂದಿರುವ ಪತ್ರಗಳ ಕುರಿತು.**

**ನಿರ್ಣಯ :** ಸಂಘದ ಸದಸ್ಯರುಗಳು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಲು ಬಯಸಿ, ಕಳುಹಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಂದರ್ಭದಲ್ಲಿ ಹಾಜರಿದ್ದ ಸದಸ್ಯರು ಕಳುಹಿಸಿದ ವಿಷಯಗಳ ಕುರಿತು ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

******

| ಕ್ರ.ಸಂ | ಸದಸ್ಯರ ಹೆಸರು & ವಿಳಾಸ | ವಿಷಯ | ಆಡಳಿತ ಮಂಡಲಿ ಉತ್ತರ |
|---|---|---|---|
| 1 | **ಶ್ರೀ ಕೆ.ಸಿ.ದಿನೇಶ್ ಬಿನ್ ಚೂಡಪ್ಪ ಗೌಡ, ಕಡ್ತೂರು, ತೀರ್ಥಹಳ್ಳಿ ತಾಲ್ಲೂಕು, ಷೇರು ಸಂಖ್ಯೆ: 16908** | 1. ಆಡಳಿತ ಮಂಡಲಿ ಚುನಾವಣೆಗೆ ತಾಲ್ಲೂಕುವಾರು ಷೇರುದಾರರ ಸಂಖ್ಯೆ ಅನುಗುಣವಾಗಿ ಆಡಳಿತ ಮಂಡಲಿಯ ನಿರ್ದೇಶಕರನ್ನು ಆಯ್ಕೆ ಮಾಡಬೇಕು. ಪ್ರಸ್ತುತ ನಿರ್ದೇಶಕರನ್ನು ಆಯ್ಕೆ ಮಾಡುವ ಪದ್ಧತಿ ಸಂಪೂರ್ಣ ಅಪ್ರಸ್ತುತವಾಗಿದ್ದು, ಈ ಪದ್ಧತಿಯನ್ನು ಬದಲಾಯಿಸಿ ಮತದಾನ ಮಾಡುವ ಹಕ್ಕನ್ನು ಆ ತಾಲ್ಲೂಕಿನ ಷೇರುದಾರರಿಗೆ ಕೊಡುವ ಬಗ್ಗೆ.<br>2. ವ್ಯಾಪಕವಾಗಿ ಹರಡಿರುವ ಕೊಳೆರೋಗದಿಂದ ಹಾನಿಯಾಗಿರುವ ಷೇರುದಾರರಿಗೆ ವಿಶೇಷವಾಗಿ ಆರ್ಥಿಕ ನೆರವು ನೀಡುವ ಬಗ್ಗೆ.<br>3. ಹಾಲಿ ಇನ್ಸೂರೆನ್ಸ್‌ನಿಂದ ಆಗಿರುವ ಅನಾನುಕೂಲ<br>4. ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾಬ್ಯಾಸ ಮಾಡಲು ಹಾಲಿ ನೌಕರರ ವರ್ಗದ ಮಕ್ಕಳಿಗೆ ಬಡ್ಡಿ ರಹಿತ ಸಾಲ ನೀಡುವ ಕುರಿತು.<br>5. ಎಲ್ಲಾ ಮಾಮ್‌ಕೋಸ್ ಶಾಖೆಗಳಲ್ಲಿ ರೈತರ ಓಡಾಟಕ್ಕಾಗಿ ಲಿಫ್ಟ್ ಸೌಕರ್ಯ ಒದಗಿಸುವ ಬಗ್ಗೆ | 1. ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯದಂತೆ ಸಹಕಾರ ಸಂಘಗಳ ಅಪರ ನಿಬಂಧಕರಿಂದ ನೋಂದಾಯಿತವಾದ ಉಪವಿಧಿಯನ್ವಯ ಚುನಾವಣೆ ನಡೆಸಲಾಗುವುದು.<br>2. ಸಂಘದ ನಿಯಮಗಳನ್ವಯ ಇದಕ್ಕೆ ಅವಕಾಶ ಇರುವುದಿಲ್ಲ. ಆದರೆ ಸರ್ಕಾರದ ವತಿಯಿಂದ ಆರ್ಥಿಕ ಸಹಾಯ ನೀಡಲು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲು ಕ್ರಮವಿಡಲಾಗುವುದು.<br>3. ಹಾಲಿ ಇನ್ಸೂರೆನ್ಸ್‌ನಿಂದ ಆಗುತ್ತಿರುವ ಅನಾನೂಕೂಲತೆ ಕುರಿತು ನಿಖರವಾಗಿ ತಿಳಿಸಿದಲ್ಲಿ ಅಗತ್ಯ ವಿವರವನ್ನು ಒದಗಿಸಲು ಕ್ರಮವಿಡಲಾಗುವುದು.<br>4. ಸಂಘದ ನೌಕರರ ಮಕ್ಕಳ ವೃತ್ತಿಪರ ಕೋರ್ಸ್‌ಗಳಿಗೆ ಮುಂಗಡ ನೀಡಲು ಅವಕಾಶವಿದ್ದು, ಸಾಧಕ-ಬಾಧಕ ಪರಿಶೀಲಿಸಿ, ಸಂಘದ ಸಿಬ್ಬಂದಿ ಸೇವಾನಿಯಮದನ್ವಯ ಕ್ರಮವಿಡಲಾಗುವುದು.<br>5. ಅವಶ್ಯವಿರುವ ಶಾಖೆಗಳಲ್ಲಿ ರೈತರ ಓಡಾಟಕ್ಕೆ ಲಿಫ್ಟ್ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುವುದು. |
| 2 | **ಶ್ರೀ ರಂಗನಾಥ ಎ.ಪಿ. ಸಸರವಳ್ಳಿ ಸಾಗರ ತಾಲ್ಲೂಕು, ಷೇರು ಸಂಖ್ಯೆ:19340** | ಸಂಘದ ಆರೋಗ್ಯ ವಿಮಾ ಯೋಜನೆ ಅಡಿಯಲ್ಲಿ ನೋಂದಣಿ ಮಾಡಿಸಿಕೊಂಡಿದ್ದು, ಆರೋಗ್ಯ ಚಿಕಿತ್ಸೆ ಮಾಡಿಸಿಕೊಂಡು ಸಂಪೂರ್ಣ ದಾಖಲೆಗಳನ್ನು ಸಂಘಕ್ಕೆ ನೀಡಿದ್ದರೂ ವಿಮಾ ಮೊತ್ತ ಇದುವರೆಗೂ ಬಾರದೇ ಇರುವುದರಿಂದ ಸಂಘದಿಂದ ವಿಮಾ ಮೊಬಲಗನ್ನು ನೀಡುವ ಕುರಿತು. | ಪ್ರಸ್ತುತ ಪ್ರಕರಣವು ನ್ಯಾಯಾಲಯದಲ್ಲಿದ್ದು, ನ್ಯಾಯಾಲಯದ ಆದೇಶದಂತೆ ಕ್ರಮವಿಡಲಾಗುವುದು. |
| 3 | **ಶ್ರೀ ಎಂ.ಎ.ನವೀನ್ ಹೆಗ್ಡೆ ಬಿನ್ ಟಿ.ಅಣ್ಣಯ್ಯ ಹೆಗ್ಡೆ, ಕರುಣಾಪುರ, ತೀರ್ಥಹಳ್ಳಿ ತಾಲ್ಲೂಕು, ಷೇರು ಸಂಖ್ಯೆ: 25185** | 1. ಎಲೆಚುಕ್ಕಿ ರೋಗಕ್ಕೆ ಖಾಸಗಿ ವಿಜ್ಞಾನಿಗಳ ಸಲಹೆಯಂತೆ ಔಷಧಿಗಳನ್ನು ಸಿಂಪಡಿಸಿದ್ದರಿಂದ ರೋಗ ನಿಯಂತ್ರಣಕ್ಕೆ ಬಂದಿರುತ್ತದೆ, ಈ ಬಗ್ಗೆ ಕಳೆದ ಬಾರಿ ತಿಳಿಸಲಾಗಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ವೈಯಕ್ತಿಕವಾಗಿ ವಿಜ್ಞಾನಿಗಳನ್ನು ಭೇಟಿ ಮಾಡಲು ಆಸಕ್ತಿಪಟ್ಟಿದ್ದರು. ಆದರೆ ವರ್ಗಾವಣೆಯಾದ್ದರಿಂದ | 1. ಎಲೆಚುಕ್ಕಿ ರೋಗಕ್ಕೆ ಖಾಸಗಿ ವಿಜ್ಞಾನಿಗಳ ಸಲಹೆಯಂತೆ ಔಷಧಿಗಳನ್ನು ಸಿಂಪಡಿಸಿದ್ದರಿಂದ ರೋಗ ನಿಯಂತ್ರಣಕ್ಕೆ ಬಂದಿರುವುದು ರೈತರಲ್ಲಿ ಹೊಸ ಭರವಸೆ ಮೂಡಿಸಿದೆ. ಈ ಕುರಿತು ತಮ್ಮನ್ನು ಸಂಪರ್ಕಿಸಿಕೊಂಡು ಕೃಷಿ ವಿಜ್ಞಾನಿಗಳ ಸಲಹೆಯನ್ನು ಪಡೆದುಕೊಂಡು ಅಗತ್ಯ ಕ್ರಮವಿಡಲಾಗುವುದು. |

| | | | |
|---|---|---|---|
| | | ಈ ಎಲೆಚುಕ್ಕೆ ರೋಗದ ವಿಷಯವು ನೆನೆಗುದಿಗೆ ಬಿದ್ದಿರುತ್ತದೆ.<br>2. ಎಲೆಚುಕ್ಕೆ ರೋಗ ಭಾದಿತ ರೈತರ ಅಡಿಕೆ ತೋಟಗಳಿಗೆ ಭೇಟಿಕೊಟ್ಟ ವಿವರಗಳನ್ನು ನಡವಳಿಯಲ್ಲಿ ನಮೂದಿಸಿರುವುದಿಲ್ಲ.<br>3. ದಿನಾಂಕ:7.09.2024ರ ಪ್ರಜಾವಾಣಿ ಪತ್ರಿಕೆಯಲ್ಲಿ ಅಡಿಕೆಗೆ ಎಲೆ ಚುಕ್ಕೆ ರೋಗ ಪ್ರಸ್ತಾವ ಸಲ್ಲಿಸಿ ವರ್ಷವಾಯಿತು ಇನ್ನೂ ನಿರ್ಧಾರವಾಗದ ನಿರ್ವಹಣಾ ನಿಧಿ ಪಾಲು ಪ್ರಕಟವಾಗಿರುತ್ತದೆ. ಈ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ಸಿಕ್ಕಿದ್ದು, ಆದರೆ ರಾಜ್ಯ ಸರ್ಕಾರದ ಕೊಡುಗೆ ನಿರ್ಧಾರವಾಗಿರುವುದಿಲ್ಲ. ಆದ್ದರಿಂದ ಕೃಷಿಕರ ನಿಯೋಗದೊಂದಿಗೆ ರಾಜ್ಯ ಕೃಷಿ ಸಚಿವರನ್ನು ಭೇಟಿ ಮಾಡಿ ರಾಜ್ಯ ಸರ್ಕಾರದ ಕೊಡುಗೆ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು.<br>4. ರಸಗೊಬ್ಬರ ಕೀಟನಾಶಕ ಔಷಧಿಗಳನ್ನು ತಮ್ಮ ಸಂಸ್ಥೆಯಲ್ಲೇ ರೈತರಿಗೆ ಕಡಿಮೆ ಲಾಭಾಂಶವಿಟ್ಟು ವಿತರಣೆ ಮಾಡುವ ವಿಚಾರಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರ.<br>5. ಅಡಿಕೆಗೆ ಕಡಿಮೆ ಬೆಲೆ ಬಂದ ಕಾರಣದಿಂದ ಮೂಟೆಗಳನ್ನು ವಾಪಸ್ಸು ತೆಗೆದುಕೊಂಡು ಹೋಗಿ ಬೇರೆ ಕಡೆಗಳಲ್ಲಿ ಅಡಿಕೆಯನ್ನು ಮಾರಾಟ ಮಾಡಿರುತ್ತಾರೆ. ತೀರ್ಥಹಳ್ಳಿ ಶಾಖೆಯಿಂದ ಎಷ್ಟು ಮೂಟೆಗಳನ್ನು ವಾಪಸು ಪಡೆದಿರುತ್ತಾರೆ ಎಂದು ಮಾಹಿತಿ ಕೋರಿ.<br>6. ನಿರ್ದೇಶಕರು ಅಧ್ಯಯನ ಪ್ರವಾಸ ಕೈಗೊಂಡಿದ್ದಲ್ಲಿ ಅದರ ಅನುಭವಗಳನ್ನು ತಿಳಿಸಬೇಕಾಗಿ ವಿನಂತಿ.<br>7. ಅಡಿಕೆ ಗೊನೆ ಕೀಳುವಾಗ ಅಡಿಕೆ ಕಾಯಿಗಳು ಕೊನೆಗಾರನ ಕಣ್ಣಿನ ಮೇಲೆ ಬಿದ್ದು ಕೂಲಿ ಕಾರ್ಮಿಕರ ಕಣ್ಣಿಗೆ ಹಾನಿಯಾಗಿರುವುದು ತಿಳಿದುಬಂದಿರುತ್ತದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಅಡಿಕೆ ಕಾಯಿಯಿಂದ ಕಣ್ಣಿಗೆ ಹಾನಿಯಾದವರ ಪಟ್ಟಿಯನ್ನು ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆಯಿಂದ ತರಿಸಿಕೊಂಡು ಮಾಹಿತಿಯನ್ನು ನೀಡುವಂತೆ ಕೋರಿ. | 2. ಎಲೆಚುಕ್ಕಿ ಬಾಧಿತ ಆಗುಂಬೆ ಭಾಗದ & ನಗರ ಹೋಬಳಿಯ ಹಲವು ರೈತರ ತೋಟಗಳಿಗೆ ಬೇಟಿ ನೀಡಲಾಗಿದ್ದು, ರೈತರ ಹೆಸರನ್ನು ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿರುತ್ತದೆ.<br>3. ಎಲೆಚುಕ್ಕಿ ರೋಗಕ್ಕೆ ರಾಜ್ಯ ಸರ್ಕಾರದಿಂದ ನಿರ್ವಹಣಾ ನಿಧಿಯ ಪಾಲನ್ನು ನೀಡುವಂತೆ ಅಡಿಕೆ ಸಹಕಾರ ಸಂಘಗಳ ಮಹಾಮಂಡಲದ ನಿಯೋಗದ ಮೂಲಕ ರಾಜ್ಯ ಕೃಷಿ ಸಚಿವರನ್ನು ಭೇಟಿ ಮಾಡಿ ರಾಜ್ಯ ಸರ್ಕಾರದ ಕೊಡುಗೆ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಿಡಲಾಗುವುದು.<br>4. ಸದಸ್ಯರಿಗೆ ಅನುಕೂಲವಾಗುವಂತೆ ಇಫ್ಕೋ ಕಂಪನಿಯ ಡೀಲರ್‌ಶಿಪ್ ಪಡೆದು ಕರಗುವ ರಸಗೊಬ್ಬರವನ್ನು ಹಾಗೂ ಕೃಷಿಗೆ ಅವಶ್ಯವಿರುವ ಇನ್ನಿತರ ಉತ್ಪನ್ನಗಳನ್ನು ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ. ಹಾಗೆಯೇ, ಇನ್ನಿತರ ಕಂಪನಿಗಳ ಸಾವಯವ ಗೊಬ್ಬವನ್ನೂ ಸಹ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಲು ಉದ್ದೇಶಿಸಿದೆ.<br>5. 2024–25ನೇ ಸಾಲಿನಲ್ಲಿ ಆಗಸ್ಟ್ ಅಂತ್ಯಕ್ಕೆ 817 ಮೂಟೆಗಳನ್ನು ವಾಪಸ್ ಪಡೆದಿರುತ್ತಾರೆ.<br>6. 2024–25ನೇ ಸಾಲಿನಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿರುವುದಿಲ್ಲ.<br>7. ಅಂದಾಜು 10 ಜನರ ಕಣ್ಣಿಗೆ ಹಾನಿಯಾಗಿರುವುದಾಗಿ ಶಂಕರ ಆಸ್ಪತ್ರೆಯವರನ್ನು ತಿಳಿಸಿರುತ್ತಾರೆ.<br>8. ಈ ಕುರಿತು ಆಡಳಿತ ಮಂಡಲಿಯಲ್ಲಿ ನಿರ್ಧರಿಸಲಾಗುವುದು |

| | | | |
|---|---|---|---|
| | | 8. ಕ್ಯಾಂಪ್ಕೋ ಸಂಸ್ಥೆಯವರು 65 ಕೆ.ಜಿಗಿಂತ ಮೇಲ್ಪಟ್ಟು ಅಡಿಕೆಯನ್ನು ಹಾಕಿದರವರಿಗೆ ಸಬ್ಸಿಡಿ ದರದಲ್ಲಿ ಮೈಲುತುತ್ತವನ್ನು ನೀಡುತ್ತಿದ್ದಾರೆ. ಮಾಮ್‌ಕೊಸ್ ಸಂಸ್ಥೆಯಿಂದಲೂ ಸಹ ಈ ಸೌಲಭ್ಯವನ್ನು ಕಲ್ಪಿಸಿಕೊಡಬೇಕಾಗಿ ವಿನಂತಿ. | |
| 4 | **ಅನಂತಭಟ್ಟ ಕೆ ಪಿ ಬಿನ್ ಪರಮೇಶ್ವರ ಭಟ್ಟ, ಶುಂಠಿಹಕ್ಲು, ಹುರುಳಿ ಅಂಚೆ ತೀರ್ಥಹಳ್ಳಿ, ಷೇರುಸಂಖ್ಯೆ 18295** | 1. ತೀರ್ಥಹಳ್ಳಿ ಶಾಖೆಯಲ್ಲಿ ಅಡಿಕೆ ಮೂಟೆ ಹಾಕಲು ದೂರದ ಗೋದಾಮಿಗೆ ಹೋಗಬೇಕು. ನಂತರ ಶಾಖೆಗೆ ಬಂದು 'ಎ' ಬಿಲ್ ಹಾಕಿಸಬೇಕು. ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಗೋದಾಮಿನಲ್ಲೇ 'ಎ' ಬಿಲ್ ಮಾಡುವ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿ ವಿನಂತಿ.<br>2. ಆರೋಗ್ಯ ವಿಮಾ ಯೋಜನೆಯ ಪ್ರೀಮಿಯಂ ಮೊಬಲಗನ್ನು ಕಡಿಮೆ ಮಾಡಿದರೆ ಎಲ್ಲಾ ಸದಸ್ಯರಿಗೂ ವಿಮೆಯನ್ನು ಮಾಡಿಸಲು ಅನುಕೂಲವಾಗುತ್ತದೆ.<br>3. ಕೊಳೆರೋಗದ ಸಮಸ್ಯೆ ಹೆಚ್ಚಾಗಿರುವುದರಿಂದ ಸಹಾಯಧನ ದೊರಕಿಸಿಕೊಂಡುವಂತೆ ಕೋರಿ. | 1. ಗೋದಾಮಿನಲ್ಲೇ 'ಎ' ಬಿಲ್ ಮಾಡುವ ವ್ಯವಸ್ಥೆ ಕಲ್ಪಿಸುವ ಕುರಿತು ಪ್ರಾಯೋಗಿಕವಾಗಿ ಪರಿಶೀಲನೆ ನಡೆಸಲಾಗಿದ್ದು, ಶೀಘ್ರವಾಗಿ ಗೋದಾಮಿನಲ್ಲೇ 'ಎ' ಬಿಲ್ ಮಾಡುವ ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸಲಾಗುವುದು.<br>2. ಈ ಬಗ್ಗೆ ಹಲವಾರು ವಿಮಾ ಕಂಪನಿಯವರನ್ನು ಸಂಪರ್ಕಿಸಿದ್ದು, ಸಾಧ್ಯವಾದಷ್ಟು ಕಡಿಮೆ ವಂತಿಗೆಯಲ್ಲಿಯೇ ವಿಮೆ ಮಾಡಿಸಲು ಪ್ರಯತ್ನಿಸಲಾಗಿರುತ್ತದೆ.<br>3. ಕ್ರ.ಸಂ:04(2) ರಲ್ಲಿ ಉತ್ತರಿಸಿದೆ. |
| 5 | **ನಾಗರಾಜ ಹೆಚ್, ಹರತಾಳು ಅಂಚೆ** | 1. ಪವರ್ ಸ್ಪ್ರೇಯರ್, ಕಾರ್ಬನ್ ದೋಟಿಗಳಿಗೆ ಸಂಘದಿಂದ ಸಹಾಯಧನ ನೀಡುವುದು.<br>2. ಸದಸ್ಯರಿಗೆ ಶೇ.15ರಷ್ಟು ಲಾಭಾಂಶವನ್ನು ನೀಡುವುದು.<br>3. ಅಡಿಕೆಯ ಗುಣಮಟ್ಟದ ಬಗ್ಗೆ ರೈತರಿಗೆ ತಿಳಿವಳಿಕೆ ಕೊಡುವುದು. | 1. ಸಂಘದಲ್ಲಿರುವ ನಿಧಿಯ ಲಭ್ಯತೆಯನ್ನು ಆಧರಿಸಿ ಸಹಾಯಧನ ನೀಡುವ ಬಗ್ಗೆ ಪರಿಶೀಲಿಸಲಾಗುವುದು.<br>2. 2023–24ನೇ ಸಾಲಿನಲ್ಲಿ ಶೇ.10ರಷ್ಟು ಲಾಭಾಂಶ ನೀಡಲು ಉದ್ದೇಶಿಸಿದೆ. 2024–25ನೇ ಸಾಲಿನ ಲಾಭದ ಪ್ರಮಾಣವನ್ನು ಆಧರಿಸಿ ಲಾಭಾಂಶವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು.<br>3. ಸಂಘದ ಪ್ರತಿ ಶಾಖೆಯಲ್ಲಿಯೂ ಈ ಬಗ್ಗೆ ಸದಸ್ಯರಿಗೆ ತಿಳಿವಳಿಕೆ ನೀಡಲಾಗುತ್ತಿದೆ. |
| 6 | **ಶ್ರೀ ರಾಜೇಂದ್ರ ಪ್ರಸಾದ್ ಹೆಚ್.ವಿ. ಕಳಸ, ಷೇರು ಸಂಖ್ಯೆ: 37393 ಮತ್ತು ಇನ್ನಿತರ 27 ಸದಸ್ಯರು** | ಸರ್ವ ಸದಸ್ಯರ ಸಭೆಯಲ್ಲಿ ತಾಲ್ಲೂಕುವಾರು ಅಥವಾ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಏಕಸದಸ್ಯ ಮತಕ್ಷೇತ್ರವನ್ನು ರಚಿಸುವಂತೆ ಬೈಲಾ ತಿದ್ದುಪಡಿ ಕೋರಿ. | ಕ್ರ.ಸಂ:04(1) ರಲ್ಲಿ ಉತ್ತರಿಸಿದೆ |

| | | | |
|---|---|---|---|
| 7 | **ಎಂ ಸತೀಶ, ಹಿರಳೆಮರೂರು, ಷೇರು ಸಂಖ್ಯೆ 5517 ಮತ್ತು ಇನ್ನಿತರ 10 ಸದಸ್ಯರು** | 1. ಷೇರುದಾರರ ಸಭೆಯನ್ನು ನಡೆಸುವ ಕುರಿತು.<br>2. ಮಾಮ್ಕೋಸ್ ಸಂಸ್ಥೆಯು ಬಹುರಾಜ್ಯ ಕಾಯಿದೆಯನ್ನು ಅಳವಡಿಸುವ ಕುರಿತು. | 1. ಕ್ರ.ಸಂ:1(4)ರಲ್ಲಿ ಉತ್ತರಿಸಿದೆ.<br>2. ಈ ಕುರಿತು ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಸೂಕ್ತವೆನಿಸಿದಲ್ಲಿ ಮುಂದಿನ ದಿನಗಳಲ್ಲಿ ಸಾಮಾನ್ಯ ಸಭೆಗೆ ಸಂಘದ ಉಪವಿಧಿ ತಿದ್ದುಪಡಿ ಪ್ರಸ್ತಾವನೆ ಮಂಡಿಸಲಾಗುವುದು. |
| 8 | **ಶ್ರೀ ಕೆ.ವಿ.ಗೌಡ ಬಿನ್ ಬಂಗಾರಪ್ಪ ಗೌಡ, ಕಾಸರಗುಪ್ಪೆ ಗ್ರಾಮ, ಸೊರಬ ತಾಲ್ಲೂಕು, ಷೇರು ಸಂಖ್ಯೆ: 10316** | 1. ಸದರಿ ಸಂಸ್ಥೆಗೆ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸರ್ಕಾರದ ಅಧಿಕಾರಿಯನ್ನೇ ನೇಮಕ ಮಾಡಬೇಕು.<br>2. ನಮ್ಮ ಸಂಸ್ಥೆಯ ಸಿಬ್ಬಂದಿಗಳಿಗೆ ಸಮವಸ್ತ್ರ ವಿತರಿಸಬೇಕು.<br>3. ಈಗಾಗಲೇ ಡಿ.ಜಿ.ಎಂ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದು, ಈ ಹುದ್ದೆ ಸಂಸ್ಥೆಗೆ ಹೊರೆಯಾಗುವುದಿಲ್ಲವೇ ಹಾಗೂ ಸಂಸ್ಥೆಗೆ ಡಿ.ಜಿ.ಎಂ ಹುದ್ದೆ ಅವಶ್ಯಕತೆ ಇರುವುದೇ?<br>4. ಎ-ಬಿಲ್ ಹಾಗೂ ಬಿ-ಬಿಲ್‌ಗಳ ವಿಳಾಸ ಕನ್ನಡದಲ್ಲಿಯೇ ಇರಬೇಕು.<br>5. ಸಾಗರದಲ್ಲಿ ಅಡಿಕೆ ವ್ಯಾಪಾರಸ್ಥರು ಧರಣಿ ಮಾಡಿದ್ದು, ಸಮಸ್ಯೆಯ ಪರಿಹಾರಕ್ಕೆ ತೀರ್ಮಾನ ತೆಗೆದುಕೊಳ್ಳಲು ಸುಮಾರು ಒಂದೂವರೆ ತಿಂಗಳು ತೆಗೆದುಕೊಂಡಿದ್ದು, ಇದು ರೈತರು ತಂದ ಸರಕಿನ ಖರಿದಿಯಲ್ಲಿ ದರದ ಮೇಲೆ ಪರಿಣಾಮ ಬೀರುವುದಿಲ್ಲವೇ? | 1. ಸಂಘದ ಆಡಳಿತ ಮಂಡಲಿಯು ಸಂಘದ ಮುಖ್ಯ ಕಾರ್ಯನಿರ್ವಾಹಕರ ನೇಮಕಾತಿ ಅಧಿಕಾರವನ್ನು ಹೊಂದಿದ್ದು, ಅದರಂತೆ ಕಾಯ್ದೆ, ನಿಯಮಗಳು, ಉಪವಿಧಿ ಹಾಗೂ ಸಂಘದ ಸಿಬ್ಬಂದಿ ಸೇವಾ ನಿಯಮಗಳನ್ವಯ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ.<br>2. ಈಗಾಗಲೇ ಸಂಘದ ಜವಾನರು, ಅಟೆಂಡರ್, ಹಮಾಲರು, ವಾಹನ ಚಾಲಕರಿಗೆ ಸಮವಸ್ತ್ರ ನೀಡಲಾಗುತ್ತಿದೆ. ಉಳಿದ ಸಿಬ್ಬಂದಿಗಳಿಗೂ ಸಮವಸ್ತ್ರ ನಿಗದಿಪಡಿಸುವ ಕುರಿತು ಪರಿಶೀಲಿಸಲಾಗುವುದು.<br>3. ಸಂಘದ ವ್ಯವಹಾರ ಗಣನೀಯವಾಗಿ ಏರಿಕೆ ಆಗುತ್ತಿರುವುದರಿಂದ ಮತ್ತು ಸಂಘವು ಅಡಿಕೆ ನೇರ ಖರೀದಿ ವ್ಯವಹಾರ ಮಾಡುತ್ತಿರುವುದರಿಂದ ಸಂಘಕ್ಕೆ ಉಪ ಪ್ರಧಾನ ವ್ಯವಸ್ಥಾಪಕರ ಅವಶ್ಯಕತೆ ಇರುತ್ತದೆ.<br>4. ತಮ್ಮ ಸಲಹೆಯು ಉತ್ತಮವಾಗಿದ್ದು, ತಂತ್ರಾಂಶದಲ್ಲಿ ಅಗತ್ಯ ಬದಲಾವಣೆಯ ಅವಶ್ಯಕತೆ ಇರುತ್ತದೆ. ಈ ಕುರಿತು ಪರಿಶೀಲಿಸಲಾಗುವುದು.<br>5. ಇಂತಹ ಸಂದರ್ಭದಲ್ಲಿ ಮಾಮ್‌ಕೋಸ್ ಮತ್ತು ಕ್ಯಾಮ್ಕೋ ರೈತರ ಅಡಿಕೆ ಖರೀದಿ ಮಾಡಿದ್ದು, ಧಾರಣೆಯ ಮೇಲೆ ಯಾವುದೇ ಪರಿಣಾಮ ಬೀರಿರುವುದಿಲ್ಲ. |
| 9 | **ಸತೀಶ್.ವೈ.ವಿ ಬಿನ್ ವೆಂಕಪ್ಪಗೌಡ, ಯಡಮನೆ, ಚಕ್ಕೋಡುಬೈಲು ಪೋಸ್ಟ್, ತೀರ್ಥಹಳ್ಳಿ ತಾಲ್ಲೂಕು, ಷೇರು ಸಂಖ್ಯೆ: 26040** | 1. ಸಂಘದ ಸದಸ್ಯರಿಗೆ ಮೈಲುತುತ್ತವನ್ನು ಸಬ್ಸಿಡಿ ದರದಲ್ಲಿ ನೀಡಬೇಕು.<br>2. ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಕೊಡುವ ಪ್ರತಿಭಾ ಪುರಸ್ಕಾರದಲ್ಲಿ ಶೇ.90ರ ಮೇಲೆ ಫಲಿತಾಂಶ ಬಂದ ಪ್ರತಿ ಮಕ್ಕಳಿಗೂ ಬರೀ ಪ್ರಶಸ್ತಿಪತ್ರ ಕೊಡುವುದರ ಬದಲಾಗಿ ಪ್ರಶಸ್ತಿ ಪತ್ರದೊಂದಿಗೆ ಒಂದು ಸಾವಿರ ರೂಪಾಯಿಗಳ ಪ್ರೋತ್ಸಾಹಧನವನ್ನು ಕೊಡಬೇಕು. | 1. ಸಂಘದಿಂದ ಮೈಲುತುತ್ತಕ್ಕೆ ಸಬ್ಸಿಡಿ ನೀಡುವುದು ಕಾರ್ಯಸಾಧುವಲ್ಲ. ಈಗಾಗಲೇ ತೋಟಗಾರಿಕೆ ಇಲಾಖೆಯು ರೈತರು ಖರೀದಿಸುವ ಮೈಲುತುತ್ತಕ್ಕೆ ಸಬ್ಸಿಡಿ ನೀಡುತ್ತಿದ್ದು, ರೈತರು ಸದರಿ ಸಬ್ಸಿಡಿಯನ್ನು ಪಡೆದುಕೊಳ್ಳುವುದು.<br>2. ಸಾಧಕ-ಬಾಧಕ ಪರಿಶೀಲಿಸಿ ಆಡಳಿತ ಮಂಡಲಿಯಲ್ಲಿ ಚರ್ಚಿಸಿ ಕ್ರಮವಿಡಲಾಗುವುದು. |

| | | | |
|---|---|---|---|
| | | 3. ಸಂಘದ ಮಹಾಸಭೆಯಲ್ಲಿ ಚರ್ಚಿಸುವ ವಿಷಯಗಳನ್ನು ಲಿಖಿತ ಪತ್ರಗಳ ಮೂಲಕ ಕಳುಹಿಸಿದ್ದು, ಆ ಪತ್ರಗಳನ್ನು ಸಂಘದ ಮಹಾಸಭೆಯ ವಾರ್ಷಿಕ ವರದಿ ಪ್ರತಿಯ ವಿಷಯ 14ರ ನಂತರ ಪ್ರಚುರಪಡಿಸಬೇಕು.<br>4. ಸಂಘದಲ್ಲಿ ಈ ಸಾಲಿನಲ್ಲಿ ಷೇರುದಾರರ ಸಮಾಲೋಚನ ಸಭೆಯನ್ನು ನಡೆಸಿರುವುದಿಲ್ಲ. ಇದರಿಂದ ಸಂಘಕ್ಕೆ ಎಷ್ಟು ಹಣ ಉಳಿತಾಯವಾಗಿರುತ್ತದೆ? ಈ ಹಣವನ್ನು ಸದಸ್ಯರಿಗೆ ಸಬ್ಸಿಡಿ ದರದಲ್ಲಿ ಮೈಲುತುತ್ತವನ್ನು ವಿತರಿಸಲು ಬಳಸುವುದು.<br>5. ತೀರ್ಥಹಳ್ಳಿ ಶಾಖೆಯಲ್ಲಿ ಸುಗ್ಗಿಕಾಲದಲ್ಲಿ ಅಡಿಕೆ ವ್ಯಾಪಾರದ ದಿನಗಳಲ್ಲಿ ಹೆಚ್ಚಿಗೆ ಶಾಖಾ ಸಿಬ್ಬಂದಿ ಮತ್ತು ಹೆಚ್ಚಿಗೆ ಹಮಾಲರನ್ನು ನೇಮಿಸಬೇಕು. | 3. ಕಾರ್ಯಸೂಚಿಯನ್ವಯ ಮಹಾಸಭೆಯಲ್ಲಿ ಚರ್ಚಿಸಲಾಗುವುದು.<br>4. ನಿಯಮಗಳನ್ವಯ ಅವಕಾಶ ಇರುವುದಿಲ್ಲ.<br>5. ಈಗಾಗಲೇ ಸುಗ್ಗಿ ಕಾಲಕ್ಕೆ ಅವಶ್ಯಕವಿರುವಷ್ಟು ಹೆಚ್ಚಿಗೆ ಸಿಬ್ಬಂದಿಗಳನ್ನು ಮತ್ತು ಹಮಾಲರನ್ನು ನೇಮಿಸಲಾಗಿರುತ್ತದೆ. |
| 10 | **ಶ್ರೀ ಪಿ.ಎನ್.ರಂಗನಾಥ, ಪಡವಗೋಡು, ಸಾಗರ ತಾಲ್ಲೂಕು, ಷೇರು ಸಂಖ್ಯೆ 12221** | ಸಂಘವು 30000 ಕ್ಕೂ ಹೆಚ್ಚು ಷೇರುದಾರರನ್ನು ಹೊಂದಿದ್ದು, ವಾರ್ಷಿಕ ಸಾಮಾನ್ಯ ಸಭೆ ನಡೆಸುವುದು ಕಷ್ಟವಾಗಿರುವುದರಿಂದ Representative General Body Meeting ನಡೆಸುವುದು ಸೂಕ್ತ. | ಈ ಬಗ್ಗೆ ಸಂಘದ ಉಪವಿಧಿ ತಿದ್ದುಪಡಿ ಮಾಡಬೇಕಾಗಿರುವುದರಿಂದ ಆಡಳಿತ ಮಂಡಳಿ ಸಭೆಯಲ್ಲಿ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಕ್ರಮವಿಡಲಾಗುವುದು. |
| 11 | **ಶ್ರೀ ಆರ್.ವೆಂಕಟರಮಣ ರೆಡ್ಡಿ, ತಾರೀಕಟ್ಟೆ, ಭದ್ರಾವತಿ ತಾಲ್ಲೂಕು, ಷೇರು ಸಂಖ್ಯೆ 38724** | ವೈಜ್ಞಾನಿಕವಾಗಿ ಅಡಿಕೆಯ ಗುಣಮಟ್ಟವನ್ನು ಪರೀಕ್ಷೆ ನಡೆಸಲು ಯಾವ ಸಾಧನಗಳನ್ನು ಬಳಸುತ್ತಿದ್ದೀರಿ | ಅಡಿಕೆಯ ತೇವಾಂಶವನ್ನು ಕಂಡು ಹಿಡಿಯಲು ಮಾಯಿಶ್ಚರ್ ಮೀಟರ್ ಉಪಯೋಗಿಸಬಹುದು ಮತ್ತು ಅಡಿಕೆಯನ್ನು ಕತ್ತರಿಸಿ ನೋಡಿ ಗುಣಮಟ್ಟವನ್ನು ಕಂಡು ಹಿಡಿಯಬಹುದು. ಅನುಭವಿ ಬೆಳೆಗಾರರು ಮತ್ತು ವರ್ತಕರು ಕಣ್ ಅಳತೆಯಲ್ಲಿಯೇ ಗುಣಮಟ್ಟವನ್ನು ಕಂಡು ಹಿಡಿಯುತ್ತಾರೆ. |
| 12 | **ಶ್ರೀ ಅರುಣಾಚಲ ಬಿ ಟಿ<br>ಬೆಳೆಯೂರು, ಷೇರು ಸಂಖ್ಯೆ 42937** | 1. ವ್ಯಾರಾಟ ಮಾಡಿದಾಗ ಕೊರೆ ಚೀಲಗಳನ್ನು ಮೊದಲು ಕೊಡುವ ಅವಕಾಶ ಇರಬೇಕು.<br>2. ಆರ್.ಟಿ.ಜಿ.ಎಸ್‌ಗೆ ಹಣವನ್ನು ಕಡಿತ ಮಾಡಬಾರದು<br>3. ಶೇರುಹಾಕಲು ಆಪ್ಸ್‌ಕೋಸ್ clearance ಕೇಳಬಾರದು<br>4. ಸದಸ್ಯರ ಸಂಖ್ಯೆ 30000 ದಾಟಿರುವುದರಿಂದ ಎಲ್ಲಾ ಸದಸ್ಯರು ಮಹಾಸಭೆಗೆ ಹಾಜರಾಗಲು ಸಾಧ್ಯವಿರುವುದಿಲ್ಲ. ಆದ್ದರಿಂದ ಮುಖ್ಯ ಕಛೇರಿ ಶಿವಮೊಗ್ಗದಲ್ಲಿ ನೇರ ಹಾಜರಾತಿಗೆ ಮತ್ತು ಶಾಖೆಗಳಲ್ಲಿ ವಿಡಿಯೋಕಾನ್ಫರೆನ್ಸ್ ಮೂಲಕ ಹಾಜರಾಗಬಹುದೆಂದು ಬೈಲಾ ತಿದ್ದುಪಡಿ ಮಾಡುಬೇಕು. | 1. ಪರಿಶೀಲಿಸಲಾಗುವುದು.<br>2. ಇದು ಸಂಘದಿಂದ ವಿಧಿಸುವ ಅಲ್ಪ ಪ್ರಮಾಣದ ಸೇವಾ ಶುಲ್ಕವಾಗಿದ್ದು, ಇದರಿಂದ ಸದಸ್ಯರಿಗೆ ಹೆಚ್ಚಿನ ಆರ್ಥಿಕ ಹೊರೆ ಆಗಿರುವುದಿಲ್ಲ.<br>3. ಈಗಾಗಲೇ ಕ್ರ.ಸಂ1(1)ರಲ್ಲಿ ಉತ್ತರಿಸಲಾಗಿದೆ.<br>4. ಈಗಾಗಲೇ ಕ್ರ.ಸಂ.10ರಲ್ಲಿ ಉತ್ತರಿಸಲಾಗಿದೆ |

ಶ್ರೀ ದಿನೇಶ್ ಕೆ ಸಿ ಇವರು ಸಂಸ್ಥೆ 85 ವರ್ಷಕ್ಕೂ ಮಿಗಿಲಾಗಿ ವ್ಯವಹಾರ ನಡೆಸುತ್ತಿದ್ದು, 31000ಕ್ಕಿಂತ ಹೆಚ್ಚಿಗೆ ಸದಸ್ಯರನ್ನು ಹೊಂದಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, ಏಷ್ಯಾಖಂಡದಲ್ಲಿ ಮಾಮ್‌ಕೋಸ್ ಅತಿದೊಡ್ಡ ಸಹಕಾರಿ ಸಂಸ್ಥೆಯಾಗಿದೆ. ಆದರೆ 19 ಜನ ನಿರ್ದೇಶಕರನ್ನು 31000 ಸದಸ್ಯರು ಆಯ್ಕೆಮಾಡುವಂತ ಚುನಾವಣಾ ಪದ್ದತಿ ಜಾರಿಯಲ್ಲಿರುತ್ತದೆ. ಮಾಮ್‌ಕೋಸ್‌ನ ಎಲ್ಲಾ ತಾಲೂಕುಗಳನ್ನು ಒಂದೇ ಕ್ಷೇತ್ರವೆಂದು ಪರಿಗಣಿಸಿ ಚುನಾವಣೆಯನ್ನು ನಡೆಸಲಾಗುತ್ತಿದೆ. ಈ ಚುನಾವಣಾ ಪದ್ಧತಿಯನ್ನು ಬದಲಾಯಿಸಬೇಕು. ಕ್ಷೇತ್ರವಾರು ಚುನಾವಣೆಯನ್ನು ನಡೆಸಲು ಸರ್ಕಾರದಿಂದ ನಿರ್ದೇಶನವನ್ನು ನೀಡುವಂತೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಸಹಕಾರ ಸಚಿವರಿಗೆ ಹಾಗೂ ಸಹಕಾರ ಸಂಘಗಳ ನಿಬಂಧಕರಿಗೆ 17 ಜನ ಶಾಸಕರ ನಿಯೋಗ ಮನವಿಯನ್ನು ಸಲ್ಲಿಸಿದ್ದು, ಸೂಕ್ತ ನಿರ್ದೇಶನ ನೀಡುವುದಾಗಿ ಭರವಸೆ ನೀಡಿರುತ್ತಾರೆ. ಒಂದುವೇಳೆ ನಿರ್ದೇಶನ ನೀಡಿದ್ದಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬೇಕಾಗುತ್ತದೆ. ವಿಶೇಷ ಸಾಮಾನ್ಯ ಸಭೆಗೆ ವೆಚ್ಚಗಳಾಗುವ ಹಿನ್ನೆಲೆಯಲ್ಲಿ ಆಯ–ವ್ಯಯದಲ್ಲಿ ಚುನಾವಣೆಗೆ ತೆಗೆದಿರಿಸಿರುವ ಮೊತ್ತವು ಕಡಿಮೆ ಆಗುತ್ತದೆ. ಆದ್ದರಿಂದ ಹೆಚ್ಚಿಗೆ ಮೊತ್ತವನ್ನು ಕಾಯ್ದಿರಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಶ್ರೀ ಪ್ರಸನ್ನಕುಮಾರ್ ಇವರು ಸಹಕಾರ ಕ್ಷೇತ್ರವೂ ರಾಜಕೀಯ ಹೊರತಾದ ಕ್ಷೇತ್ರವಾಗಿದ್ದು, ಕ್ಷೇತ್ರವಾರು ಚುನಾವಣೆ ಹೆಸರಿನಲ್ಲಿ ರಾಜಕೀಯ ಹಸ್ತಕ್ಷೇಪ ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಮುಂದುವರೆದು ಚುನಾವಣೆ ಬಗ್ಗೆ ಬೈಲಾದಲ್ಲಿ ಉಲ್ಲೇಖವಿದೆ. ಈ ಹಿಂದೆ ಈ ಬಗ್ಗೆ ಚರ್ಚೆಯಾಗಿ ಮಾಮ್‌ಕೋಸ್‌ನ್ನು ಒಂದು ಕ್ಷೇತ್ರವೆಂದು ಪರಿಗಣಿಸಲು ನಿರ್ಣಯಿಸಿ ಅದರಂತೆ ಬೈಲಾ ತಿದ್ದುಪಡಿಯಾಗಿ ಅದರನ್ವಯ ಚುನಾವಣೆ ನಡೆಯುತ್ತಿದೆ. ಚುನಾವಣಾ ಪದ್ಧತಿಯನ್ನು ಮುಖ್ಯಮಂತ್ರಿಯವರು ಅಥವಾ ಸಹಕಾರ ಸಚಿವರು ಮಾಡುವುದು ಅಲ್ಲ. ಕಾಯಿದೆ, ಕಾನೂನು ಇದೆ. ಸರ್ಕಾರದ ನಂತರ ಕೋರ್ಟ್ ಇದೆ. ಬೈಲಾ ತಪ್ಪಿದ್ದಾಗ ಪ್ರಶ್ನೆಮಾಡಬಹುದು ಆದರೆ ಸಂಘದ ಬೈಲಾವನ್ನು ಒಪ್ಪಿಕೊಂಡು ಅನುಮೋದನೆಯನ್ನು ನೀಡಲಾಗಿದೆ. ಬೈಲಾದ ಪ್ರಕಾರ ಚುನಾವಣೆಯನ್ನು ನಡೆಸಿ. ಉಪವಿಧಿ ತಿದ್ದುಪಡಿಗೆ ಪ್ರಸ್ತಾವನೆಯನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಈ ಚರ್ಚೆ ಮಾಡುವುದು ಸೂಕ್ತವಲ್ಲ ಎಂದರು.

ಶ್ರೀ ದಿನೇಶ್ ಕೆ.ಸಿ. ಇವರು ಸರ್ಕಾರ ಹಲವಾರು ತಿದ್ದುಪಡಿಗಳನ್ನು ಜಾರಿಗೊಳಿಸಿದೆ. ಜನರನ್ನು ಕೇಳಿ ತಿದ್ದುಪಡಿಯನ್ನು ಮಾಡಿಲ್ಲ ಎಂದಾಗ ಶ್ರೀ ಪ್ರಸನ್ನಕುಮಾರ್ ಇವರು ಸರ್ಕಾರದ ಕೆಲವು ಆದೇಶದ ಬಗ್ಗೆ ಕೋರ್ಟ್ ಮೆಟ್ಟಿಲೇರಿದ ಪ್ರಕರಣಗಳು ಇದೆ ಎಂದು ಉತ್ತರಿಸಿದರು.

ಶ್ರೀ ಪ್ರಸನ್ನಕುಮಾರ್ ಇವರು ಬೈಲಾ ಪ್ರಕಾರ ಚುನಾವಣೆ ಮಾಡಿ. ಕ್ಯಾಂಪ್ಕೋ ಸಂಸ್ಥೆಯಲ್ಲಿ ಸುಮಾರು 65000 ಜನ ಸದಸ್ಯರಿದ್ದಾರೆ. ಅಲ್ಲಿಯೂ ಸಹ ಇದೇ ರೀತಿ ಚುನಾವಣೆಯನ್ನು ನಡೆಸಲಾಗುತ್ತದೆ ಎಂದರು.
ಶ್ರೀ ಬೆಳ್ಳಯ್ಯ ಇವರು ಆಯಾ ಕ್ಷೇತ್ರದಲ್ಲಿ ಚುನಾವಣೆ ನಡೆದು ಆಯ್ಕೆಗೊಂಡು ನಿರ್ದೇಶಕರಾಗಬೇಕು ಎಂದು ಅಭಿಪ್ರಾಯಪಟ್ಟರು.

ಸದಸ್ಯರೊಬ್ಬರು ಇದು ಸರ್ವಸದಸ್ಯರ ಸಭೆ. ಚುನಾವಣೆ ಬಗ್ಗೆ ಚರ್ಚೆ ಮಾಡಲು ಈ ಸಭೆಯನ್ನು ಏರ್ಪಡಿಸಿಲ್ಲ. ಚುನಾವಣೆ ಬೈಲಾ ಪ್ರಕಾರ ನಡೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಶ್ರೀ ಕೆ.ವಿ.ಗೌಡ ಇವರು ದಿನೇಶರವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ಆ ಪ್ರಕಾರ ಕ್ಷೇತ್ರವಾರು ಚುನಾವಣೆಯನ್ನು ನಡೆಸಬೇಕು ಎಂದರು.

ಮಾನ್ಯ ಅಧ್ಯಕ್ಷರು ಸರ್ಕಾರದ ಮಟ್ಟದಲ್ಲಿ ನಿರ್ದೇಶನ ಬಂದಲ್ಲಿ ಗಮನಿಸಲಾಗುವುದು. ಪ್ರಸ್ತುತ ಬೈಲಾ ತಿದ್ದುಪಡಿ ಇಲ್ಲದೇ ಇರುವುದರಿಂದ ಈ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಚುನಾವಣೆ ಬಗ್ಗೆ ತಿದ್ದುಪಡಿ ಇಲ್ಲದೇ ಇರುವುದರಿಂದ ಅದರ ಬಗ್ಗೆ ಚರ್ಚೆ ಮಾಡುವುದು ಕಾಯಿದೆ ಪ್ರಕಾರ ಸರಿಯಲ್ಲ. ನೀವು ತಿಳಿಸಿದಂತೆ ಸರ್ಕಾರದ ಮಟ್ಟದಲ್ಲಿ ನಿರ್ದೇಶನ ಬಂದ ನಂತರ ಚರ್ಚೆ ಆಗಲಿ. ಈಗ ಚರ್ಚೆ ಬೇಡ ಎಂದು ಹೇಳಿದರು.

ಶ್ರೀ ಲೋಕನಾಥ ಬಿಳಿಸಿರಿ ಇವರು ಕ್ಷೇತ್ರವಾರು ಚುನಾವಣೆಗೆ ವಿರೋಧವಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸದಸ್ಯರ ಅಭಿಪ್ರಾಯಗಳನ್ನು ಸಂಗ್ರಹಿಸಿ ಚುನಾವಣೆಯನ್ನು ನಡೆಸಬೇಕು ವಿನಃ ಸರ್ಕಾರದ ಅಭಿಪ್ರಾಯಗಳನ್ನು ಪಡೆದು ಚುನಾವಣೆಗಳನ್ನು ನಡೆಸಲು ವಿರೋಧವಿದೆ. ಷೇರುದಾರರಿಂದ ಷೇರುದಾರರಿಗಾಗಿ ಷೇರುದಾರರಿಗೋಸ್ಕರ ಇರುವ ಸಂಸ್ಥೆಯಿದು. ಸರ್ಕಾರದ ಒತ್ತಡದಿಂದ ಚುನಾವಣೆಯನ್ನು ನಡೆಸುವುದು ಸರಿಯಲ್ಲ. ಪ್ರಸ್ತುತ ಒಂದೇ ಕ್ಷೇತ್ರವೆಂದು ಪರಿಗಣಿಸಿ ಚುನಾವಣೆಯನ್ನು ನಡೆಸಲಾಗುತ್ತಿದೆ. ಅದೇ ರೀತಿ ನಡೆಸಬೇಕು ಎಂದು ಅಭಿಪ್ರಾಯಪಟ್ಟರು.

ಶ್ರೀ ಪ್ರಸನ್ನಕುಮಾರ ಇವರು ಆರೋಗ್ಯ ವಿಮೆ ಸಂಬಂಧಿಸಿದಂತೆ ಆಡಳಿತ ಮಂಡಲಿಯಲ್ಲಿ ಚರ್ಚೆ ನಡೆಸಿ ಪಾಲಿಸಿ ಡಿಷಿಷನ್ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಶ್ರೀ ಲೋಕನಾಥ ಬಿಳಿಸಿರಿ ಇವರು ಷೇರುದಾರರ ಸಭೆಯನ್ನು ನಡೆಸಬೇಕು ಎಂದು ಸಭೆಯ ಪ್ರಾರಂಭದಿಂದಲೂ ವಿನಂತಿಸುತ್ತಿದೇವೆ. ಆದರೆ ಉತ್ತರ ನೀಡಿಲ್ಲ. ಷೇರುದಾರರ ಸಭೆಯನ್ನು ನಡೆಸುವುದಾಗಿ ತಿಳಿಸಿ ಎಂದು ಕೋರಿದರು. ಶ್ರೀ ರಾಮಸ್ವಾಮಿ ಶೆಟ್ಟಿಗದ್ದೆ ಇವರು ಷೇರುದಾರರ ಸಭೆಯಿಂದ ಅನುಕೂಲವಿದೆ. ಈ ಹಿಂದೆ ನಡೆಸಿದ ಹಾಗೇ ಷೇರುದಾರರ ಸಭೆಯನ್ನು ನಡೆಸಬೇಕು ಎಂದು ವಿನಂತಿಸಿದರು.

ಸದಸ್ಯರೊಬ್ಬರು ಷೇರುದಾರರ ಅಹವಾಲನ್ನು ಕೇಳಲು ಷೇರುದಾರರ ಸಭೆ ಅವಶ್ಯಕ. ಆದ್ದರಿಂದ ಷೇರುದಾರರ ಸಭೆಯನ್ನು ನಡೆಸಿ. ಸರ್ವಸದಸ್ಯರ ಸಭೆಯ ನಿರ್ಣಯಗಳನ್ನು ತಿರಸ್ಕರಿಸಲು ಸರ್ಕಾರ ಅಥವಾ ಸಹಕಾರ ಇಲಾಖೆಗೆ ಇಲ್ಲ ಎಂದು ಕೋರಿದರು.

ಪ್ರತಿ ವರ್ಷದಂತೆ ಷೇರುದಾರರ ಸಭೆ ನಡೆಸಬೇಕೆಂದು ಸಭೆಯಲ್ಲಿದ್ದ ಅನೇಕ ಸದಸ್ಯರು ಹಕ್ಕೋತ್ತಾಯವನ್ನು ಮಾಡಿದರು. ಹಾಗೂ ಈ ಬಗ್ಗೆ ಮಾನ್ಯ ಸಹಕಾರ ಸಚಿವರಿಗೆ ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರಿಗೆ ಪತ್ರವನ್ನು ನೀಡುವಂತೆ ಅಗ್ರಹಿಸಿದರು.

ಮಾನ್ಯ ಅಧ್ಯಕ್ಷರು ನಿಮ್ಮ ಅಭಿಪ್ರಾಯಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸುತ್ತೇವೆ. ಉಪವಿಧಿ ತಿರಸ್ಕೃತಗೊಂಡಿರುವುದರಿಂದ ಮೇಲ್ಮನವಿಯನ್ನು ಸಲ್ಲಿಸಲಾಗಿದೆ. ಇನ್ನೊಮ್ಮೆ ಈ ಬಗ್ಗೆ ಮಾತನಾಡುತ್ತೇವೆ. ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ ಎಂದು ಉತ್ತರಿಸಿದರು.

**ವಿಷಯ 30 : ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಚಾರಗಳು.**

ಶ್ರೀ ಪ್ರಸನ್ನಕುಮಾರ್ ಇವರು ಮುಂದಿನ ಬಾರಿಯಿಂದ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಘದ ಪ್ರಾಂಗಣದಿಂದ ಹೊರಗಡೆ ಅಂದರೆ ಇತರೆ ವಿಶಾಲ ಸ್ಥಳದಲ್ಲಿ ನಡೆಸಿ ಎಂದು ಸಲಹೆ ನೀಡಿದರು.

ಸದಸ್ಯರೊಬ್ಬರು(26826) ಚನ್ನಗಿರಿ ಶಾಖೆಗೆ ವರ್ತಕರ ಕೊರತೆ ಇದೆ ಹಾಗೂ ಧಾರಣೆ ಸಿಗುತ್ತಿಲ್ಲ. ಸರಾಸರಿ ದರ ಹಾಗೂ ಹೆಚ್ಚಿನ ಧಾರಣೆಗೆ ತುಂಬಾ ವ್ಯತ್ಯಾಸವಿದೆ ಎಂದು ಹೇಳಿದಾಗ ಮಾನ್ಯ ಉಪಾಧ್ಯಕ್ಷರು ಪರಿಶೀಲಿಸುವುದಾಗಿ ತಿಳಿಸಿದರು.

ಶ್ರೀ ಶಿವಪ್ಪ ಯು ಎಸ್ ಇವರು ಹೊರಗಡೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವಂತೆ ಅಭಿಪ್ರಾಯಗಳು ಬಂದಿದೆ. ಆದರೆ ಹೊರಗಡೆ ಮಾಡಬೇಡಿ. ಮಾಮ್‌ಕೋಸ್ ಪ್ರಾಂಗಣದಲ್ಲಿಯೇ ಸಭೆಯನ್ನು ನಡೆಸಿ ಎಂದು ಅಭಿಪ್ರಾಯವನ್ನು ತಿಳಿಸಿದರು. ಮಾನ್ಯ ಉಪಾಧ್ಯಕ್ಷರು ಸಾಧಕ–ಭಾದಕಗಳನ್ನು ಗಮನಿಸಿ ಸ್ಥಳವನ್ನು ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

ಸದಸ್ಯರೊಬ್ಬರು ಅಂತ್ಯಸಂಸ್ಕಾರ ನಿಧಿ ಯೋಜನೆಯ ಮೊಬಲಗನ್ನು ಹೆಚ್ಚಿಸುವಂತೆ ಕೋರಿದರು. ಶ್ರೀ ಅರವಿಂದ ಸಿಗದಾಳ್ ಇವರು ಕಸ್ತೂರಿರಂಗನ್ ವರದಿ ಬಗ್ಗೆ ಮಾಮ್‌ಕೋಸ್‌ನಿಂದ ಆಕ್ಷೇಪಣೆ ಸಲ್ಲಿಸಬೇಕು ಎಂದು ಕೋರಿದರು. ಅಕ್ರಮವಾಗಿ ಬರುತ್ತಿರುವ ಅಡಿಕೆಯ ಬಗ್ಗೆ ನಿಯಂತ್ರಣವಾಗಬೇಕು ಎಂದು ತಿಳಿಸಿದರು.

ಸಭೆಗೆ ಆಗಮಿಸಿದ್ದ ಸಂಘದ ಸದಸ್ಯರಾದ ಹಾಗೂ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಶಾಸಕರು ಮತ್ತು ಅಡಿಕೆ ಟಾಸ್ಕ್‌ಫೋರ್ಸ್‌ನ ಮಾಜಿ ಅಧ್ಯಕ್ಷರಾದ ಶ್ರೀ ಆರಗ ಜ್ಞಾನೇಂದ್ರ ಇವರು ಮಾತನಾಡಿ ಅಡಿಕೆಯನ್ನು ಕಾಡು ಬೆಳೆಗೆ ಸೇರಿಸಲಾಗಿತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿ ಕಾಡುಬೆಳೆಯಿಂದ ತೆಗಿಸಲಾಗಿದೆ. ಹಾಗೂ ಅಡಿಕೆಗೆ ಶೇ.18ರಂತೆ ಜಿ.ಎಸ್.ಟಿ ವಿಧಿಸಲಾಗುತ್ತಿತ್ತು ಅದನ್ನು ಶೇ.5ಕ್ಕೆ ಕಡಿಮೆ ಮಾಡಲಾಗಿದೆ. ಹಾಗೂ ಇನ್ನೂ ಕಡಿಮೆ ಮಾಡುವ ಬಗೆಗೆ ಮನವಿಯನ್ನು ಸಲ್ಲಿಸಲಾಗಿದೆ.

ಎಲ್ಲಾ ಸಹಕಾರ ಸಂಸ್ಥೆಗಳು ಸೇರಿ ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಮಹಾಮಂಡಳವನ್ನು ಸ್ಥಾಪಿಸಿದ್ದು ಇದರ ಮೂಲಕ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆ ಹಾಗೆಯೇ ಅಡಿಕೆ ಬೆಳೆಗೆ ಸಂಬಂಧಿಸಿದಂತೆ ಸರ್ಕಾರವು Scientific Committee ಅನ್ನು ರಚಿಸಿದೆ. ಅಡಿಕೆ ಬೆಳೆಗಾರರ ರಕ್ಷಣೆಯನ್ನು ಮಾಡಬೇಕು. ಅಡಿಕೆ ಬೆಳೆಯನ್ನು ಹಾಗೂ ಬೆಲೆಯನ್ನು ಕಾಪಾಡಬೇಕು. ಜನಜಾಗೃತಿ ಆಗಬೇಕು. ನಮ್ಮ ಅಡಿಕೆ ದೇಶಾವಾರಿ ಅಡಿಕೆಯಾಗಿ ಇರಬೇಕು. ಅಡಿಕೆಯ ಗೌರವ ಜಾಸ್ತಿಯಾಗಬೇಕು ಎಂದರು. ಎಲೆಚುಕ್ಕೆ ರೋಗದ ಬಗ್ಗೆ ಸಂಶೋದನೆ ನಡೆಯುತ್ತಿದೆ. ಮಾಮ್‌ಕೋಸ್ ಸಂಸ್ಥೆಯು ಸಂಶೋಧನೆಗೆ ಹಣವನ್ನು ಮೀಸಲಿಡಬೇಕು. ಮಾರುಕಟ್ಟೆಯಲ್ಲಿ ಧಾರಣೆ ಕುಸಿತ ಕಂಡಾಗ ಮಾಮ್‌ಕೋಸ್ ಮತ್ತು ಕ್ಯಾಂಪ್ಕೋ ಸಂಸ್ಥೆಯವರು ಧಾರಣೆಯನ್ನು ನೀಡಿ ಅಡಿಕೆ ಬೆಳೆಗಾರರ ರಕ್ಷಣೆಯನ್ನು ಮಾಡಿದರು. ಅಡಿಕೆ ಬೆಳೆಗಾರರ ರಕ್ಷಣೆಗೆ ಮಾಮ್‌ಕೋಸ್ ಸದಾ ಕಂಕಣಬದ್ಧವಾಗಿದೆ. ಪಾರದರ್ಶಕವಾದ ಆಡಳಿತ ಮೆಚ್ಚುಗೆ ನೀಡಿದೆ ಎಂದು ತಿಳಿಸಿದರು.

**ವಂದನಾರ್ಪಣೆ**

ಸಂಘದ ನಿರ್ದೇಶಕರಾದ ಶ್ರೀ ಸುರೇಶಚಂದ್ರ ಎ ಇವರು ವಂದನಾರ್ಪಣೆಯಲ್ಲಿ – ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಿಗೆ, ಸಭೆಗೆ ಆಗಮಿಸಿದ ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರರವರಿಗೆ, ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸೂಕ್ತ ಸಲಹೆಗಳನ್ನು ನೀಡಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಸಂಘದ ಸರ್ವ ಸದಸ್ಯರಿಗೆ, ಸಂಘದ ಮಾನ್ಯ ಉಪಾಧ್ಯಕ್ಷರಿಗೆ, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳಿಗೆ, ವ್ಯವಸ್ಥಾಪಕ ನಿರ್ದೇಶಕರಿಗೆ, ಸಂಘದ ಲೆಕ್ಕಪರಿಶೋಧನೆ ಮಾಡಿದ ಸನ್ನದು ಲೆಕ್ಕಪರಿಶೋಧಕರಿಗೆ, ಸಂಘದ ಮಾಜಿ ಉಪಾಧ್ಯಕ್ಷರು, ನಿರ್ದೇಶಕರಿಗೆ, ಸಂಘದ ಸಿಬ್ಬಂದಿಗಳಿಗೆ, ಅಂಚೆ ಇಲಾಖೆಯವರಿಗೆ, ಯಂತ್ರಗಳ ಪ್ರದರ್ಶನದ ವ್ಯವಸ್ಥೆ ಮಾಡಿದವರಿಗೆ, ಶಾಮಿಯಾನ–ಮೈಕ್ ವ್ಯವಸ್ಥೆ ಮಾಡಿದವರಿಗೆ, ಉಟೋಪಚಾರದ ವ್ಯವಸ್ಥೆ ಮಾಡಿದವರಿಗೆ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಸಹಿ/–
**ಗುರುದತ್ತ ಹೆಗಡೆ,** ಐ.ಎ.ಎಸ್.
ಶಿವಮೊಗ್ಗ ಜಿಲ್ಲಾಧಿಕಾರಿಗಳು
ಹಾಗೂ ಸಂಘದ ಅಧ್ಯಕ್ಷರು

## ದಿನಾಂಕ 23 ಸೆಪ್ಟಂಬರ್ 2024ರಂದು ನಡೆದ ಸಂಘದ 2023-24ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮಗಳ ವಿವರ

1. ಹಿಂದಿನ ಸಾಮಾನ್ಯ ಸಭೆಯ ನಡಾವಳಿಯನ್ನು ಲೆಕ್ಕಪರಿಶೋಧನಾ ವರದಿ ಪುಸ್ತಕದಲ್ಲಿ ಮುದ್ರಿಸಲಾಗಿದೆ.
2. ಪೆಟ್ರೋಲ್ ಬಂಕ್ ತೆರೆಯುವ ಬಗ್ಗೆ ಸ್ಥಳದ ಲಭ್ಯತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು.
3. ಸಾಧಕ-ಬಾಧಕಗಳನ್ನು ಪರಿಶೀಲಿಸಿ ಶೀಥಲೀಕರಣ ಘಟಕ ತೆರೆಯುವ ಪ್ರಕ್ರಿಯೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ.
4. 2024-25ನೇ ಸಾಲಿನಲ್ಲಿ ಟೆಂಡರ್ ಮೂಲಕ ಶಾಖೆಗಳಲ್ಲಿ 72052.791 ಕ್ವಿಂಟಾಲ್ ಅಡಿಕೆಯನ್ನು ಹಾಗೂ ನೇರ ಖರೀದಿ ಮೂಲಕ 22215.37 ಕ್ವಿಂಟಾಲ್ ಅಡಿಕೆಯನ್ನು ಮತ್ತು ಬೇರೆ ಸಹಕಾರ ಸಂಘಗಳಲ್ಲಿ 45236.638 ಕ್ವಿಂಟಾಲ್ ಅಡಿಕೆಯನ್ನು ಖರೀದಿಸಿದ್ದು, 121721.735 ಕ್ವಿಂಟಾಲ್ ಅಡಿಕೆಯನ್ನು ಮಾರಾಟ ಮಾಡಲಾಗಿರುತ್ತದೆ. ಹಾಗೆಯೇ, ಒಟ್ಟು 209.529 ಕ್ವಿಂಟಾಲ್ ಕಾಳುಮೆಣಸನ್ನು ಖರೀದಿಸಿದ್ದು, 119.00 ಕ್ವಿಂಟಾಲ್ ಕಾಳುಮೆಣಸನ್ನು ಮಾರಾಟ ಮಾಡಲಾಗಿರುತ್ತದೆ.
5. ಷೇರುದಾರರ ಸಭೆಯ ಬಗ್ಗೆ ಉಪವಿಧಿ ತಿದ್ದುಪಡಿ ತಿರಸ್ಕರಿಸಿರುವ ಕುರಿತು ಮಾನ್ಯ ಸಹಕಾರ ಸಂಘಗಳ ನಿಬಂಧಕರ ನ್ಯಾಯಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿಗೆ ಸಂಬಂಧಿಸಿದಂತೆ ಮಾನ್ಯ ನಿಬಂಧಕರ ನ್ಯಾಯಾಲಯವು ಪ್ರಸ್ತಾವನೆಯಲ್ಲಿ 'ಯಾವುದೇ ಹೆಸರಿನಿಂದ ಕರೆಯಲ್ಪಡುವ' ಎಂಬ ಪದವನ್ನು ಕೈ ಬಿಟ್ಟು ಪುನಃ ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿರುತ್ತದೆ. ಅದರನ್ವಯ ಉಪವಿಧಿ ತಿದ್ದುಪಡಿ ಪ್ರಸ್ತಾವನೆಯನ್ನು ಮಂಡಿಸಿದೆ.
6. **'ಆರೋಗ್ಯ ವಿಮಾ ಯೋಜನೆ'** ಅಡಿ ಸದಸ್ಯರು ಮತ್ತು ಅವರ ಕುಟುಂಬದವರು ಸೇರಿ ಒಟ್ಟು 14 ಪ್ರಕರಣಗಳಲ್ಲಿ ಕ್ಲೈಂ ಬಾರದಿರುವುದರಿಂದ ಈ ಬಗ್ಗೆ ಸಂಘದಿಂದಲೇ **'ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ'**ದಲ್ಲಿ ರೂ.12.07 ಲಕ್ಷ ಮೊತ್ತಕ್ಕೆ ದಾವೆಯನ್ನು ದಾಖಲಿಸುತ್ತದೆ.
7. ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ದಿನಾಂಕ 27 ಜೂನ್ 2024ರ ಆದೇಶದ ಮೇರೆಗೆ ಸಂಘದಲ್ಲಿ ಜಾರಿಗೊಳಿಸಿದ ಏಕಕಾಲಿಕ ಸಾಲ ತೀರುವಳಿ ಯೋಜನೆಯಡಿಯಲ್ಲಿ ಒಟ್ಟು 312 ಪ್ರಕರಣಗಳಲ್ಲಿ 82 ಪ್ರಕರಣಗಳು ಜಮಾ ಬಂದಿರುತ್ತದೆ.
8. ಸಾಗರ, ತೀರ್ಥಹಳ್ಳಿ ಮತ್ತು ಹೊಸನಗರ ಶಾಖೆಗಳಲ್ಲಿ ಅಡಿಕೆ ಸ್ವಚ್ಚಗೊಳಿಸುವ ಯಂತ್ರವನ್ನು ಅಳವಡಿಸಲಾಗಿದೆ.
9. ಸದಸ್ಯರಿಗೆ ಅನುಕೂಲವಾಗುವಂತೆ ಇಫ್ಕೋ ಕಂಪನಿಯ ಡೀಲರ್‌ಶಿಪ್ ಪಡೆದು ಕರಗುವ ರಸಗೊಬ್ಬರವನ್ನು ಹಾಗೂ ಕೃಷಿಗೆ ಅವಶ್ಯವಿರುವ ಇನ್ನಿತರ ಉತ್ಪನ್ನಗಳನ್ನು ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡುವ ಕುರಿತಾದ ಕ್ರಮವು ಪ್ರಗತಿಯಲ್ಲಿರುತ್ತದೆ.
10. ಸಂಘದಿಂದ ಉತ್ತಮ ಗುಣಮಟ್ಟದ ಬೇವಿನ ಹಿಂಡಿಯನ್ನು ಶ್ರೀ ಕಲ್ಲೇಶ್ವರ ಕಾಯರ್ ಇಂಡಸ್ಟ್ರೀ & ಅರ್ಗ್ಯಾನಿಕ್ ಮ್ಯಾನ್ಯುರ್, ಅಜ್ಜಂಪುರ ಇವರಿಂದ ಖರೀದಿಸಿ, ಕೈಗೆಟುಕುವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.
11. ಶಿವಮೊಗ್ಗ ಮತ್ತು ತೀರ್ಥಹಳ್ಳಿಗಳಲ್ಲಿ ಸಂಘದ ಕಾರ್ಯಚಟುವಟಿಕೆಗೆ ಅನುಕೂಲವಾಗುವಂತಹ ನಿವೇಶನ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
12. ಸಂಘದಲ್ಲಿ ಖಾಲಿ ಇದ್ದ ವಿವಿಧ ದರ್ಜೆಯ 19 ಹುದ್ದೆಗಳಿಗೆ ನಿಯಮಾನುಸಾರ ಮತ್ತು ಪಾರದರ್ಶಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.
13. ದಿನಾಂಕ 11 ನವೆಂಬರ್ 2024ರಂದು ಜಯಪುರದಲ್ಲಿ ಸಂಘದ ಶಾಖೆ ಮತ್ತು ನೇರ ಖರೀದಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.
14. ಸಂಘದ 2024-25ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಮೆ. ಮಧುಕರ ಹೆಗಡೆ ಅಂಡ್ ಕಂ., ಸನ್ನದು ಲೆಕ್ಕಪರಿಶೋಧಕರು ಬೆಂಗಳೂರು ಇವರಿಗೆ ನೀಡಲಾಗಿದೆ.
15. ಕಳೆದ 5 ವರ್ಷಗಳಿಂದ ಅಂದರೆ 2020-21 ನೇ ಸಾಲಿನಿಂದ 2024-25 ನೇ ಸಾಲಿನವರೆಗೆ ಸಂಘದಲ್ಲಿ ವ್ಯವಹಾರ ನಡೆಸದ ಒಟ್ಟು 5048 ಜನ ಸದಸ್ಯರಿಗೆ ನೋಂದಾಯಿತ ಅಂಚೆ ಮೂಲಕ ತಿಳಿವಳಿಕೆಯನ್ನು ನೀಡಲಾಗಿದೆ.
16. ದಿನಾಂಕ 04 ಫೆಬ್ರವರಿ 2025ರಂದು ಆಡಳಿತ ಮಂಡಲಿ ಚುನಾವಣೆಯನ್ನು ನಿಯಮಾನುಸಾರ ನಡೆಸಲಾಗಿರುತ್ತದೆ.
17. ಪವರ್ ಸ್ಪ್ರೇಯರ್ ಖರೀದಿಗೆ ರೂ.5000/-ಗಳ ಸಹಾಯಧನವನ್ನು ನೀಡಲಾಗುತ್ತಿದೆ.

*****

ಮುದ್ರಿತ ಪ್ರತಿ

ತೆರೆದ-ಅಂಚೆ

ಸಹಕಾರ ಗೆಲ್ಗೆ
ಸಹಕಾರ ಬಾಳ್ಗೆ

ಇವರಿಗೆ,

ಇವರಿಂದ

**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ**

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ - 577 204

ಸ್ಥಾಪನೆ: 1939

Digantha Mudrana Ltd. | 9686675271